AR
318

# JĀTAKA TILAKAM

*of*

## SRĪDHARĀCHĀRYA

K
616

K. 616

UNIVERSITY OF MADRAS

1955

K 616

Acc. 12774

GOVERNMENT ORIENTAL MANUSCRIPTS LIBRARY
26 MAR 1957
MADRAS

MADRAS UNIVERSITY KANNADA SERIES No. 13

*General Editor:*
M. MARIAPPA BHAT, M. A., L. T.

# JĀTAKA TILAKAM

*of*

## SRĪDHARĀCHĀRYA

*EDITORS*
M. Mariappa Bhat, M.A., L.T.
&
M. Govinda Rao, M.A., B.O.L.

K. 616

UNIVERSITY OF MADRAS

1955

ಯು. ಆರ್. ಶೆಣೈ ಎಂಡ್ ಸನ್ಸ್,
ಸ್ಟೇಶನರಿ ಮತ್ತು ಪುಸ್ತಕ ವ್ಯಾಪಾರಿಗಳು,
[illegible], ಮಂಗಳೂರು.

ಮದ್ರಾಸು ಯುನಿವರ್ಸಿಟಿ ಕರ್ಣಾಟಕ ಗ್ರಂಥಮಾಲೆ ಸಂಖ್ಯೆ ೧೩

ಶ್ರೀಧರಾಚಾರ್ಯ ವಿರಚಿತಂ

# ಜಾತಕತಿಲಕಂ

ಸಂಪಾದಕರು:

ಎಂ. ಮರಿಯಪ್ಪಭಟ್ಟ, ಎಂ. ಎ., ಎಲ್. ಟಿ.

ಮತ್ತು

ಎಂ. ಗೋವಿಂದರಾವ್, ಎಂ. ಎ., ಬಿ. ಒ. ಎಲ್.

೧೯೫೫

Printed at Sharada Press, Mangalore-1

# ವಿಷಯಸೂಚಿ

GOVERNMENT ORIENTAL MANUSCRIPTS
26 MAR 1957
MADRAS
616

1. Preface . . . . . vii–xi
2. ಮುನ್ನುಡಿ . . . . . xiii–xxv
3. ಪೀಠಿಕಾ ಪ್ರಕರಣ . . . . . ೧—೩
4. ಸಂಜ್ಞಾಪ್ರಕರಣ . . . . . ೪—೭
5. ಬಲಾಬಲಪ್ರಕರಣ . . . . . ೮—೧೧
6. ಗರ್ಭಪ್ರಕರಣ . . . . . ೧೨–೧೪
7. ಜನ್ಮಪ್ರಕರಣ . . . . . ೧೫–೨೦
8. ವಿಯೋನಿಜನ್ಮಪ್ರಕರಣ . . . . ೨೧–೨೨
9. ಅರಿಷ್ಟಯೋಗ ಪ್ರಕರಣ . . . . ೨೩–೩೦
10. ಅರಿಷ್ಟಭಂಗ ಪ್ರಕರಣ . . . . ೩೧–೩೩
11. ಆಯುರ್ದಾಯನಿರ್ಣಯ ಪ್ರಕರಣ . . . ೩೪–೩೬
12. ದಶಾಂತರ್ದಶಾ ಪ್ರಕರಣ . . . . ೩೭–೪೦
13. ಅಷ್ಟಕವರ್ಗ ಪ್ರಕರಣ . . . . ೪೧–೪೮
14. ಕರ್ಮಜೀವನ ಪ್ರಕರಣ . . . . ೪೯–೫೦
15. ರಾಜಯೋಗ ಪ್ರಕರಣ . . . . ೫೧–೫೫
16. ನಾಭಸಯೋಗ ಪ್ರಕರಣ . . . . ೫೬–೫೮
17. ಚಂದ್ರಯೋಗ ಪ್ರಕರಣ . . . . ೫೯–೬೦
18. ದ್ವಿತ್ರಿಯೋಗ ಪ್ರಕರಣ . . . . ೬೧–೬೨
19. ಪ್ರವ್ರಾಜ್ಯಯೋಗ ಪ್ರಕರಣ . . . . ೬೩
20. ರಾಶಿ ಪ್ರಕರಣ . . . . . ೬೪–೬೮
21. ಲಗ್ನಭಾವ ಪ್ರಕರಣ . . . . . ೬೯–೭೧
22. ದ್ರೇಕ್ಕಾಣ ಪ್ರಕರಣ . . . . . ೭೨–೭೬
23. ದೃಷ್ಟಿ ಪ್ರಕರಣ . . . . . ೭೭–೮೦
24. ಅರಿಷ್ಟಯೋಗ ಪ್ರಕರಣ . . . . ೮೧–೮೪
25. ಸ್ತ್ರೀಜಾತಕಫಲ ಪ್ರಕರಣ . . . . ೮೫–೮೮
26. ನಿರ್ಯಾಣ ಪ್ರಕರಣ . . . . . ೮೯–೯೨
27. ನಷ್ಟಜಾತಕ ಪ್ರಕರಣ . . . . . ೯೩–೯೯
28. ಅನುಬಂಧ–ಶಬ್ದಸೂಚಿ . . . . 1–14

# PREFACE

The astronomical science of the ancient Hindus was wholly centred in astrology which was considered to be the last of the Vedangas. The practical object of this science was[1] "to convey such knowledge of the heavenly bodies as was necessary for fixing the days and hours of the Vedic sacrifices." During the third century A. D., the scientific period of Indian astronomy seems to have commenced and as a result of this, we have[2] "a considerable number of treatises called Siddhantas. These show that the new Greek spirit with its consciousness of a new order of the Zodiac replacing the system of the nakshatras has been at work." There were several stars in the galaxy of the Indian astronomical system. The earliest and the best known astronomer of this age was Aryabhata, who was born about A. D. 476, lived in Kusumapura or Pataliputra and composed his work at the early age of twenty-three. Of his writings[3] "we possess at present only a few sorry scraps, though possibly fuller fragments may yet in course of time be recovered. He appears to have been a contemporary of Pulis'a; and in any case, he was indebted to Greek influence, since he reckons by the zodiacal signs." There is another school of oriental scholars who are of the opinion that the Hindus had obtained accurate astronomical knowledge even in the Vedic Age. Baily says that as far back as 3000 B. C. accurate astronomical observations had been made in India. In a learned article in the Indian Historical Quarterly, Vol. IV pages 68-77, Sri Sukumar Ranjan Das has clearly shown that "Hindu astronomy is in no way indebted to Greek astronomy and that the two were independent astronomical systems."

Arya-Siddhanta, a larger work of Aryabhata, containing eighteen chapters, seems to be a subsequent production. In his works, he maintained that the earth was spherical and rotated on its axis. There were five other Siddhantas namely—Brahma Siddhanta,

1. History of Ancient Sanskrit Literature. By Max Muller.
2. History of Indian Literature. By Herbert H. Gowen.
3. " " " By Weber.

Saura Siddhanta, Paulis'a Siddhanta, Romaka Siddhanta and Vasista Siddhanta-whose authors[1] "are looked upon as ancient astronomers." All these latter works are said to be based upon Aryabhata's system, but none of them seems to have survived. Brahmagupta, the author of Brahma Siddhanta and other works, was born about A. D. 598. Pulis'a, the author of Paulis'a Siddhanta, in opposition to Aryabhata seems to have reckoned the day at midnight. Sris'ena and Vishnuchandra are said to be the authors of Romaka Siddhanta and Vasista Siddhanta respectively.

[2]"The Indian astronomers regularly speak of the Yavanas as their teachers; but whether this also applies to Paras'ara who is reputed to be the oldest Indian astronomer, is still uncertain. To judge from the quotations, he computes by the lunar mansions and would seem accordingly to stand upon an independent footing. But of Garga, who passes for the next oldest astronomer, an oft-quoted verse has come down to us in which he extols the Yavanas on account of their astronomical knowledge. The epic tradition again gives as the earliest astronomer the Asura Maya and asserts that to him the Sun-God himself imparted the knowledge of the stars."

Varaha-Mihira, one of the brightest stars in the horizon of Indian astronomy is said to have flourished in A. D. 504. He calls himself the son of Adityadasa and a native of Avanti. In his works he has used a number of Greek words, which clearly shows that he had come under the Greek influence. [3]"One of his works the Hora-sastra bears a Greek title and in it he not only gives the entire list of the Greek names of the Zodiacal signs and planets but he also directly employs several of the latter—namely Ara, Asphujit and Kona side by side with the Indian names and just as frequently as he does these. The signs of the Zodiac, on the contrary, he usually designates by their Sanskrit names, which are translated from the Greek. He has in constant use, too, the following technical terms, all of which are found employed in the same sense, viz. drikana, lipta, anapha, sunapha, durudhara, kemadruma, vesi, kendra, apoklima, panaphara, trikona, hibuka, jamitra etc.

1. History of Indian Literature. By Weber.
2. " " " "
3. " " " "



Although most of these names denote astrological relations, still, on the other hand, in the division of the heavens into Zodiacal signs, decani and degrees, they comprise all that the Hindus lacked and that was necessary to enable them to cultivate astronomy in a scientific spirit. And accordingly, we find that they turned these Greek aids to good account, rectifying in the first place, the order of their lunar asterisms, which was no longer in accordance with reality so that the two which came last in the old order occupy the two first places in the new; and even, it would seem, in some points independently advancing astronomical science further than the Greeks themselves did. Their fame spread in turn to the West; and the Andubarius, whom the Chronicon Paschale places in primeval times as the earliest Indian astronomer is doubtless none other than Aryabhata, the rival of Pulis'a, who is likewise extolled by the Arabs under the name Arjabahr. For, during the eighth and the ninth centuries, the Arabs were, in astronomy, the disciples of the Hindus from whom they borrowed the lunar mansions in their new order and whose siddhantas they frequently worked up and translated in part under the supervision of Indian astronomers themselves, whom the Khalifs of Bagdad etc. invited to their courts."

After Varaha-Mihira, Brahma-Gupta (664 A. D.) and Bhaskara (1114 A. D.) distinguished themselves in the field of astronomy. Bhaskara is the last of the Indian astronomers and after his day, no further progress was made in the astronomical science of the Hindus.

From what has been said above, we learn that the ancient Indian astronomical science had its origin in astrology and that, with the impact of Greek influence, it developed on a scientific basis and flourished for about eight hundred years. It contributed its share to the development of the astronomical science of the Arabs and finally, after the death of Bhaskara, its further progress seems to have been arrested and it once again became centred in astrology from which it had originally sprung.

Among the scientific works on astrology in Kannada, Sridharacharya's Jataka Tilakam occupies the first and foremost place. No earlier work on this subject in Kannada has been traced so far.

Sridharacharya has largely followed Varaha-Mihira's Brihat-Jatakam. He has written this work in verse and the easy flow of his language makes him a popular poet. Being a devout Jaina, he seems to have written the story of Chandraprabha as a Purana.[1] This work is not available now, but we learn a good deal about the poet from his available work Jataka Tilakam.

Narugunda in Beluvala Nadu is said to be his native place. He calls himself as the best among the Brahmins. He has praised some of the earlier Kannada poets. Though he is much indebted to Varaha-Mihira, he does not say a word about him. On the other hand, he praises Aryabhata, who is considered to be the father of Indian astronomy. The poet seems to have had many titles such as Budhamitra, Gadyapadya Vidyadhara, Samyaktva Ratnakara etc. He has given his date as Saka 971 or 1049 A.D. and he has mentioned the name of Chalukya Ahavamalla as the ruling king at his time.

Sridharacharya's Jataka Tilakam contains 24 chapters. As already stated, he closely follows Varaha-Mihira's Brihat Jatakam. Some examples can be cited here to prove this statement. Varaha-Mihira explains the importance of the science of astrology in verse 3, chapter 1 of his work. The same idea is conveyed by Sridharacharya in verse 19 of the introductory portion of his work. The description of Kalapurusha given by Varaha-Mihira in chapter 1, verse 4, has been literally translated by our poet in the very first verse of the first chapter. Such similarities can be had in large numbers. It clearly proves that Sridhara is very much indebted to Varaha-Mihira. Whether he had access to any of the works of Aryabhata whom he has praised in Jataka Tilakam is doubtful. In the 10th chapter, there are some Sanskrit slokas which are not available in Brihat Jatakam. This leads us to believe that our author has been indebted to some other works also for writing his Jataka Tilakam. At present, we are unable to know the source or sources whence he has taken these quotations.

Our only aim in bringing out this publication is that such an old and important book on a scientific subject should not be lost to the Kannada Public. When we took up the work for publication, we had only one manuscript on hand—the one that had been

1. Jataka Tilakam (Chapter 24, Verse 40).



prepared by the Department. As this copy was found imperfect and incomplete, we made an attempt to get another manuscript of the work and fortunately for us, we got one from Sri T. S. Shama Rao, M. A. of Mysore, which was of great help to us to fill up some gaps and correct some mistakes. We tender our heart-felt thanks to Sri Shama Rao for his timely help. Both the manuscripts seem to have been copied from the same source, having the same reading throughout, except a few variations here and there. We have given in the text what we consider to be the best reading and any alternate reading has been given as the footnote.

We take this opportunity to thank the Manager, Sharada Press, Mangalore for his kind cooperation and prompt work, but for which it would not have been possible for us to bring out this publication in such a short time and in such a beautiful form. Finally, we offer our sincere thanks to the authorities of the Madras University, for allowing us to add this work to the Madras University Kannada Series.

MADRAS,
30–6–1955.

*M. Mariappa Bhat*
AND
*M. Govinda Rao*

616

# ಮುನ್ನುಡಿ

ಜ್ಯೋತಿಷ್ಯವು ವೇದಾಂಗಗಳಲ್ಲಿ ಒಂದಾಗಿದ್ದು, ಪ್ರಾಚೀನಕಾಲದಿಂದಲೂ ಹಿಂದೂ ಜನರಿಗೆ ಅತಿ ಪವಿತ್ರವಾದ ಶಾಸ್ತ್ರಗಳಲ್ಲಿ ಒಂದಾಗಿದೆ. ಪೂರ್ವಕಾಲದಲ್ಲಿ ಖಗೋಳ ಶಾಸ್ತ್ರಕ್ಕೂ ಜ್ಯೋತಿಷ್ಯಕ್ಕೂ ನಿಕಟ ಸಂಬಂಧವಿದ್ದಿತು. ಆದುದರಿಂದಲೇ ಜ್ಯೋತಿಷ್ಯವು ಅಷ್ಟು ಅಭಿವೃದ್ಧಿಗೆ ಬರಲು ಕಾರಣವಾಯಿತು. ಯಾವ ಶುಭಕಾರ್ಯವನ್ನು ಆರಂಭಿಸ ಬೇಕಾದರೂ, ಗ್ರಹಗತಿಗಳನ್ನು ತಿಳಿದು, ಮುಹೂರ್ತವನ್ನು ನಿಶ್ಚೈಸುವುದು ಅವಶ್ಯವಾಗಿತ್ತು. ಆದುದರಿಂದಲೇ ಈ ಜ್ಯೋತಿಷ ವಿದ್ಯೆಯು ಪ್ರಾಚೀನ ಹಿಂದೂಗಳಿಗೆ ಅತಿ ಮುಖ್ಯವಾಗಿತ್ತು. ಕ್ರಿ. ಶ. ಸುಮಾರು ಮೂರನೆಯ ಶತಕದಲ್ಲಿ ಶಾಸ್ತ್ರೀಯವಾದ ಖಗೋಳವಿಜ್ಞಾನವು ಹಿಂದೂದೇಶದಲ್ಲಿ ಅಭಿವೃದ್ಧಿಗೆ ಬರಲಾರಂಭವಾಯಿತು. ಇದರ ಪರಿಣಾಮವಾಗಿ ಸಿದ್ಧಾಂತಗಳೆಂದು ಕರೆಯಲ್ಪಡುವ ಹಲವು ಗ್ರಂಥಗಳು ಬರೆಯಲ್ಪಟ್ಟವು. ಇವುಗಳಲ್ಲಿ ಗ್ರೀಕರ ಪ್ರಭಾವವು ಕಂಡುಬರುತ್ತದೆ. ಅದುವರೆಗೆ ಪ್ರಚಾರದಲ್ಲಿದ್ದ ನಕ್ಷತ್ರ ಸಮೂಹಗಳ ಆಧಾರದಿಂದ ಕಾಲಗಣನೆ ಮಾಡುವುದಕ್ಕೆ ಬದಲಾಗಿ ಹೊಸತಾದ ಸೂರ್ಯಪಥದ ಆಧಾರದಿಂದ ಕಾಲಗಣನೆ ಮಾಡಿರುವುದೇ ಇದಕ್ಕೆ ಸಾಕ್ಷಿ. ಈ ಮತವನ್ನು ಎಲ್ಲರೂ ಒಪ್ಪುವುದಿಲ್ಲ. ಪ್ರಾಚ್ಯವಿದ್ವಾಂಸರಲ್ಲಿ ಕೆಲವರು ಇದನ್ನು ಬಹಳವಾಗಿ ವಿರೋಧಿಸುತ್ತಾರೆ. ಪ್ರಾಚೀನ ಹಿಂದೂಗಳು ವೇದಕಾಲದಲ್ಲಿಯೇ ಖಗೋಳ ವಿಜ್ಞಾನದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದಿದ್ದರೆಂದು ಅವರ ಅಭಿಪ್ರಾಯ. ಇಂಥವರಲ್ಲಿ ಮ್ಯಾಕ್ಸ್‌ಮುಲ್ಲರ್, ಬೆಯ್ಲಿ ಮುಂತಾದವರು ಪ್ರಮುಖರಾಗಿದ್ದಾರೆ. ಬೆಯ್ಲಿಯವರ ಅಭಿಪ್ರಾಯದ ಪ್ರಕಾರ ಕ್ರಿ. ಪೂ. ಸುಮಾರು ೩೦೦೦ ವರ್ಷಗಳ ಹಿಂದೆಯೇ ಹಿಂದೂಗಳು ಖಗೋಳಶಾಸ್ತ್ರಸಂಪನ್ನರಾಗಿದ್ದರೆಂದು ತಿಳಿಯುತ್ತದೆ. ಸುಕುಮಾರ್ ರಂಜನ್ ದಾಸ್ ಎಂಬವರು ವಿದ್ವತ್ಪೂರ್ಣವಾದ ಒಂದು ಲೇಖನದಲ್ಲಿ[1] ಹಿಂದೂಗಳು ಖಗೋಳಶಾಸ್ತ್ರ ಪರಿಜ್ಞಾನದಲ್ಲಿ ಗ್ರೀಕರಿಗೆ ಸ್ವಲ್ಪವೂ ಋಣಿಗಳಾಗಿಲ್ಲವೆಂದು ಸಾಧಿಸಿದ್ದಾರೆ.

ಹಿಂದಿನ ಕಾಲದಲ್ಲಿ ಖಗೋಳ ಸಿದ್ಧಾಂತದಲ್ಲಿ ಹೆಸರನ್ನು ಪಡೆದ ಹಲವು ವಿದ್ವನ್ಮಣಿಗಳು ನಮ್ಮ ದೇಶದಲ್ಲಿ ರಾರಾಜಿಸುತ್ತಿದ್ದರು. ಆರ್ಯಭಟನೆಂಬಾತನು ಇವರಲ್ಲಿ ಮೊತ್ತ ಮೊದಲಿಗನೂ ಬಹು ಪ್ರಸಿದ್ಧನೂ ಆಗಿದ್ದನು. ಅವನು ಕ್ರಿ. ಶ. ಸುಮಾರು ೪೭೬ರಲ್ಲಿ ಹುಟ್ಟಿದನೆಂದೂ, ಕುಸುಮಪುರವೆಂದು ಪ್ರಸಿದ್ಧವಾದ ಪಾಟಲೀಪುತ್ರದಲ್ಲಿ ಜೀವಿಸಿದ್ದನೆಂದೂ, ಅತಿ ಚಿಕ್ಕ ಪ್ರಾಯದಲ್ಲಿ, ಅಂದರೆ ಅವನಿಗೆ ಕೇವಲ ಇಪ್ಪತ್ತಮೂರು ವರ್ಷ ಪ್ರಾಯವಾಗುವಾಗಲೇ ಗ್ರಂಥರಚನೆಗೆ ಆರಂಭಿಸಿದನೆಂದೂ ತಿಳಿದುಬರುತ್ತದೆ. ಆರ್ಯ ಸಿದ್ಧಾಂತವೆಂಬುದು ಅವನ ಬೃಹದ್ಗ್ರಂಥ. ಅದರಲ್ಲಿ ಹದಿನೆಂಟು ಅಧ್ಯಾಯಗಳುಂಟು. ಅವನ ಗ್ರಂಥಗಳಲ್ಲಿ ಅವನು ಭೂಮಿಯ ಆಕಾರವು ಉರುಟಾಗಿರುವುದೆಂದೂ, ಅದು ತನ್ನ ಅಕ್ಷದ ಸುತ್ತು ತಿರುಗುತ್ತಿರುವುದೆಂದೂ ಪ್ರತಿಪಾದಿಸಿರುವನು. ಅವನ ಸಮಕಾಲೀನನೂ, ಪ್ರತಿಸ್ಪರ್ಧಿಯೂ ಆದ ಪುಲೀಶನು ಪೌಲೀಶ ಸಿದ್ಧಾಂತವೆಂಬ ಗ್ರಂಥವನ್ನು ಬರೆದಿರುವನು. ಕ್ರಿ. ಶ. ಸು. ೫೯೮ರಲ್ಲಿ ಜನಿಸಿದ ಬ್ರಹ್ಮಗುಪ್ತನೆಂಬವನು ಬ್ರಹ್ಮ ಸಿದ್ಧಾಂತ

1. Alleged Greek influence on Hindu Astronomy—I. H. Q. Vol. IV. No. 1.

ವನ್ನು ಬರೆದನು. ಶ್ರೀಷೇಣನೆಂಬವನು ರೋಮಕ ಸಿದ್ಧಾಂತವನ್ನೂ, ವಿಷ್ಣುಚಂದ್ರನೆಂಬವನು ವಸಿಷ್ಟ ಸಿದ್ಧಾಂತವನ್ನೂ ಬರೆದು ಪ್ರಸಿದ್ಧರಾಗಿರುವರು. ಸೌರ ಸಿದ್ಧಾಂತವೆಂಬ ಇನ್ನೊಂದು ಜ್ಯೋತಿಷ ಗ್ರಂಥವೂ ಸುಮಾರು ಇದೇ ಕಾಲದಲ್ಲಿ ರಚಿತವಾಗಿರುವುದು. ಈ ಎಲ್ಲಾ ಗ್ರಂಥಗಳೂ ಆರ್ಯಭಟನ ಸಿದ್ಧಾಂತವನ್ನೇ ಆಧಾರವಾಗಿ ಉಳ್ಳವುಗಳಾಗಿವೆ. ಆದುದರಿಂದಲೇ ಅವು ಹೆಚ್ಚು ಕಾಲ ಉಳಿಯದೆ, ನಾಶಹೊಂದಿದವು.

ವರಾಹಮಿಹಿರನು ಇನ್ನೊಬ್ಬ ಪ್ರಸಿದ್ಧನಾದ ಜ್ಯೋತಿಶ್ಶಾಸ್ತ್ರ ವಿಶಾರದನು. ಇವನು ಕ್ರಿ. ಶ. ಸು. ೫೦೪ರಲ್ಲಿ ಬಾಳಿದನೆಂದು ತಿಳಿದುಬರುತ್ತದೆ. ಈತನು ತಾನು ಆದಿತ್ಯದಾಸನ ಮಗನೆಂದೂ, ಅವಂತೀನಗರವಾಸಿಯೆಂದೂ ಹೇಳಿಕೊಂಡಿದ್ದಾನೆ. ಇವನ ಬೃಹಜ್ಜಾತಕವು ಪ್ರಸಿದ್ಧವಾದ ಜ್ಯೋತಿಷ ಗ್ರಂಥವು. ಇದರಲ್ಲಿ ಇವನಿಗಿಂತ ಹಿಂದೆ ಇದ್ದ ಹಲವು ಗ್ರಂಥಕರ್ತರ ಹೆಸರು ಉಲ್ಲೇಖವಾಗಿವೆ. ಎಲ್ಲರ ಹೆಸರನ್ನೂ ಇವನು ಹೇಳಿಲ್ಲವಾದರೂ, ಇವನಿಗಿಂತ ಹಿಂದೆ ಪರಾಶರ, ಗಾರ್ಗ, ಬಾದರಾಯಣ, ಸತ್ಯಾಚಾರ್ಯ, ಯವನಾಚಾರ್ಯ, ಮಯ ಮುಂತಾದವರು ಜ್ಯೋತಿಷ ಗ್ರಂಥಗಳನ್ನು ಬರೆದಿದ್ದರೆಂದೂ, ಅವುಗಳಿಂದ ಈತನು ಕೆಲವು ವಿಷಯಗಳನ್ನು ಸಂಗ್ರಹಿಸಿರುವನೆಂದೂ ತಿಳಿಯುವುದಕ್ಕೆ ಆಧಾರವಿದೆ. ಇವನು ಗ್ರೀಕರ ಪ್ರಭಾವಕ್ಕೆ ಒಳಗಾಗಿದ್ದನೆಂಬುದಕ್ಕೆ ಇವನ ಗ್ರಂಥಗಳೇ ಸಾಕ್ಷಿ. ಇವನು ಅನೇಕ ಗ್ರೀಕ್ ಪಾರಿಭಾಷಿಕ ಶಬ್ದಗಳನ್ನು ತನ್ನ ಗ್ರಂಥಗಳಲ್ಲಿ ಉಪಯೋಗಿಸಿರುವುದಲ್ಲದೆ, ತನ್ನದೊಂದು ಜ್ಯೋತಿಷ ಗ್ರಂಥಕ್ಕೆ [1]ಹೋರಾಶಾಸ್ತ್ರವೆಂಬ ಗ್ರೀಕ್ ಹೆಸರನ್ನೇ ಕೊಟ್ಟಿರುವನು. ಇವನು ಉಪಯೋಗಿಸಿರುವ ಕೆಲವು ಗ್ರೀಕ್ ಪಾರಿಭಾಷಿಕ ಶಬ್ದಗಳನ್ನು ಇಲ್ಲಿ ಕೊಡಲಾಗಿದೆ: ದ್ರೆಕಾಣ, ಲಿಪ್ತ, ಅನಫ, ಸುನಫ, ದುರುಧರ, ಕೇಮದ್ರುಮ, ವೇಸಿ, ಕೇಂದ್ರ, ಆಪೋಕ್ಲಿಮ, ಪಣಫರ, ತ್ರಿಕೋಣ, ಹಿಬುಕ, ಜಾಮಿತ್ರ ಇತ್ಯಾದಿ.

ಹೀಗೆ ಗ್ರೀಸ್‌ದೇಶದಿಂದ ಇತ್ತ ಕಡೆಗೆ ಹರಿದುಬಂದ ಖಗೋಳವಿಜ್ಞಾನದ ಪ್ರವಾಹವು ಮತ್ತೆ ಇಲ್ಲಿಂದ ಪಶ್ಚಿಮಕ್ಕೆ ಹರಿಯಲಾರಂಭಿಸಿತು. ಆರ್ಯಭಟನ ಕೀರ್ತಿಯು ಗ್ರೀಸಿನ ವರೆಗೂ ಹೋಗಿ, ಅಲ್ಲಿ ಚಿರಸ್ಥಾಯಿಯಾಗಿ ಉಳಿಯಿತು. ಅಲ್ಲಿ ಅವನು 'ಅಂಡುಬೇರಿಯುಸ್' ಎಂದು ಕರೆಯಲ್ಪಟ್ಟನು. ಅರಾಬರು ಆತನನ್ನು 'ಆರ್ಜ ಬಹರ್' ಎಂಬುದಾಗಿ ಕರೆದರು. ಎಂಟನೆಯ ಮತ್ತು ಒಂಬತ್ತನೆಯ ಶತಮಾನಗಳಲ್ಲಿ ಅರಾಬರು ಖಗೋಳವಿಜ್ಞಾನದ ವಿಷಯದಲ್ಲಿ ಹಿಂದುಗಳಿಗೆ ಋಣಿಗಳಾಗಿದ್ದರು. ಅವರಿಂದ ಹಲವು ಸಿದ್ಧಾಂತಗಳನ್ನು ಪರಿವರ್ತನೆ ಮಾಡಿಸಿದರು.

ವರಾಹಮಿಹಿರನ ತರುವಾಯ ಪ್ರಸಿದ್ಧಿಗೆ ಬಂದ ಖಗೋಳಶಾಸ್ತ್ರಜ್ಞರಲ್ಲಿ ಕ್ರಿ. ಶ. ಸು. ೧೧೧೪ರಲ್ಲಿ ಬಾಳಿದ ಭಾಸ್ಕರಾಚಾರ್ಯನೇ ಮುಖ್ಯನಾದವನು. ಇವನೇ ಪ್ರಸಿದ್ಧರಾದ ಖಗೋಳಶಾಸ್ತ್ರಜ್ಞರಲ್ಲಿ ಕೊನೆಯವನೆಂದರೂ ತಪ್ಪಾಗದು. ಯಾಕೆಂದರೆ ಇವನ ತರುವಾಯ ಖಗೋಳವಿಜ್ಞಾನವು ಅಭಿವೃದ್ಧಿಯನ್ನು ಹೊಂದದೆ, ಹಿಂದಿನ ಹಾಗೆ ಜ್ಯೋತಿಶ್ಶಾಸ್ತ್ರದಲ್ಲಿಯೇ ಐಕ್ಯವಾಗಿ ಹೋಯಿತು.

ಕನ್ನಡ ಸಾಹಿತ್ಯದಲ್ಲಿಯೂ ಜ್ಯೋತಿಷ್ಯದ ಕುರಿತು ಹಲವು ಗ್ರಂಥಗಳು ಹುಟ್ಟಿವೆ. ಒಂದೊಂದರಲ್ಲಿ ಒಂದೊಂದು ವಿಷಯವು ಪ್ರತಿಪಾದಿಸಲ್ಪಟ್ಟಿದೆ. ಜಾತಕತಿಲಕವು

1. ವರಾಹಮಿಹಿರನು 'ಅಹೋರಾತ್ರಿ' ಎಂಬ ಸಂಸ್ಕೃತ ಶಬ್ದದ ಆದಿ ಮತ್ತು ಅಂತ್ಯಾಕ್ಷರಗಳು ಲೋಪವಾಗಿ 'ಹೋರಾ' ಎಂಬ ಶಬ್ದವು ವ್ಯುತ್ಪನ್ನವಾಯಿತೆಂದು ಹೇಳುತ್ತಾನೆ.



ವರಾಹಮಿಹಿರನ ಬೃಹಜ್ಜಾತಕದ ಅನುವಾದವೆಂದರೂ ತಪ್ಪಾಗದು. ಚಾವುಂಡರಾಯನಿಂದ ರಚಿತವಾದ 'ಲೋಕೋಪಕಾರ'ವೆಂಬ ಗ್ರಂಥದಲ್ಲಿ ಜ್ಯೋತಿಶ್ಶಾಸ್ತ್ರ ಸಂಬಂಧವಾದ ಹಲವು ಮಹತ್ವದ ಸಂಗತಿಗಳು ಹೇಳಲ್ಪಟ್ಟಿವೆ. 'ರಟ್ಟಮತ'ವೆಂಬ ಗ್ರಂಥದಲ್ಲಿ ಜ್ಯೋತಿಶ್ಶಾಸ್ತ್ರದಲ್ಲಿ ಹೇಳಿರುವ ಮಳೆಯ ಸ್ವರೂಪ ಇತ್ಯಾದಿ ವಿಷಯಗಳು ಅಡಕವಾಗಿವೆ. ಇವಲ್ಲದೆ ನರಪಿಂಗಲಿ, ಶಕುನ ಪ್ರಪಂಚ, ಪಿಂಗಳಿಯ ಶಾಸ್ತ್ರ, ರಟ್ಟನ ಜಾತಕ, ಶಕುನ ಸಾರ, ಜ್ಯೋತಿಶ್ಶಾಸ್ತ್ರ, ಜ್ಯೋತಿಷ, ಸಂವತ್ಸರ ಫಲ, ಶಕುನ ಸಂಗ್ರಹ ಇತ್ಯಾದಿ ಗ್ರಂಥಗಳು ಕೂಡ ಕನ್ನಡದಲ್ಲಿ ದೊರೆಯುತ್ತವೆ. ಆದುದರಿಂದ ಪ್ರಾಚೀನ ಕನ್ನಡ ಗ್ರಂಥಕರ್ತರು ಈ ಶಾಸ್ತ್ರದಲ್ಲಿ ವಿಶೇಷ ಆಸಕ್ತಿಯುಳ್ಳವರಾಗಿದ್ದು, ತಕ್ಕಮಟ್ಟಿಗೆ ಗ್ರಂಥರಚನೆಯನ್ನು ಮಾಡಿ ಕೃತಕೃತ್ಯರಾಗಿದ್ದಾರೆ.

---

## ಕವಿಕಾವ್ಯ ವಿಚಾರ

ನಮಗೆ ತಿಳಿದಿರುವ ಮಟ್ಟಿಗೆ ಜಾತಕತಿಲಕವೆಂಬ ಈ ಗ್ರಂಥವು ಕನ್ನಡದಲ್ಲಿ ಮೊತ್ತಮೊದಲನೆಯ ಜ್ಯೋತಿಷ ಗ್ರಂಥವು. ಇದನ್ನು ಬರೆದ ಕವಿಯು ಶ್ರೀಧರಾಚಾರ್ಯ. ಈತನು ಜೈನ ಕವಿ. ಆದುದರಿಂದ ಜೈನ ಕವಿಗಳ ಪದ್ಧತಿಗನುಸಾರವಾಗಿ ಇವನು ಚಂದ್ರಪ್ರಭ ಚರಿತೆಯೆಂಬ ಒಂದು ಪುರಾಣ ಗ್ರಂಥವನ್ನೂ ಬರೆದಿರುವಂತೆ ತಿಳಿಯುತ್ತದೆ.[1] ಆದರೆ ಆ ಗ್ರಂಥವು ಇದುವರೆಗೂ ದೊರೆತಿರುವುದಿಲ್ಲ. ಕವಿಯು ಜಾತಕತಿಲಕದಲ್ಲಿ ತನ್ನ ವಿಚಾರವಾಗಿ ಕೆಲವಂಶಗಳನ್ನು ಹೇಳಿಕೊಂಡಿದ್ದಾನೆ. ಅದರ ಪ್ರಕಾರವಾಗಿ ಅವನು ಬೆಳುವಲನಾಡಿನಲ್ಲಿ ಅತಿ ಪ್ರಸಿದ್ಧವಾದ ನಱುಗುಂದದಲ್ಲಿ ವಾಸಿಸುತ್ತಿದ್ದನೆಂದು ತಿಳಿಯುತ್ತದೆ. ವಿಪ್ರಕುಲೋತ್ತಮನೆಂದು ಹೇಳಿಕೊಂಡಿದ್ದಾನೆ. ಆಗಿನ ಕಾಲದಲ್ಲಿ ಅವನು ಬಹಳ ಪ್ರಸಿದ್ಧನಾಗಿದ್ದನೆಂದು ಊಹಿಸಬಹುದು[2]. ಈ ಕೆಳಗಿನ ಪದ್ಯದಲ್ಲಿ ಕವಿಯು ತನ್ನ ಗುಣಾದಿಗಳನ್ನು ಹೇಳುವಾಗ ಶ್ಲೇಷೆಯಿಂದ ತನಗೆ ಹಿಂದೆ ಇದ್ದ ಪ್ರಸಿದ್ಧ ಕನ್ನಡ ಕವಿಗಳ ಸ್ತೋತ್ರವನ್ನೂ ಮಾಡಿರುವುದು ಬಹಳ ಚಮತ್ಕಾರವಾಗಿದೆ:—

"ಅನವದ್ಯಂ ಕವಿತಾಗುಣಾರ್ಣವನಿಳಾದೇವಾನ್ವಯಾಬ್ಧ್ಯಂಬುಜಾ ।
ರಿನಿಭಂ ಪ್ರೌಢವಿಳಾಸಿನೀಮನಸಿಜಂ ಶ್ರೀಶೀಲಭದ್ರಂ ದ್ವಿಷ ॥
ಜ್ಜನ ದುರ್ಭಾರ ಗಜಾಂಕುಶಂ ಸುಜನರತ್ನಂ ತಾನೆನಲ್ಕೇಂ ಕೃತಾ ।
ರ್ಥನೊ ಕರ್ಣಾಟಕವೀಂದ್ರ ಸದ್ಗುಣಗಣಾಸಂಜ್ಞಾಧರಂ ಶ್ರೀಧರಂ ॥

(ಅ. ೧, ಪ. ೫)

ಕವಿತಾಗುಣಾರ್ಣವನೆಂಬುದು ಆದಿಪಂಪನ ಬಿರುದುಗಳಲ್ಲಿ ಒಂದಾಗಿದೆ. ಅಂಬುಜಾರಿಯೆಂಬುದು ಚಂದ್ರ(ಭಟ್ಟ)ನ ಹೆಸರನ್ನು ಸೂಚಿಸುತ್ತದೆ. ಮನಸಿಜನೆಂಬ ಕವಿಯನ್ನು ಕೇಶಿರಾಜಾದಿಗಳು ಹೆಸರಿಸಿರುವುದು ವ್ಯಕ್ತವಾಗಿಯೇ ಇದೆ. ಶೀಲಭದ್ರ

1. ಜಾತಕತಿಲಕಂ ಅಧಿಕಾರ 24 ಪ. ೪೦.
2. ,, ,, 1 ಪ. ೪.

ನೆಂಬುದು ಗುಣವರ್ಮನೆಂಬ ಹೆಸರಿಗೆ ಬದಲಾಗಿ ಉಪಯೋಗಿಸಲ್ಪಟ್ಟಿದೆ. ಗಜಾಂಕುಶ ಮತ್ತು ರತ್ನ ಎಂಬ ಕವಿಗಳು ಪ್ರಸಿದ್ಧರಾಗಿಯೇ ಇದ್ದಾರೆ. ಆದುದರಿಂದ ಕವಿಯು ಪಂಪಾದಿಗಳನ್ನು ಈ ಪದ್ಯದಲ್ಲಿ ಸ್ತುತಿಸಿ ತನ್ನ ವಿನಯವನ್ನು ವ್ಯಕ್ತಪಡಿಸಿದ್ದಾನೆ.

ಮುಂದಿನ ಪದ್ಯದಲ್ಲಿ ಕವಿಯು ಆರ್ಯಭಟನೆಂಬ ಒಬ್ಬ ಗ್ರಂಥಕರ್ತನೊಡನೆ ತನ್ನನ್ನು ಹೋಲಿಸಿಕೊಂಡಿದ್ದಾನೆ. ಕನ್ನಡ ಕವಿಗಳಲ್ಲಿ ಆರ್ಯಭಟನೆಂಬ ಹೆಸರಿನವರು ಯಾರೂ ಇದ್ದಂತೆ ತೋರುವುದಿಲ್ಲ. ಆದುದರಿಂದ ಈತನು ಸಂಸ್ಕೃತದಲ್ಲಿ ಜ್ಯೋತಿಷ ಗ್ರಂಥವನ್ನು ರಚಿಸಿದ ಆರ್ಯಭಟನೇ ಆಗಿರಬೇಕು. ಕವಿ ಶ್ರೀಧರನು ತನ್ನನ್ನು ಆತನೊಡನೆ ಹೋಲಿಸಿಕೊಂಡಿರುವುದರಲ್ಲಿ ಔಚಿತ್ಯವಿದೆ.

ಶಾಸ್ತ್ರವಿಷಯಕವಾದ ಕಾವ್ಯರಚನೆಯನ್ನು ಮಾಡುವುದು ಸುಲಭಸಾಧ್ಯವಲ್ಲವೆಂಬುದು ನಮ್ಮ ಕವಿಗೆ ಗೊತ್ತು. ಶಾಸ್ತ್ರ ಕವಿತಾಚತುರನಾದವನು ತನ್ನ ಕೃತಿಯನ್ನು "ಶ್ರುತಿಸುಂದರಮೆನೆ ಜಟಿತಿ। ಪ್ರತೀತಕಳಮೆನೆ ಮನೋಜ್ಞಮೆನೆ ದೋಷವಿವ॥ ರ್ಜಿತಮೆನೆ ವಿರಚಿಸಿ ಮೆರೆವುದು" ಎಂಬುದಾಗಿ ಕವಿಯು ಹೇಳಿದ್ದಾನೆ.[1] ತಾನು 'ಪದಪೂರಣ ಮನಣಂ ಪುಗಿಸದೆ ಕುದಿದು ವೃಥಾಕ್ಷರಂಗಳಂ ಪ್ರಾಸದೊಳಿಕ್ಕದೆ ಶಾಸ್ತ್ರದರ್ಥಮಂ ಬಿಸುಡದೆ' ಗ್ರಂಥವನ್ನು ಬರೆದಿರುವುದಾಗಿ ಹೇಳಿದ್ದಾನೆ.[2] ಆದುದರಿಂದ "ಜೋಯಿಸ ಗಬ್ಬಮಿದೆನ್ನದೆ, ಚೀಯೆನ್ನದಸಾರಮೆನ್ನದೆನ್ನರುಮದಱಿಂ ಜೀಯೆನೆ ತಜ್ಞರ್ ವಿಬುಧಾದೇಯಮಿದೆನೆ" ಕೊಂಡುಕೊನೆಯಬೇಕೆಂಬುದು ಶ್ರೀಧರನ ಆಶಯ. ಇದುವರೆಗೆ ಕನ್ನಡದಲ್ಲಿ ಜ್ಯೋತಿಷ ಗ್ರಂಥವನ್ನು ಬರೆದವರು ಯಾರೂ ಇಲ್ಲ. ಆದುದರಿಂದ ನೀನು ಬರೆಯಬೇಕು ಎಂಬುದಾಗಿ ಪಂಡಿತರು ಅಪೇಕ್ಷಿಸಲು ತಾನು ಈ ಗ್ರಂಥವನ್ನು ಬರೆದಿರುವುದಾಗಿ ಕವಿಯು ಹೇಳುತ್ತಾನೆ.[3] ಇವನ ಗ್ರಂಥದಲ್ಲಿ ಇಪ್ಪತ್ತನಾಲ್ಕು ಅಧಿಕಾರಗಳಿವೆ. ಅವುಗಳಲ್ಲಿ ವರ್ಣಿತವಾದ ವಿಷಯಗಳನ್ನು ಕವಿಯು ೨೪ನೇ ಅಧಿಕಾರದ ೩೪, ೩೫ನೇ ಪದ್ಯಗಳಲ್ಲಿ ಹೇಳಿದ್ದಾನೆ. ತನ್ನ ಗ್ರಂಥದ ಪ್ರಾಶಸ್ತ್ಯವನ್ನು ಮುಂದಿನ ೩೬, ೩೭, ೩೮, ೩೯, ೪೦ ಮತ್ತು ೪೧ನೇ ಪದ್ಯಗಳಲ್ಲಿ ಕವಿಯು ಹೇಳಿಕೊಂಡಿದ್ದಾನೆ. ತನ್ನನ್ನು ಕವಿಯು ೨೪ನೇ ಅಧಿಕಾರದ ೪೨ ಮತ್ತು ೪೩ನೇ ಪದ್ಯಗಳಲ್ಲಿ ವಿಶೇಷವಾಗಿ ಹೊಗಳಿಕೊಂಡಿದ್ದಾನೆ. ಇವನಿಗೆ ಬುಧಮಿತ್ರ (ಪು. ೧೩, ಪ. ೧೨), ಗದ್ಯಪದ್ಯವಿದ್ಯಾಧರ (ಪು. ೯೯, ಪ. ೪೩), ಸಮ್ಯಕ್ತ್ವ ರತ್ನಾಕರ (ಪು. ೯, ಪ. ೧೪), ಕವಿರಾಜಬಾಂಧವ (ಪು. ೧೦, ಪ. ೧೮), ಪದ್ಯವಿದ್ಯಾಧರ (ಪು. ೩೭, ಪ. ೩), ಸುಜನೈಕಬಾಂಧವ (ಪು. ೮೬, ಪ. ೧೧)—ಇವೇ ಮೊದಲಾದ ಬಿರುದುಗಳು ಇದ್ದ ಹಾಗೆ ಗ್ರಂಥದಿಂದ ವ್ಯಕ್ತವಾಗುತ್ತದೆ.

ಕವಿಯು ತನ್ನ ಗ್ರಂಥ ಸಮಾಪ್ತಿಯ ಕಾಲವನ್ನು ಹೀಗೆ ನಿರ್ದೇಶಿಸಿದ್ದಾನೆ:

"ಧರಣಿಗಿರಿನಿಧಿ ಶಕಾಬ್ದಂ।
ವಿರೋಧಿ ವತ್ಸರದ ಮಾರ್ಗಶೀರ್ಷದ ಶುಕ್ಲೇ॥
ತರದ ಚತುರ್ಥಿಯ ದಿವಸದ।
ಗುರುಪುಷ್ಯದೊಳೆಸೆದುದಿಳೆಗೆ ಜಾತಕತಿಲಕಂ॥ (ಅ. ೨೪, ಪ. ೪೪)

1. ಜಾತಕತಿಲಕಂ ಅ. ೧. ಪ. ೧೧.
2. ,, ,, ೧೨.
3. ,, ,, ೧೬.



ಇದರ ಪ್ರಕಾರವಾಗಿ ಶಕ ೯೭೧ರಲ್ಲಿ ಅಥವಾ ಕ್ರಿ. ಶ. ೧೦೪೯ರಲ್ಲಿ ಈತನ ಗ್ರಂಥವು ಸಂಪೂರ್ಣವಾಗಿರಬೇಕು. ಅದರ ಮುಂದಿನ ಪದ್ಯದಲ್ಲಿ ಎಂದರೆ ಗ್ರಂಥದ ಕೊನೆಯ ಪದ್ಯದಲ್ಲಿ ಕವಿಯು "ಧಾತ್ರಿಯನಾಹವಮಲ್ಲ ಭೂಮಿಪಾಳಕನೊಸೆದಾಳ್ಗೆ" ಎಂದು ಹೇಳಿರುವುದರಿಂದ ಈತನು ಚಾಲುಕ್ಯ ಆಹವಮಲ್ಲನ ಕಾಲದಲ್ಲಿದ್ದವನೆಂದು ಗೊತ್ತಾಗುತ್ತದೆ. ಈ ವಂಶದಲ್ಲಿ ಸು. ೧೦೪೨ರ ವರೆಗೆ ಜಯಸಿಂಹ ಜಗದೇಕಮಲ್ಲನು ರಾಜ್ಯವಾಳುತ್ತಿದ್ದು, ಬಳಿಕ ಅವನ ಮಗನಾದ ಮೊದಲನೆಯ ಸೋಮೇಶ್ವರನು ಪಟ್ಟಕ್ಕೆ ಬಂದು ಕ್ರಿ. ಶ. ೧೦೬೮ ವರೆಗೆ ರಾಜ್ಯವಾಳಿದಂತೆ ತಿಳಿಯುತ್ತದೆ. ಈತನು ಸತ್ವಶಾಲಿಯೂ, ಯುದ್ಧೋತ್ಸಾಹಿಯೂ ಆಗಿದ್ದು ಚೋಳರೊಡನೆ ಪ್ರಚಂಡವಾಗಿ ಕಾದಾಡಿ ಕೊನೆಗೆ ಜಯಶಾಲಿಯಾದನು. ಇವನಿಗೆ ತ್ರೈಲೋಕ್ಯಮಲ್ಲ ಮತ್ತು ಆಹವಮಲ್ಲ–ಎಂಬ ಹೆಸರುಗಳು ಪ್ರಸಿದ್ಧವಾಗಿದ್ದವು. ಆದುದರಿಂದ ಶ್ರೀಧರಾಚಾರ್ಯನು ಹೇಳಿರುವ ಆಹವಮಲ್ಲನು ಈ ಸೋಮೇಶ್ವರನೇ ಆಗಿರಬೇಕು. ಕವಿಯ ವಿಷಯವಾಗಿ ಆತನ ಗ್ರಂಥದಿಂದ ಮತ್ತೇನೂ ತಿಳಿದುಬರುವುದಿಲ್ಲ.

ಶ್ರೀಧರಾಚಾರ್ಯನು ವರಾಹಮಿಹಿರನ ಹೆಸರನ್ನು ಹೇಳಿಲ್ಲವಾದರೂ ಆತನ ಬೃಹಜ್ಜಾತಕದಿಂದ ವಿಷಯಗಳನ್ನು ಸಂಗ್ರಹಿಸಿಕೊಂಡಿರುವನೆಂಬುದಕ್ಕೆ ಯಾವ ಸಂಶಯವೂ ಇಲ್ಲ. ಬೃಹಜ್ಜಾತಕದ ಮೊದಲನೆಯ ಅಧ್ಯಾಯದ ಮೂರನೆಯ ಶ್ಲೋಕದಲ್ಲಿ ಕವಿಯು ಜಾತಕ ವಿಜ್ಞಾನದ ಕುರಿತು ಹೀಗೆ ಹೇಳುತ್ತಾನೆ: [1] "ಮಾನವರ ಹಿಂದಿನ ಜನ್ಮದ ಒಳ್ಳೆಯ ಮತ್ತು ಕೆಟ್ಟ ಕಾರ್ಯಗಳ ಪರಿಣಾಮಗಳ ಕುರಿತು ಪ್ರಸ್ತಾಪಿಸುವ ಶಾಸ್ತ್ರವೇ ಜ್ಯೋತಿಶ್ಶಾಸ್ತ್ರ." ಇದನ್ನೇ ಶ್ರೀಧರಾಚಾರ್ಯನು ಈ ರೀತಿಯಾಗಿ ಹೇಳಿದ್ದಾನೆ:

"ಭವಬದ್ಧ ಶುಭಾಶುಭಕ।
ರ್ಮವಿಪಾಕದ ಫಲವನರಿಪುಗುಂ ಜ್ಯೋತಿಜ್ಞರ್॥
ನವದೆಂತೆನೆ ಕಟ್ಟಿಲೆವನೆ।
ಯ ವಸ್ತುವಂ ತೋರ್ಪ ಸೊಡರ ಬೆಳಗಿನ ತೆಱದಿಂ॥

(ಪೀಠಿಕೆ: ಪದ್ಯ ೧೯)

ವರಾಹಮಿಹಿರನು ಸಂಜ್ಞಾಪ್ರಕರಣದ ನಾಲ್ಕನೆಯ ಶ್ಲೋಕದಲ್ಲಿ[2] ಕಾಲಪುರುಷನ ಅವಯವಗಳನ್ನು ವರ್ಣಿಸಿರುವುದನ್ನೇ ಶ್ರೀಧರಾಚಾರ್ಯನು ಸಂಜ್ಞಾಪ್ರಕರಣದ ಮೊದಲನೆಯ ಪದ್ಯದಲ್ಲಿ ಹೀಗೆ ಹೇಳಿದ್ದಾನೆ:

"ಎಡೆಯುಡುಗದೆ ಕಾಲಾಂಗದೊ।
ಳೆಡೆಗಳ ಜಾಡಿಗೆ ಶಿರಂ ಮುಖಂ ತೋಳ್ ಹೃದಯಂ॥
ಪೊಡೆ ಕಟಿವಸ್ತಿವ್ಯಂಜನ।
ತೊಡೆ ಮೊಣಕಾಲ್ ಜಂಘೆ ಪದಗಳಕ್ಕುಂ ಕ್ರಮದಿಂ॥

1. "ಹೋರೇತ್ಯಹೋರಾತ್ರವಿಕಲ್ಪಮೇಕೇ ವಾಂಛಂತಿ ಪೂರ್ವಾಪರವರ್ಣಲೋಪಾತ್।
ಕರ್ಮಾರ್ಜಿತಂ ಪೂರ್ವಭವೇ ಸದಾದಿಯತ್ತಸ್ಯ ಪಕ್ತಿಂ ಸಮಭಿವ್ಯನಕ್ತಿ॥

2. "ಕಾಲಾಂಗಾನಿವರಾಂಗಮಾನನಮುರೋ ಹೃತ್ಕ್ರೋಡವಾಸೋಭೃತೋ।
ಬಸ್ತಿವ್ಯಂಜನಮೂರು ಜಾನುಯುಗುಳೇ ಜಂಘೇ ತತೋಂಘ್ರಿದ್ವಯಂ॥
ಮೇಷಾಶ್ವಿಪ್ರಥಮಾನವರ್ಕ್ಷ ಚರಣಾಶ್ಚಕ್ರಸ್ಥಿತಾರಾಶಯೋ।
ರಾಶಿಕ್ಷೇತ್ರಗೃಹರ್ಕ್ಷಭಾನಿಭವನಂ ಚೌಕಾರ್ಥ ಸಂಪ್ರತ್ಯಯಾಃ॥

ವರಾಹಮಿಹಿರನು ತನ್ನ ಬೃಹಜ್ಜಾತಕದ ಮೊದಲನೆಯ ಅಧ್ಯಾಯದ ೨೦ನೆಯ ಶ್ಲೋಕದಲ್ಲಿ[3] ಮೇಷಾದಿ ಗೃಹಗಳ ವರ್ಣವನ್ನು ಹೇಳಿದ್ದಾನೆ. ಅದನ್ನೇ ಶ್ರೀಧರಾಚಾರ್ಯನು ತನ್ನ ಜಾತಕತಿಲಕದ ಸಂಜ್ಞಾಪ್ರಕರಣದ ೨ನೇ ಪದ್ಯದಲ್ಲಿ ಹೀಗೆ ವರ್ಣಿಸಿದ್ದಾನೆ:

"ತರದಿಂದಂ ಲೋಹಿತ ಸಿತ ।
ಹರೀತಪಾಟಳಿಮಪಾಂಡು ವೈಚಿತ್ರ್ಯಸಿತೇ ॥
ತರಕಾಂಚನ ಪಿಂಗಳ ಕ ।
ರ್ಬುರ ಬಭ್ರುಕಮಲಿನವರ್ಣಮಿವು ಗೃಹವರ್ಣಂ ॥

ಇದೇ ರೀತಿಯ ಹಲವು ಶ್ಲೋಕಗಳನ್ನೂ ಅವುಗಳಿಗೆ ಸಮಾನಾರ್ಥಕವಾದ ಪದ್ಯಗಳನ್ನೂ ಎತ್ತಿ ತೋರಿಸಬಹುದು. ಇದರಿಂದ ಶ್ರೀಧರಾಚಾರ್ಯನು ವರಾಹಮಿಹಿರನ ಬೃಹಜ್ಜಾತಕಕ್ಕೆ ಬಹಳ ಋಣಿಯಾಗಿರುವನೆಂಬ ವಿಷಯವು ಸ್ಪಷ್ಟವಾಗುವುದು.

ಇವನ ವರ್ಣನೆಗಳು ಬಹಳ ಮನೋಜ್ಞವಾಗಿವೆ. ಇದಕ್ಕೆ ಉದಾಹರಣೆಯಾಗಿ ಇವನ ಗ್ರಂಥದ ದ್ವಿತೀಯಾಧಿಕಾರದಲ್ಲಿರುವ (ಪದ್ಯ ೯೯ರಿಂದ ೨೫ರ ವರೆಗೆ) ಸಪ್ತಗ್ರಹಗಳ ವರ್ಣನೆಯನ್ನು ನೋಡಬಹುದು. ಶ್ರೀಧರಾಚಾರ್ಯನು ಕೇವಲ ಶಾಸ್ತ್ರಜ್ಞನು ಮಾತ್ರವಲ್ಲದೆ ಉತ್ತಮ ಕವಿಯೂ ಆಗಿದ್ದನೆಂಬುದಕ್ಕೆ ಅವನ ಗ್ರಂಥದಿಂದ ಹಲವು ಉದಾಹರಣೆಗಳನ್ನು ತೆಗೆದು ಕೊಡಬಹುದು. ಗ್ರಂಥವಿಸ್ತರ ಭಯದಿಂದ ಒಂದೆರಡನ್ನು ಮಾತ್ರ ಇಲ್ಲಿ ಕೊಟ್ಟು, ಉಳಿದವುಗಳನ್ನು ಪಾಠಕರೇ ನೋಡಿಕೊಳ್ಳಬೇಕಾಗಿ ಅಪೇಕ್ಷಿಸುವೆವು. ಗ್ರಹಗಳ ಬಲಾಬಲ ವಿಚಾರವನ್ನು ಹೇಳುವ ಪದ್ಯವು ಹೀಗಿದೆ:

"ಶನಿಯಿಂದಂ ಮಹಿಜಾತನಾಮಹಿಜನಿಂದಂ ಸೌಮ್ಯನಾಸೋಮನಂ ।
ದನನಿಂದಂ ಗುರುವಾಸುರೇಂದ್ರ ಗುರುವಿಂದಂ ಶುಕ್ರನಾಶುಕ್ರನಿಂ ॥
ವನಜಾತಾಹಿತನಾವನೇಜರಿಪುವಿಂ ಪಂಕೇಜಮಿತ್ರಂ ಬಳಾ ।
ಢ್ಯನೆನಿಕ್ಕುಂ ಕ್ರಮದಿಂದಮಿೂ ಗ್ರಹಬಳಂ ನೈಸರ್ಗಿಕಂ ನಾಮದಿಂ ॥

(ಪು. ೨, ಪ. ೧೩)

ಈ ಪದ್ಯದಲ್ಲಿ ಕಂಡುಬರುವ ನಾದಮಾಧುರ್ಯ, ಶಬ್ದಸೌಂದರ್ಯ ಮತ್ತು ಪ್ರಸಾದ ಗುಣ ಮುಂತಾದುವು ಪಂಪರನ್ನರ ಪದ್ಯಗಳಲ್ಲಿ ಕಂಡುಬರುವ ಕಾವ್ಯ ಗುಣಗಳಿಗೇನೂ ಕಡಿಮೆಯಾಗಿಲ್ಲ. ನೀರಸವಾದ ಒಂದು ವಿಷಯವನ್ನು ಹೇಳುವಾಗಲೂ ಕೂಡ ಕವಿಯು ಅದನ್ನು ಎಷ್ಟು ಚೆನ್ನಾಗಿ ಹೇಳುವನೆಂಬುದನ್ನು ಈ ಕೆಳಗಿನ ಪದ್ಯದಿಂದ ತಿಳಿಯಬಹುದು.

"ವಿದಿತಂ ಕಾಂತೆಗೆ ಪೊೞ್ತು ತೀವಿದುದು ಪೇೞಿನ್ನಾವುದಕ್ಕುಂ ಪ್ರಸೂ ।
ತ ದಿನಂ ತಾನೆನೆ ಚಂದ್ರನಾವ ಗೃಹದೊಳ್ ತತ್ಕಾಲದೊಳ್ ನಿಂದನಾ ॥
ಸದನದ್ವಾದಶಭಾಗಮಂತೆನಿತು ಸಲ್ಗುಂ ಮುಂತೆ ತತ್ಸಂಖ್ಯೆಗೇ ।
ಹದಿನತ್ತಲ್ ನಿಲೆ ಚಂದ್ರಮಂ ಪ್ರಸವಕಾಲಂ ಕಾಂತೆಗಂತಾದಿನಂ ॥

(ಪು. ೩, ಪ. ೧೮)

3. "ರಕ್ತಃ ಸ್ವೇತಃ ಶುಕತನುನಿಭಃ ಪಾಟಲೋ ಧೂಮ್ರಪಾಂಡು ।
ಶ್ಚಿತ್ರಃ ಕೃಷ್ಣಃ ಕನಕಸದೃಶಃ ಪಿಂಗಲಃ ಕರ್ಬುರಶ್ಚ ॥
ಬಭ್ರುಃ ಸ್ವಚ್ಛಃ ಪ್ರಥಮಭವನಾದ್ಯೇಷುವರ್ಣಃ ಪ್ಲವತ್ವಂ ।
ಸ್ವಾವ್ಯಾಶಾಖ್ಯಂ ದಿನಕರಯುತಾದ್ಭಾದ್ವಿತೀಯಂ ಚವೇಶಿಃ ॥



ಈ ಕವಿಯ ಕೆಲವು ಪ್ರಯೋಗವಿಶೇಷಗಳು ಭಾಷಾಶಾಸ್ತ್ರದ ದೃಷ್ಟಿಯಿಂದ ಗಮನಾರ್ಹವಾಗಿವೆ: 'ಸುಕವಿಯಲ್ಲದೊಂ ರಂಜಿಪನೇ (ಪುಟ ೨, ಪ೯) ಮಗಂಬೆತ್ತಬಲೆ (ಪು ೨, ೧೦) ಪೇೞ್ಗುಂ (೩, ೧೬) ಬರ್ದಪನೇ (೨೭, ೫೫) ಅದೇವುದು (೩೫, ೧೩) ಪೊಲ್ಲಮೆ (೩೭, ೫) ಪಡಪಾಳಿ (೭೯, ೨೦) ಬಿಸುಡುಗಾರ್ತಿ (೮೬, ೧೨) ಮಱುವಾೞ್ತೆ (೮೬, ೧೨) ಜೋಡೆ (೮೬, ೧೪) ಮದವ (೮೭, ೧೬) ಇವೇ ಮುಂತಾದುವು. ಇವುಗಳ ಆಧಾರದಿಂದ ಆಗಿನ ಕಾಲದ ಕನ್ನಡವು ಯಾವ ಅವಸ್ಥೆಯಲ್ಲಿದ್ದಿತೆಂಬುದನ್ನು ನಾವು ಊಹಿಸಬಹುದು.

---

## ಗ್ರಂಥಪ್ರತಿಪಾದ್ಯ ವಿಷಯ

ಸಂಜ್ಞಾಪ್ರಕರಣ—ಸೂರ್ಯಪಥವನ್ನು ಹನ್ನೆರಡು ವಿಭಾಗಗಳನ್ನಾಗಿ ಮಾಡಿ, ಪ್ರತಿಯೊಂದು ವಿಭಾಗಕ್ಕೆ ರಾಶಿ, ಗೃಹ, ಕ್ಷೇತ್ರ, ಭವನ ಮುಂತಾದ ಹೆಸರುಗಳನ್ನು ಕೊಟ್ಟಿದೆ. ಇವುಗಳಿಗೆ ಕ್ರಮವಾಗಿ ಮೇಷ, ವೃಷಭ, ಮಿಥುನ, ಕರ್ಕಾಟಕ, ಸಿಂಹ, ಕನ್ಯ, ತುಲಾ, ವೃಶ್ಚಿಕ, ಧನು, ಮಕರ, ಕುಂಭ, ಮಿೂನ ಎಂಬ ಹೆಸರುಗಳು ಪ್ರಸಿದ್ಧವಾಗಿವೆ. ಇವನ್ನು ಕಾಲಪುರುಷನ ಶಿರ, ಮುಖ, ತೋಳು, ಹೃದಯ, ಹೊಟ್ಟೆ, ಸೊಂಟ, ಜೇಣ್ಣಾಂಗಗಳು, ಜನನೇಂದ್ರಿಯಗಳು, ತೊಡೆಗಳು, ಮೊಣಕಾಲುಗಳು, ಜಂಘೆಗಳು ಮತ್ತು ಪಾದಗಳು-ಇವುಗಳಿಗೆ ಹೋಲಿಸಿದೆ. ಇವುಗಳಿಗೆ ಕ್ರಮವಾಗಿ ಕೆಂಪು, ಬಿಳಿ, ಹಸುರು, ಪಾಟಳಿ, ಪಾಂಡು, ಚಿತ್ರವರ್ಣ, ಕಪ್ಪು, ಹಳದಿ, ಪಿಂಗಳ, ಕರ್ಬುರ, ಬಭ್ರು, ಶುಭ್ರ—ಈ ಬಣ್ಣಗಳು ಕೊಡಲಾಗಿದೆ.

ರಾಶಿಗಳಲ್ಲಿ ಪುರುಷರಾಶಿಗಳೆಂದೂ, ಸ್ತ್ರೀರಾಶಿಗಳೆಂದೂ, ಕ್ರೂರರಾಶಿಗಳೆಂದೂ, ಸೌಮ್ಯರಾಶಿಗಳೆಂದೂ, ಸ್ಥಿರರಾಶಿಗಳೆಂದೂ, ಚರರಾಶಿಗಳೆಂದೂ, ದ್ವಿಸ್ವಭಾವರಾಶಿಗಳೆಂದೂ ಭೇದಗಳನ್ನು ಕಲ್ಪಿಸಿದೆ. ಮೇಷ, ಮಿಥುನ, ಸಿಂಹ, ತುಲಾ, ಧನು, ಕುಂಭ-ಇವು ಪುರುಷರಾಶಿಗಳೂ ಕ್ರೂರರಾಶಿಗಳೂ ಆಗಿವೆ. ಮಿಕ್ಕುಳಿದ ಆರು ರಾಶಿಗಳು ಸ್ತ್ರೀರಾಶಿಗಳೂ ಸೌಮ್ಯರಾಶಿಗಳೂ ಆಗಿವೆ. ಮೇಷ, ಕರ್ಕಾಟಕ, ತುಲಾ ಮತ್ತು ಮಕರರಾಶಿಗಳು ಚರರಾಶಿಗಳೆಂದೂ, ವೃಷಭ, ಸಿಂಹ, ವೃಶ್ಚಿಕ, ಕುಂಭರಾಶಿಗಳು ಸ್ಥಿರರಾಶಿಗಳೆಂದೂ, ಮಿಥುನ, ಕನ್ಯಾ, ಧನು, ಮಿೂನರಾಶಿಗಳು ದ್ವಿಸ್ವಭಾವರಾಶಿಗಳೆಂದೂ ಪ್ರಸಿದ್ಧವಾಗಿವೆ. ಮೇಷ, ಸಿಂಹ, ಧನುರಾಶಿಗಳು ಪೂರ್ವದಿಕ್ಕಿಗೂ, ವೃಷಭ, ಕನ್ಯಾ, ಮಕರ ರಾಶಿಗಳು ದಕ್ಷಿಣಕ್ಕೂ, ಮಿಥುನ, ತುಲಾ, ಕುಂಭರಾಶಿಗಳು ಪಶ್ಚಿಮಕ್ಕೂ, ಕರ್ಕಾಟಕ, ವೃಶ್ಚಿಕ, ಮಿೂನರಾಶಿಗಳು ಉತ್ತರಕ್ಕೂ ಅಧಿಪತಿಗಳೆನಿಸಿವೆ.

ಶನಿಯು ಮಕರಕುಂಭಗಳಿಗೂ, ಗುರುವು ಧನುಮಿೂನರಾಶಿಗಳಿಗೂ, ಬುಧನು ಮಿಥುನಕನ್ಯಾರಾಶಿಗಳಿಗೂ, ಚಂದ್ರನು ಕರ್ಕಾಟಕಕ್ಕೂ ಅಂಗಾರಕನು ಮೇಷವೃಶ್ಚಿಕಗಳಿಗೂ, ಸೂರ್ಯನು ಸಿಂಹರಾಶಿಗೂ, ಶುಕ್ರನು ವೃಷಭತುಲಾರಾಶಿಗಳಿಗೂ ಅಧಿಪತಿಗಳಾಗಿವೆ. ಪ್ರತಿಯೊಂದು ಗ್ರಹವೂ ಅದಕ್ಕೆ ಸಂಬಂಧಪಟ್ಟ ಗೃಹಗಳ ಅಂಶಗಳಿಗೂ ಅಧಿಪತಿಗಳೆನಿಸಿವೆ. ಸೂರ್ಯಪಥವನ್ನು ಭವನ, ದ್ವಾದಶಾಂಶ, ನವಾಂಶಕ, ತ್ರಿಂಶಾಂಶಕ, ಹೋರಾ, ದ್ರೇಕ್ಕಾಣ-ಎಂದು ಆರು ವಿಧವಾಗಿ ವಿಂಗಡಿಸಿರುವರು. ಇದಕ್ಕೆ ಷಡ್ವರ್ಗವೆಂಬ

ಹೆಸರು. ಸೂರ್ಯಪಥದ ಹನ್ನೆರಡನೆಯ ಒಂದಂಶಕ್ಕೆ ಭವನವೆಂದೂ, ಇದರ ಹನ್ನೆರಡನೆಯ ಒಂದಂಶಕ್ಕೆ ದ್ವಾದಶಾಂಶವೆಂದೂ, ಒಂಬತ್ತನೆಯ ಒಂದಂಶಕ್ಕೆ ನವಾಂಶಕವೆಂದೂ, ಮೂವತ್ತನೆಯ ಒಂದಂಶಕ್ಕೆ ತ್ರಿಂಶಾಂಶಕವೆಂದೂ ಹೆಸರು. ರಾಶಿಯ ಅರ್ಧಾಂಶಕ್ಕೆ ಹೋರಾ ಎಂಬ ಹೆಸರೂ, ಮೂರನೆಯ ಒಂದಂಶಕ್ಕೆ ದ್ರೆಕ್ಕಾಣವೆಂಬ ಹೆಸರೂ ಪ್ರಸಿದ್ಧವಾಗಿವೆ.

ಮುಂದಿನ ಪದ್ಯಗಳಲ್ಲಿ ಈ ಅಂಶಗಳ ಅಧಿಪತಿಗಳನ್ನು ಹೇಳಿದೆ. ಲಗ್ನಭಾವನಾಮಫಲಗಳನ್ನು ೧೫ನೆಯ ಪದ್ಯದಲ್ಲಿ ವಿವರಿಸಿದೆ. ಚತುರಸ್ರವವೆಂದು ನಾಲ್ಕನೆಯ ಮತ್ತು ಎಂಟನೆಯ ಗೃಹಕ್ಕೆ ಹೆಸರು. ನಾಲ್ಕನೆಯದಕ್ಕೆ ಪಾತಾಳ, ವೇಶ್ಮ, ಸುಖ, ಹಿಬುಕ, ಬಂಧು ಎಂಬ ಐದು ಹೆಸರುಗಳುಂಟು. ಐದನೆಯ ಮತ್ತು ಒಂಬತ್ತನೆಯ ಗೃಹಗಳಿಗೆ ತ್ರಿಕೋಣವೆಂದು ಹೆಸರು. ಒಂಬತ್ತನೆಯ ಗೃಹಕ್ಕೆ ತ್ರಿತ್ರಿಕೋಣವೆಂದೂ ಹೆಸರುಂಟು. ಪಂಚಮರಾಶಿಯು ಬುದ್ಧಿಯೆನಿಸುತ್ತದೆ. ದುಶ್ಚಿಕ್ಯವೆಂದು ಮೂರನೆಯ ರಾಶಿಗೆ ಹೆಸರು. ರಿಪ್ಫವೆಂದು ಹನ್ನೆರಡನೆಯ ಗೃಹಕ್ಕೆ ಹೆಸರುಂಟು. ಜಾಮಿತ್ರ, ದ್ಯುನದ್ಯೂನವೆಂದು ಸಪ್ತಮರಾಶಿಗೆ ಹೆಸರು. ಛಿದ್ರವೆಂದು ಲಗ್ನಕ್ಕೂ (ಮೊದಲನೆಯರಾಶಿ) ಅಷ್ಟಮರಾಶಿಗೂ ಹೆಸರುಂಟು. ಉದಯ (ಲಗ್ನ), ಚತುರ್ಥ, ಅಸ್ತಮಯ (ಸಪ್ತಮ), ದಶ (ಹತ್ತನೆಯರಾಶಿ) ಇವುಗಳನ್ನು ಕೇಂದ್ರ, ಚತುಷ್ಟಯ, ಕಂಟಕವೆಂದು ಕರೆಯುವರು. ೨, ೫, ೮ ಮತ್ತು ೧೧ನೆಯ ಗೃಹಗಳು ಪಣಫರಗಳೆನಿಸುತ್ತವೆ. ೩, ೬, ೯ ಮತ್ತು ೧೨ನೆಯ ರಾಶಿಗಳು ಆಪೋಕ್ಲೀಬಗಳೆಂದು ಕರೆಯಲ್ಪಡುತ್ತವೆ. ೩, ೬, ೧೦ ಮತ್ತು ೧೧ನೆಯ ಮನೆಗಳು ಉಪಚಯಭವನಗಳಾಗಿವೆ. ಉಳಿದ ಎಂಟು ಗೃಹಗಳೂ ಅಪಚಯಭವನಗಳು. ಗ್ರಹಗಳಲ್ಲಿ ಶೀರ್ಷೋದಯಗಳೆಂದೂ, ಪೃಷ್ಠೋದಯಗಳೆಂದೂ, ಉಭಯೋದಯಗಳೆಂದೂ ಮೂರು ವಿಧ. ಸಿಂಹ, ಕನ್ಯಾ, ತುಲಾ, ವೃಶ್ಚಿಕ ಮತ್ತು ಕುಂಭ ಇವು ಶೀರ್ಷೋದಯಗಳು ಮತ್ತು ದಿವಾಬಲಿಗಳು. ಮೇಷ, ವೃಷಭ, ಮಿಥುನ, ಕರ್ಕಾಟಕ, ಧನು, ಮಕರರಾಶಿಗಳು ನಿಶಾಬಲಿಗಳು. ಇವುಗಳಲ್ಲಿ ಮಿಥುನರಾಶಿಯನ್ನು ಬಿಟ್ಟು ಉಳಿದವುಗಳು ಪೃಷ್ಠೋದಯಗಳೆನಿಸುತ್ತವೆ. ಮೀನರಾಶಿಯು ಉಭಯೋದಯವಾಗಿದೆ. ಗ್ರಹಗಳ ಉಚ್ಚಸ್ಥಾನಾದಿಗಳನ್ನು ವಿವರಿಸಿ ಈ ಅಧಿಕಾರವು ಮುಗಿದಿದೆ.

ಎರಡನೆಯ ಪ್ರಕರಣದಲ್ಲಿ ಗ್ರಹಗಳ ಬಲಾಬಲ ವಿಚಾರವು ಹೇಳಿದೆ. ಆದಿತ್ಯ, ಶುಕ್ರ, ಅಂಗಾರಕ, ರಾಹು, ಶನಿ, ಸೋಮ, ಬುಧ, ಗುರುಗಳು ಕ್ರಮವಾಗಿ ಪೂರ್ವ, ಆಗ್ನೇಯ, ದಕ್ಷಿಣ, ನೈಋತ್ಯ, ಪಶ್ಚಿಮ, ವಾಯವ್ಯ, ಉತ್ತರ, ಈಶಾನ್ಯ–ಈ ದಿಕ್ಕುಗಳ ಪತಿಗಳು. ಗುರು, ಶುಕ್ರ, ಬುಧ, ಪೂರ್ಣೇಂದುಗಳು ಶುಭಗ್ರಹರು. ಸೂರ್ಯ, ಅಂಗಾರಕ, ವಕ್ರ, ಕ್ಷೀಣೇಂದುಗಳು ಅಶುಭಗಳು. ಕ್ರೂರಗ್ರಹಗಳ ಜೊತೆಯಲ್ಲಿ ಸೇರಿದರೆ ಬುಧನೂ ಕ್ರೂರನು. ಸೂರ್ಯ, ಗುರು ಮತ್ತು ಅಂಗಾರಕ–ಈ ಗ್ರಹಗಳು ಅಂಗನಾಧಿಪತಿಗಳು. ಚಂದ್ರಶುಕ್ರರು ಪುರುಷಾಧಿಪತಿಗಳು. ಬುಧ ಶನಿಗಳು ನಪುಂಸಕಾಧಿಪತಿಗಳೆನಿಸುತ್ತವೆ. ಬೃಹಸ್ಪತಿಯು ಋಗ್ವೇದಕ್ಕೂ, ಶುಕ್ರನು ಯಜುರ್ವೇದಕ್ಕೂ, ಅಂಗಾರಕನು ಸಾಮವೇದಕ್ಕೂ, ಬುಧನು ಅಥರ್ವವೇದಕ್ಕೂ ಅಧಿಪತಿಗಳಾಗಿದ್ದಾರೆ. ಗುರುಶುಕ್ರರು ಬ್ರಾಹ್ಮಣಜಾತಿಗೂ, ಅಂಗಾರಕಸೂರ್ಯರು ಕ್ಷತ್ರಿಯರಿಗೂ, ಚಂದ್ರನು ವೈಶ್ಯರಿಗೂ ಬುಧನು ಶೂದ್ರಜಾತಿಗೂ ಅಧಿಪತಿಗಳು. ಶನಿಯು ಸಂಕರಾಧಿಪನೆನಿಸಿರುವನು. ಗ್ರಹಗಳ ಬಲಾಬಲ ವಿಚಾರವು ಈ ಕೆಳಗಿನಂತಿದೆ:—



"ಶನಿಯಿಂದಂ ಮಹಿಜಾತನಾಮಹಿಜನಿಂದಂ ಸೌಮ್ಯನಾಸೋಮನಂ ।
ದನನಿಂದಂ ಗುರುವಾಸುರೇಂದ್ರ ಗುರುವಿಂದಂ ಶುಕ್ರನಾಶುಕ್ರನಿಂ ॥
ವನಜಾತಾಹಿತನಾವನೇಜರಿಪುವಿಂ ಪಂಕೇಜಮಿತ್ರಂ ಬಳಾ ।
ಢ್ಯನೆನಿಕ್ಕುಂ ಕ್ರಮದಿಂದವೀ ಗ್ರಹಬಲಂ ನೈಸರ್ಗಿಕಂ ನಾಮದಿಂ ॥

ಗ್ರಹಗಳಿಗೆ ಸ್ಥಾನಬಲ, ಚೇಷ್ಟಾಬಲ, ನಿಸರ್ಗಬಲ, ಕಾಲಬಲ, ದಿಶಾಬಲ ಮತ್ತು ಪಿರಿಯಬಲವೆಂದು ಆರು ತರದ ಬಲಗಳಿವೆ. ಗ್ರಹಗಳಲ್ಲಿ ಮಿತ್ರಗ್ರಹಗಳು, ಶತ್ರುಗಳು ಮತ್ತು ಉದಾಸೀನಗ್ರಹಗಳು–ಇವುಗಳ ವಿಚಾರವು ಮುಂದಿನ ಪದ್ಯಗಳಲ್ಲಿ ಕೊಡಲ್ಪಟ್ಟಿದೆ. ಆ ಮೇಲೆ ಸಪ್ತಗ್ರಹಗಳ ವರ್ಣನೆಯೊಂದಿಗೆ ಎರಡನೆಯ ಪ್ರಕರಣವು ಅಂತ್ಯವಾಗಿದೆ.

ಮೂರನೆಯ ಗರ್ಭಪ್ರಕರಣದಲ್ಲಿ ಸ್ತ್ರೀಯರ ಗರ್ಭ ವಿಚಾರ, ಹುಟ್ಟುವ ಮಕ್ಕಳ ಲಕ್ಷಣ ಇತ್ಯಾದಿಗಳು ಹೇಳಿವೆ. ಗರ್ಭವಾದ ಮೇಲೆ ಮೊದಲನೆಯ ತಿಂಗಳಲ್ಲಿ ಶುಕ್ರನು ಅಧಿಪತಿಯಾಗಿದ್ದು ಗರ್ಭಪಿಂಡವು ಸಿದ್ಧವಾಗುವುದು. ಅಂಗಾರಕನು ಎರಡನೆಯ ತಿಂಗಳಲ್ಲಿ ಅಧಿಪತಿಯಾಗುವನು. ಆ ಸಮಯದಲ್ಲಿ ಮಾಂಸಪಿಂಡವು ಕಾಣಿಸಿಕೊಳ್ಳುತ್ತದೆ. ಗುರುವು ಮೂರನೆಯ ತಿಂಗಳಲ್ಲಿ ಅಧಿಪತಿಯಾಗುವನು. ಅವನಿಂದ ಅವಯವಗಳುಂಟಾಗುವವು. ನಾಲ್ಕನೆಯ ತಿಂಗಳಲ್ಲಿ ಸೂರ್ಯನು ಅಧಿಪತಿಯು; ಆತನಿಂದ ಅಸ್ಥಿಗಳುಂಟಾಗುತ್ತವೆ. ಐದನೆಯ ತಿಂಗಳಲ್ಲಿ ಅಧಿಪತಿಯಾಗುವ ಚಂದ್ರನಿಂದ ಚರ್ಮವು ಉಂಟಾಗುವುದು. ಆರನೆಯ ತಿಂಗಳಲ್ಲಿ ಅಧಿಪತಿಯಾಗುವ ಶನಿಯಿಂದ ಕೂದಲುಗಳು ಬೆಳೆಯುತ್ತವೆ. ಬುಧನು ಏಳನೆಯ ತಿಂಗಳಲ್ಲಿ ಅಧಿಪತಿಯು. ಆತನಿಂದ ಚೇತನವುಂಟಾಗುತ್ತದೆ. ಎಂಟನೆಯ ತಿಂಗಳಲ್ಲಿ ಗರ್ಭಶಿಶುವು ತಾಯಿಯ ಉಣಿಸನ್ನು ಉಣ್ಣುವುದು. ಒಂಬತ್ತನೆಯ ತಿಂಗಳಲ್ಲಿ ಚಂದ್ರನು ಅಧಿಪತಿಯಾಗುವನು. ಆಗ ಗರ್ಭದಲ್ಲಿ ಚಲನವಲನಗಳುಂಟಾಗುವವು. ಹತ್ತನೆಯ ತಿಂಗಳಲ್ಲಿ ಸೂರ್ಯನು ಅಧಿಪತಿಯು; ಆಗ ಶಿಶುಜನನವಾಗುವುದು. ಗರ್ಭೋತ್ಪತ್ತಿಯ ಕಾಲದಲ್ಲಿ ಈ ಮಾಸಾಧಿಪತಿಗಳು ಯಾವ ಅವಸ್ಥೆಯನ್ನು ಹೊಂದಿರುವರೋ ಅದೇ ಅವಸ್ಥೆಯನ್ನು ಆ ತಿಂಗಳಲ್ಲಿ ಗರ್ಭವು ಅನುಭವಿಸುವುದು. ತಂದೆತಾಯಿಗಳಿಗೆ ಯಾವುದರಿಂದ ಕುತ್ತವುಂಟಾಗುತ್ತದೆ, ಯಾವುದರಿಂದ ಮೃತ್ಯು ಸಮನಿಸುತ್ತದೆ ಎಂಬ ವಿಷಯಗಳು ಮುಂದೆ ಚರ್ಚಿತವಾಗಿವೆ. ಗರ್ಭನಿಲ್ಲುವ ಲಕ್ಷಣ, ಚ್ಯುತವಾಗುವ ಲಕ್ಷಣ, ಗಂಡುಮಗು ಹುಟ್ಟುವ ಲಕ್ಷಣ, ಹೆಣ್ಣುಮಗು ಹುಟ್ಟುವ ಲಕ್ಷಣ, ಯಮಳ ಪುಂ ಸ್ತ್ರೀ ಜನ್ಮಲಕ್ಷಣ, ಮೂರು ಮತ್ತು ಅದಕ್ಕಿಂತ ಹೆಚ್ಚು ಮಕ್ಕಳು ಹುಟ್ಟುವ ಲಕ್ಷಣ, ಪ್ರಸವ ಕಾಲವನ್ನು ನಿರ್ಣಯಿಸುವ ಕ್ರಮ — ಇತ್ಯಾದಿಗಳನ್ನು ವಿವರಿಸಿ ಕವಿಯು ಈ ಮೂರನೆಯ ಪ್ರಕರಣವನ್ನು ಮುಗಿಸಿರುವನು.

ನಾಲ್ಕನೆಯ ಪ್ರಕರಣದಲ್ಲಿ ಜನ್ಮಕಾಲದಲ್ಲಿ ಗ್ರಹಗಳ ಸ್ಥಿತಿಯನ್ನನುಸರಿಸಿ, ತಂದೆತಾಯಿಗಳಿಲ್ಲದಿರುವಿಕೆ, ಜಾರಜಾತನ ಲಕ್ಷಣ, ಪ್ರಸೂತಿಕಾ ಗೃಹದ ಲಕ್ಷಣ, ಶಿಶು ಉದಯಿಸುವ ಕ್ರಮ, ಜಾತಶಿಶುವಿನ ಮರಣ, ಕೂಸು ಚಿರಾಯುವಾಗುವುದು, ತಾಯಿ ಮಕ್ಕಳ ಮರಣ, ಅಂಗವಿಹೀನ ಶಿಶುವಿನ ಜನನ, ಇತ್ಯಾದಿಗಳು ವರ್ಣಿತವಾಗಿವೆ.

ಐದನೆಯ ವಿಯೋನಿಜನ್ಮ ಪ್ರಕರಣದಲ್ಲಿ ತರುಲತೆ, ಖಗಮೃಗಗಳ ಜನ್ಮವಿಚಾರವು ಹೇಳಿದೆ. ಮುಂದಿನ ಅರಿಷ್ಟಯೋಗ ಪ್ರಕರಣದಲ್ಲಿ ಮಗುವಿಗೆ ಯಾವ ಯಾವ ಗ್ರಹಗಳು ಯಾವ ಯಾವ ಸ್ಥಾನಗಳಲ್ಲಿದ್ದರೆ ಮರಣವನ್ನುಂಟುಮಾಡುತ್ತವೆಂಬುದನ್ನು ವಿವರಿಸಲಾಗಿದೆ.

ಏಳನೆಯ ಅರಿಷ್ಟಭಂಗ ಪ್ರಕರಣದಲ್ಲಿ ಯಾವ ಯಾವ ಗ್ರಹಗಳು ಯಾವ ಯಾವ ಸ್ಥಾನದಲ್ಲಿ ನಿಂತರೆ ಅರಿಷ್ಟಭಂಗವಾಗುತ್ತದೆಂಬುದನ್ನು ಕವಿಯು ಚೆನ್ನಾಗಿ ವಿವರಿಸಿದ್ದಾನೆ. ಎಂಟನೆಯ ಆಯುರ್ದಾಯ ಪ್ರಕರಣದಲ್ಲಿ ಮಾನವನ ಆಯುಷ್ಯವು ಎಷ್ಟೆಂಬುದನ್ನು ಲೆಕ್ಕಮಾಡುವ ವಿಧಾನವು ಹೇಳಿದೆ. ಮನುಷ್ಯನ ಮತ್ತು ಆನೆಯ ಪರಮಾಯುಷ್ಯವು ನೂರಿಪ್ಪತ್ತು ವರ್ಷ ಮತ್ತು ಐದು ದಿವಸ; ಕುದುರೆಗೆ ೩೨ ವರ್ಷ; ಒಂಟೆ ಮತ್ತು ಕತ್ತೆಗಳಿಗೆ ೨೫ ವರ್ಷ; ಎತ್ತು ಕೋಣಗಳಿಗೆ ೨೪ ವರ್ಷ; ನಾಯಿಗೆ ೧೨ ವರ್ಷ; ಆಡು ಇತ್ಯಾದಿ ಪ್ರಾಣಿಗಳಿಗೆ ೧೬ ವರ್ಷ. ಗ್ರಹಗಳು ತಮ್ಮ ಉಚ್ಛಸ್ಥಾನದಲ್ಲಿರುವಾಗ ಅವುಗಳಿಂದ ಮಾನವನಿಗೆ ದೊರೆಯುವ ಆಯುಷ್ಯದ ಪ್ರಮಾಣವು ಹೀಗಿದೆ:—

"ಸೂರ್ಯನಿಂದ ೧೯ ವರ್ಷ; ಚಂದ್ರನಿಂದ ೨೫ ವರ್ಷ; ಅಂಗಾರಕನಿಂದ ೧೫ ವರ್ಷ; ಶುಕ್ರನಿಂದ ೨೧ ವರ್ಷ; ಶನಿಯಿಂದ ೨೦ ವರ್ಷ." ಇದಕ್ಕೆ ಪಿಂಡಾಯುಕ್ರಮವೆಂದು ಹೆಸರು. ಇನ್ನು ಕೆಲವರು ಇದನ್ನು ಅಲ್ಲಗಳೆದು ಅಂಶಾಯುಕ್ರಮವನ್ನು ಅನುಸರಿಸುವರು. ಮನುಷ್ಯನಿಗೆ ಚಿರಾಯು ಸಂಭವಿಸುವ ಗ್ರಹಲಕ್ಷಣವನ್ನು ಈ ಕೆಳಗಿನ ಪದ್ಯದಲ್ಲಿ ಹೇಳಿ, ಕವಿಯು ಈ ಪ್ರಕರಣವನ್ನು ಮುಗಿಸಿದ್ದಾನೆ.

"ತ್ರಿದಶಾಧೀಶ್ವರ ಮಂತ್ರಿ ಶೀತಕರರೆಂಬೀಯಿರ್ವರುಂ ಕರ್ಕಿಗೇ ।
ಹದೊಳಿರ್ದಂದು ಶಶಾಂಕಸೂನು ಸಿತರೆಂಬೀಯಿರ್ವರುಂ ಕೇಂದ್ರಗೇ ॥
ಹದೊಳಿರ್ದಂದು ರಿಪುತ್ರಿಲಾಭ ಗೃಹದೊಳ್ ಮಿಕ್ಕನ್ಯರಿರ್ದಂದು ಪು ।
ಟ್ಟಿದ ಮರ್ತ್ಯಂಗೆ ಚಿರಾಯು ಸಂಭವಿಸುಗುಂ ಸಮ್ಯಕ್ತ್ವರತ್ನಾಕರಾ ॥

ಒಂಬತ್ತನೆಯ ದಶಾಂತರ್ದಶ ಪ್ರಕರಣದಲ್ಲಿ ಜೀವಿಗಳಿಗೆ ಗ್ರಹಗಳ ಚಲನವಲನಗಳಿಂದುಂಟಾಗುವ ಉತ್ತಮ ಮಧ್ಯಮ ಜಘನ್ಯ ಫಲವಿಚಾರವು ಅಡಕವಾಗಿದೆ. ಮನುಷ್ಯನು ಯಾವ ಯಾವ ದಶೆಯಲ್ಲಿ ಯಾವ ಯಾವ ಕೃತ್ಯಗಳನ್ನು ಮಾಡುವನೆಂಬುದರ ವಿವರಣೆಯೂ ಇದರಲ್ಲಿದೆ. ಅವನಿಗೆ ತನ್ನ ಕಾರ್ಯದಿಂದುಂಟಾಗುವ ಲಾಭನಷ್ಟಗಳ ವಿಚಾರವೂ ಇಲ್ಲಿ ಹೇಳಿದೆ.

ಮುಂದಿನ ಅಷ್ಟಕವರ್ಗ ಪ್ರಕರಣದಲ್ಲಿ ಗ್ರಹಗಳು ಜನ್ಮಲಗ್ನದಿಂದ ಅಥವಾ ಇತರ ಗ್ರಹಗಳಿಂದ ದೂರವಾಗಿ ಯಾವ ಯಾವ ರಾಶಿಗಳಲ್ಲಿ ಒಳ್ಳೆಯದನ್ನು ಮಾಡುವವೆಂದೂ ಯಾವ ಯಾವ ರಾಶಿಗಳಲ್ಲಿ ಕೇಡನ್ನು ಮಾಡುತ್ತವೆಂದೂ ಹೇಳಿದೆ. ಉದಾಹರಣೆಗಾಗಿ ಸೂರ್ಯನನ್ನು ತೆಗೆದುಕೊಂಡರೆ, ಅವನು ತನ್ನ ಸ್ವಸ್ಥಾನ(ಜನ್ಮರಾಶಿ) ದಿಂದ ೧, ೨, ೪, ೭, ೮, ೯, ೧೦ ಮತ್ತು ೧೧ನೇ ರಾಶಿಗಳಲ್ಲಿ ಶುಭಫಲವನ್ನೂ ಉಳಿದ ರಾಶಿಗಳಲ್ಲಿ ಅಶುಭ ಫಲವನ್ನೂ ಕೊಡುವನು. ಹೀಗೆಯೇ ಆತನು ಅಂಗಾರಕ ಮತ್ತು ಶನಿಗಳಿಂದ ಅಷ್ಟೇ ದೂರದಲ್ಲಿದ್ದರೂ ಶುಭಫಲವನ್ನು ಕೊಡುವನು; ಬೇರೆ ರಾಶಿಗಳಲ್ಲಿದ್ದರೆ ಅಶುಭ ಫಲವನ್ನು ಕೊಡುವನು. ಉಳಿದ ಎಲ್ಲಾ ಗ್ರಹಗಳ ವಿಷಯವಾಗಿಯೂ ಶುಭಾಶುಭ ಫಲಗಳು ಈ ಪ್ರಕರಣದಲ್ಲಿ ಹೇಳಿವೆ.

ಹನ್ನೊಂದನೆಯ ಕರ್ಮಜೀವನ ಪ್ರಕರಣದಲ್ಲಿ ಗ್ರಹಸ್ಥಿತಿಗಳನ್ನನುಸರಿಸಿ, ಮಾನವನಿಗುಂಟಾಗುವ ಲಾಭನಷ್ಟಗಳನ್ನು ಕುರಿತು ಹೇಳಿರುವುದು. ಸೂರ್ಯನು ನವಾಂಶಕದಲ್ಲಿರುವಾಗ ಆ ರಾಶಿಯಲ್ಲಿ ಹುಟ್ಟಿದ ನರನು ಚಿನ್ನ, ಸುಗಂಧದ್ರವ್ಯಗಳು, ಉಣ್ಣೆಯ ಬಟ್ಟೆ, ಔಷಧ ದ್ರವ್ಯಗಳು ಇವುಗಳ ಮಾರಾಟದಿಂದ ಹಣವನ್ನು ಸಂಪಾದಿಸುವನು. ಚಂದ್ರನು ನವಾಂಶಕದಲ್ಲಿರುವಾಗ ಹುಟ್ಟಿದ ಮನುಷ್ಯನು ಕೃಷಿಯಿಂದಲೂ, ಸಮುದ್ರದಲ್ಲಿ ಸಿಕ್ಕುವ



ಪದಾರ್ಥಗಳನ್ನು ಮಾರುವುದರಿಂದಲೂ, ಸ್ತ್ರೀಯರಿಂದಲೂ ಹಣವನ್ನು ಗಳಿಸುತ್ತಾನೆ. ಅಂಗಾರಕನು ನವಾಂಶಕದಲ್ಲಿರುವಾಗ, ಆ ರಾಶಿಯಲ್ಲಿ ಹುಟ್ಟಿದ ನರನು ಲೋಹದಿಂದಲೂ, ಅಡಿಗೆ ಇತ್ಯಾದಿಗಳಿಂದಲೂ ಹಣಸಂಪಾದಿಸುತ್ತಾನೆ. ಬುಧನು ಆ ಸ್ಥಾನದಲ್ಲಿರುವುದರಿಂದ ಓದುಬರೆಹಗಳಿಂದಲೂ ಗಣಿತದಿಂದಲೂ ಕಾವ್ಯ, ಲಲಿತಕಲೆ ಮುಂತಾದುವುಗಳಿಂದಲೂ ಮನುಷ್ಯನು ಹಣವನ್ನು ಸಂಪಾದಿಸುವನು. ಗುರುವು ನವಾಂಶಕದ ಅಧಿಪತಿಯಾಗಿರುವಾಗ, ಮಾನವನು ಬ್ರಾಹ್ಮಣರಿಂದಲೂ, ವಿಬುಧರಿಂದಲೂ ದ್ರವ್ಯ ಸಂಪಾದನೆಯನ್ನು ಮಾಡುವನು. ಶುಕ್ರನು ನವಾಂಶಾಧಿಪತಿಯಾಗಿರುವುದರಿಂದ, ಎಮ್ಮೆ, ದನ, ರತ್ನಾಭರಣಗಳಿಂದ ಹಣಸಂಪಾದಿಸುವನು. ಶನಿಯು ಈ ದಸೆಯಲ್ಲಿದ್ದರೆ, ಆಗ ಹುಟ್ಟಿದ ನರನು ಶ್ರಮಸಾಧ್ಯವಾದ ಕಾರ್ಯಗಳನ್ನು ಮಾಡುವುದರಿಂದಲೂ, ನೀಚ ಕಾರ್ಯಗಳಿಂದಲೂ ಹಣ ಸಂಪಾದಿಸುವನು. ಹೀಗೆ ಗ್ರಹಗಳು ಯಾವ ರೀತಿಯಲ್ಲಿದ್ದರೆ, ಮನುಷ್ಯನು ಯಾವುದರಿಂದ ಹಣಸಂಪಾದಿಸುವನೆಂಬುದನ್ನು ಹೇಳಿ ಕವಿಯು ಈ ಪ್ರಕರಣವನ್ನು ಮುಗಿಸಿರುವನು.

ಮತ್ತಿನ ರಾಜಯೋಗಪ್ರಕರಣದಲ್ಲಿ ರಾಜನಾಗಬೇಕಾದರೆ ಗ್ರಹಗತಿಗಳು ಹೇಗಿರಬೇಕೆಂಬುದನ್ನು ಕವಿಯು ವಿವರಿಸಿರುವನು. ಸಾಮಾನ್ಯವಾಗಿ ಮೂರು ಅಥವಾ ಹೆಚ್ಚು ಗ್ರಹಗಳು ತಮ್ಮ ಉಚ್ಛಸ್ಥಾನದಲ್ಲಿದ್ದರೆ, ಆ ರಾಶಿಯಲ್ಲಿ ಹುಟ್ಟಿದವನು ರಾಜನಾಗುವನು. ಹೀಗೆಯೇ ರಾಜತ್ವವು ಪ್ರಾಪ್ತವಾಗಬೇಕಾದರೆ ಗ್ರಹಗತಿಗಳು ಅನುಕೂಲವಾಗಿ ಇರಬೇಕಾದ ಇನ್ನೂ ಹಲವು ಕ್ರಮಗಳನ್ನು ಕವಿಯು ಈ ಪ್ರಕರಣದಲ್ಲಿ ಹೇಳಿರುವನು.

ಮುಂದಿನ ನಾಭಸಯೋಗಪ್ರಕರಣದಲ್ಲಿ ಹಲವು ತರದ ಯೋಗಗಳ ವಿವರಣೆಯು ಕೊಡಲ್ಪಟ್ಟಿರುವುದು. ಇವುಗಳಲ್ಲಿ ರಜ್ಜು, ಮುಸಲ, ನಳ, ಗದಾ, ಶಕಟ, ಶೃಂಗಾಟ, ವಿಹಗ, ಹಲ, ಚಕ್ರ, ಗೋಳ, ಶೂಲ, ಕೇದಾರ, ಪಾಶ, ದಾಮ, ವಲ್ಲಕೀ, ವಜ್ರ, ಯವ, ಕಮಲ, ವಾಪಿ, ಯೂಪ, ಇಸು, ಶಕ್ತಿ, ದಂಡ, ವೇಲಾ, ಕೂಟ, ಛತ್ರ, ಚಾಪ, ಸರ್ಪ, ಮಾಲಾ, ಅರ್ಧಚಂದ್ರ—ಈ ಯೋಗಗಳು ಮುಖ್ಯವಾಗಿವೆ. ಕವಿಯು ಇವುಗಳ ಲಕ್ಷಣಗಳನ್ನೂ ಈ ಯೋಗಗಳಲ್ಲಿ ಹುಟ್ಟಿದವರ ಸ್ವಭಾವಾದಿಗಳನ್ನೂ ಮನೋಜ್ಞವಾಗಿ ವರ್ಣಿಸಿದ್ದಾನೆ.

616

ಹದಿನಾಲ್ಕನೆಯ ಚಂದ್ರಯೋಗಕರಣ ಪ್ರಕರಣದಲ್ಲಿ ಚಂದ್ರನಿಗೂ ಇತರ ಗ್ರಹಗಳಿಗೂ ಇರುವ ಸ್ಥಾನಾಂತರಗಳಿಂದ, ಆ ರಾಶಿಗಳಲ್ಲಿ ಹುಟ್ಟಿದ ಮಾನವರ ಶೀಲಸ್ವಭಾವ, ಸ್ಥಿತಿಗತಿಗಳಲ್ಲಾಗುವ ವ್ಯತ್ಯಾಸಗಳು ವರ್ಣಿತವಾಗಿವೆ. ಇದರಲ್ಲಿ ಅವಧಿಯೋಗ, ಅನಘಾಯೋಗ, ಸುನಘಾಯೋಗ, ದುರುಧುರಾಯೋಗ, ಕೇಮದ್ರುಮಯೋಗ ಇತ್ಯಾದಿಗಳ ಲಕ್ಷಣ ಮತ್ತು ಪರಿಣಾಮಗಳು ವರ್ಣಿತವಾಗಿವೆ. ಅವಧಿಯೋಗಕ್ಕೆ ಸಂಬಂಧಪಟ್ಟ ಪದ್ಯವು ಹೀಗಿದೆ:—

"ಉಡುಪಂ ನಿಂದೆಡೆಯಿಂದಮೇಳರೆಡೆಯೊಳ್ ಸೌಮ್ಯಗ್ರಹಂ ಕೂಡಿನಿಂ ।
ದೊಡೆ ಸೇನಾಪತಿಯಕ್ಕುಮಾಹಿಮಗುವಿಂದಾರೇಳರೊಳ್ ಸೌಮ್ಯ ॥
ರ್ದೊಡವಂ ಪೆರ್ಗಡೆಯಕ್ಕುಮಾಶಶಿಯಿನಾರೇಳೆಂಟರೊಳ್ ಸೌಮ್ಯರಿ ।
ರ್ದೊಡೆ ಧಾತ್ರೀಪತಿಯಕ್ಕುಮಿಂತವಧಿಯೋಗಂ ಪದ್ಯವಿದ್ಯಾಧರಾ ॥

ಮುಂದಿನ ಪ್ರಕರಣದಲ್ಲಿ ಎರಡು ಮೂರು ಗ್ರಹಗಳು ಒಂದಾಗಿ ಸೇರುವಾಗ ಉಂಟಾಗುವ ಫಲಗಳನ್ನು ವಿವರಿಸಿದ್ದಾನೆ. ಮತ್ತಿನ ಪ್ರವ್ರಾಜ್ಯಯೋಗ ಪ್ರಕರಣದಲ್ಲಿ

ಯಾವ ಗ್ರಹಬಲದಿಂದ ಸನ್ಯಾಸಿತ್ವವು ಸಿದ್ಧಿಸುತ್ತದೆಂಬುದನ್ನು ಬಹಳ ಸಂಗ್ರಹವಾಗಿ ಹೇಳಿದ್ದಾನೆ. ಹದಿನೇಳನೆಯ ರಾಶಿಪ್ರಕರಣದಲ್ಲಿ ಯಾವ ಯಾವ ರಾಶಿಯಲ್ಲಿ ಹುಟ್ಟಿದ ಮಾನವರು ಯಾವ ಯಾವ ಸ್ವಭಾವದವರಾಗಿರುವರೆಂಬುದು ವರ್ಣಿತವಾಗಿದೆ.

ಹದಿನೆಂಟನೆಯ ಅಧಿಕಾರದಲ್ಲಿ ಲಗ್ನಭಾವವನ್ನು ಕವಿಯು ವಿವರಿಸಿರುವನು. ಮುಂದಿನ ಪ್ರಕರಣದಲ್ಲಿ ದ್ರೇಕ್ಕಾಣಗಳ ವರ್ಣನೆಯಿದೆ. ಒಂದು ರಾಶಿಗೆ ಮೂರು ದ್ರೇಕ್ಕಾಣಗಳಿರುವುದರಿಂದ ಹನ್ನೆರಡು ರಾಶಿಗಳಿಗೆ ಮೂವತ್ತಾರು ದ್ರೇಕ್ಕಾಣಗಳಿವೆ. ಪ್ರತಿಯೊಂದು ದ್ರೇಕ್ಕಾಣಕ್ಕೂ ಒಂದೊಂದು ಅಧಿದೇವತೆಯಿರುವುದು. ಅವುಗಳಲ್ಲಿ ಕೆಲವು ಗಂಡು; ಇನ್ನು ಕೆಲವು ಹೆಣ್ಣು. ಒಂದು ರಾಶಿಯ ಒಂದು ದ್ರೇಕ್ಕಾಣದ ಅಧಿದೇವತೆಯು ಗಂಡಾದರೆ ಮತ್ತಿನ ದ್ರೇಕ್ಕಾಣದ ಅಧಿದೇವತೆಯು ಹೆಣ್ಣಾಗಬಹುದು. ಉದಾಹರಣೆಗಾಗಿ ಮೇಷರಾಶಿಯ ಮೊದಲನೆಯ ದ್ರೇಕ್ಕಾಣದ ಅಧಿದೇವತೆಯು ಗಂಡು; ಎರಡನೆಯದರದು ಹೆಣ್ಣು; ಅದರ ವರ್ಣನೆ ಹೀಗಿದೆ:—

"ನಿಡುಮೊಗದವಳ್ ತೃಷಾತುರೆ।
ತುಡಲುಣಲಾಟಿಸುವಳೊಂದೆ ಕಾಲೊಳ್ ನಿಲುವಳ್ ॥
ಕೊಡದನ್ನಮರುಣ ವಸ್ತ್ರಮು।
ನುಡುವಳ್ ತನ್ಮೇಷಮಧ್ಯಮ ದ್ರೇಕ್ಕಾಣಂ ॥

ಮುಂದಿನ ದೃಷ್ಟಿಪ್ರಕರಣದಲ್ಲಿ ಚಂದ್ರನು ಮೇಷಾದಿರಾಶಿಗಳಲ್ಲಿದ್ದು, ಬೇರೆ ಬೇರೆ ಗ್ರಹಗಳಿಂದ ವೀಕ್ಷಿಸಲ್ಪಟ್ಟರೆ, ಉಂಟಾಗುವ ಫಲಗಳು ವಿವರಿಸಲ್ಪಟ್ಟಿವೆ. ಇಪ್ಪತ್ತೊಂದನೆಯ ಪ್ರಕರಣದಲ್ಲಿ ಅರಿಷ್ಟಯೋಗದ ವಿವರಣೆಯಿದೆ. ಮತ್ತಿನ ಪ್ರಕರಣದಲ್ಲಿ ಸ್ತ್ರೀಜಾತಕದ ವಿಚಾರವು ಹೇಳಲ್ಪಟ್ಟಿದೆ. ಆಕೆಯ ಜಾತಕ ಫಲವನ್ನು ಹೊಂದಿಕೊಂಡು ಆಕೆಯ ಗಂಡನ ಸ್ಥಿತಿಗತಿಗಳಿರುತ್ತವೆ. ಉದಾ:—

"ದ್ಯುನಗೇಹಂ ಗ್ರಹಶೂನ್ಯಮುಂ ವಿಬಳಮುಂ ತಾನಾಗೆ ಮರ್ತ್ಯಾಧಮಂ।
ವನಿತಾಭರ್ತೃವೆನಿಕ್ಕುಮೀಕ್ಷಿಸಲದಂ ಕ್ರೂರಗ್ರಹಂ ಭರ್ತೃ ಷಂ ॥
ಡನೆನಿಕ್ಕುಂ ಚರರಾಶಿಯೊಳ್ನೆಲಸೆ ಸೂರ್ಯಾಪತ್ಯನುಂ ಚಂದ್ರನಂ।
ದನನುಂ ತದ್ವಧುವಿಂಗೆ ಭರ್ತೃವೆನಿಕುಂ ನಿತ್ಯಪ್ರವಾಸಾನ್ವಿತಂ ॥

ಇಪ್ಪತ್ತಮೂರನೆಯ ಪ್ರಕರಣದಲ್ಲಿ ಗ್ರಹಫಲಾನುಸಾರವಾಗಿ ಮಾನವನು ಯಾವ ಯಾವ ವ್ಯಾಧಿಗಳಿಂದ ಪೀಡಿತನಾಗಿ ಮರಣವನ್ನು ಹೊಂದುವನೆಂಬ ವಿಚಾರವು ಹೇಳಲ್ಪಟ್ಟಿದೆ. ಇದಕ್ಕೊಂದು ಉದಾಹರಣೆಯನ್ನು ಇಲ್ಲಿ ಕೊಡಬಹುದು:—

"ಜಳಜಾತಪ್ರಿಯನೆಂಟರೊಳ್ ನಿಲೆ ಮನುಷ್ಯಂ ಕಿಚ್ಚಿನಿಂ ಚಂದ್ರಮಂ।
ನಿಲೆ ನೀರಿಂ ಮಹಿಜಾತನಲ್ಲಿ ನಿಲೆ ಶಸ್ತ್ರಾಘಾತದಿಂ ಸೋಮಜಂ ॥
ನಿಲೆ ಘೋರಜ್ವರದಿಂದೆ ಮಂತ್ರಿ ನಿಲೆ ನಾನಾರೋಗದಿಂ ಭಾರ್ಗವಂ।
ನಿಲೆ ರಕ್ತಾಮಯದಿಂದೆ ಸೌರಿ ನಿಲೆ ಕ್ಷುದ್ರವ್ಯಾಧಿಯಿಂ ಪೊಂದುಗುಂ ॥

ಕೊನೆಯ ಇಪ್ಪತ್ತನಾಲ್ಕನೆಯ ಪ್ರಕರಣದಲ್ಲಿ ನಷ್ಟಜಾತಕದ ವಿಚಾರವು ಹೇಳಿದೆ. ಗರ್ಭಧಾರಣದ ಮತ್ತು ಜನನದ ಸಮಯವು ಗೊತ್ತಿಲ್ಲದೆ ಹೋದರೆ, ಜನ್ಮಕಾಲವನ್ನು ನಿರ್ಧರಿಸುವುದಕ್ಕೆ ಉಪಾಯವನ್ನು ಇದರಲ್ಲಿ ವಿವರಿಸಿದೆ. ಇದಕ್ಕೆ ಪ್ರಶ್ನಕಾಲದ ಲಗ್ನವೇ ಆಧಾರ. ಪ್ರಶ್ನಲಗ್ನದ ಪೂರ್ವಾರ್ಧವು ಉದಯದಲ್ಲಿದ್ದರೆ, ಜನನ ಕಾಲವು



ಉತ್ತರಾಯಣದಲ್ಲಿದೆಯೆಂದು ಭಾವಿಸಬೇಕು; ಪ್ರಶ್ನಲಗ್ನದ ಉತ್ತರಾರ್ಧವು ಉದಯದಲ್ಲಿದ್ದರೆ ಜನನ ತಿಂಗಳು ದಕ್ಷಿಣಾಯನದಲ್ಲಿರುವುದು. ಜನ್ಮಕಾಲದಲ್ಲಿ ಗುರುವಿರುವ ಗೃಹವನ್ನು ಈ ರೀತಿಯಾಗಿ ಕಂಡುಹಿಡಿಯಬೇಕೆಂದು ವಿಧಿಸಿರುವುದು: ಪ್ರಶ್ನಕಾಲದಲ್ಲಿ ಯಾವುದಾದರೂ ಗೃಹದ ಮೊದಲನೆಯ ದ್ರೇಕ್ಕಾಣವು ಉದಯದಲ್ಲಿದ್ದರೆ, ಜನ್ಮಕಾಲದಲ್ಲಿ ಗುರುವು ಆಕ್ರಮಿಸಿರುವ ಗೃಹವು ಪ್ರಶ್ನಕಾಲದ ಲಗ್ನವೇ ಆಗಿರುತ್ತದೆ. ಎರಡನೆಯ ದ್ರೇಕ್ಕಾಣವು ಉದಯಿಸುತ್ತಿದ್ದರೆ, ಗುರುವಿನ ಗೃಹವು ಪ್ರಶ್ನಲಗ್ನದಿಂದ ಐದನೆಯ ಮನೆಯೆಂದು ತಿಳಿಯತಕ್ಕದ್ದು. ಮೂರನೆಯ ದ್ರೇಕ್ಕಾಣವು ಉದಯಿಸುತ್ತಿದ್ದರೆ, ಗುರುವಿನ ಗೃಹವು ಪ್ರಶ್ನಲಗ್ನದಿಂದ ಒಂಬತ್ತನೆಯ ಮನೆಯೆಂದು ತಿಳಿಯಬೇಕು. ಬಳಿಕ ವ್ಯಕ್ತಿಯ ರೂಪ ಆಕಾರಾದಿಗಳಿಂದ ಆತನ ಪ್ರಾಯವನ್ನೂ, ತನ್ಮೂಲಕ ಆತನ ಜನ್ಮವರ್ಷವನ್ನೂ ಕಂಡುಕೊಳ್ಳತಕ್ಕದ್ದು. ಜನನ ಋತುವನ್ನು ಕಂಡುಹಿಡಿಯುವ ವಿಧಾನವು ಈ ರೀತಿಯಾಗಿ ವಿವರಿಸಲ್ಪಟ್ಟಿದೆ: ಪ್ರಶ್ನಕಾಲದಲ್ಲಿ ಸೂರ್ಯನಾಗಲಿ, ಅಂಗಾರಕನಾಗಲಿ ಅಥವಾ ಅವರ ದ್ರೇಕ್ಕಾಣಗಳಾಗಲಿ ಉದಯದಲ್ಲಿದ್ದರೆ, ಜನ್ಮಋತುವು ಗ್ರೀಷ್ಮವೆಂದರಿಯಬೇಕು; ಶನಿಯಾಗಲಿ ಅದರ ದ್ರೇಕ್ಕಾಣವಾಗಲಿ ಲಗ್ನದಲ್ಲಿದ್ದರೆ, ಜನ್ಮಋತುವು ಶಿಶಿರ; ಶುಕ್ರ ಅಥವಾ ಅದರ ದ್ರೇಕ್ಕಾಣವು ಲಗ್ನದಲ್ಲಿದ್ದರೆ ಜನ್ಮಕಾಲವು ವಸಂತಋತು; ಚಂದ್ರ ಅಥವಾ ಅದರ ದ್ರೇಕ್ಕಾಣವು ಉದಯದಲ್ಲಿದ್ದರೆ, ಜನ್ಮಕಾಲವು ವರ್ಷಋತು; ಬುಧ ಅಥವಾ ಅದರ ದ್ರೇಕ್ಕಾಣವು ಉದಯದಲ್ಲಿದ್ದರೆ, ಜನನಕಾಲವು ಶರದೃತು; ಗುರು ಅಥವಾ ಅದರ ದ್ರೇಕ್ಕಾಣವು ಉದಯದಲ್ಲಿರುವಾಗ, ಜನ್ಮಕಾಲವು ಹೇಮಂತಋತುವೆಂದು ತಿಳಿಯಬೇಕು. ಈ ರೀತಿಯಾಗಿ ಕಂಡುಹಿಡಿದ ಋತುವು ಅಯನಕ್ಕೆ ಸರಿಹೊಂದದ ಪಕ್ಷದಲ್ಲಿ, ಚಂದ್ರ ಶುಕ್ರರನ್ನೂ, ಬುಧ ಅಂಗಾರಕರನ್ನೂ, ಗುರು ಶನಿಗಳನ್ನೂ ಬದಲಾಯಿಸಿಕೊಳ್ಳಬೇಕು. ಋತುವನ್ನು ಕಂಡುಹಿಡಿದ ಮೇಲೆ, ಜನ್ಮತಿಂಗಳನ್ನು ಕಂಡುಹಿಡಿಯುವ ಕ್ರಮವು ಹೀಗಿದೆ: ಪ್ರಶ್ನಕಾಲದಲ್ಲಿ ಉದಯದಲ್ಲಿರುವ ದ್ರೇಕ್ಕಾಣದ ಮೊದಲನೆಯ ಅರ್ಧಭಾಗವು ಲಗ್ನದಲ್ಲಿದ್ದರೆ, ಜನ್ಮಋತುವಿನ ಮೊದಲನೆಯ ತಿಂಗಳು ಜನ್ಮಮಾಸವೆಂದರಿಯಬೇಕು; ಉದಯ ದ್ರೇಕ್ಕಾಣದ ಉತ್ತರಾರ್ಧವು ಉದಯದಲ್ಲಿದ್ದರೆ, ಜನನ ಮಾಸವು ಆ ಋತುವಿನ ಎರಡನೆಯ ತಿಂಗಳೆಂದು ತಿಳಿಯಬೇಕು. ಇದೇ ರೀತಿಯಲ್ಲಿ ತಿಥಿ, ಗಳಿಗೆ-ಇತ್ಯಾದಿಗಳನ್ನು ಕೂಡ ಕಂಡುಹಿಡಿಯುವುದಕ್ಕೂ ಈ ಪ್ರಕರಣದಲ್ಲಿ ವಿಧಾನಗಳು ಹೇಳಲ್ಪಟ್ಟಿವೆ.

ಈ ಗ್ರಂಥದ ಹಸ್ತಲಿಖಿತ ಪ್ರತಿಯೊಂದು ಹಿಂದೆಯೇ ಸಿದ್ಧವಾಗಿದ್ದರೂ, ಅದನ್ನು ಪರಿಶೀಲಿಸುವಾಗ, ಅದರಲ್ಲಿ ಹಲವು ಲೋಪದೋಷಗಳು ಕಂಡುಬಂದುದರಿಂದ, ಮತ್ತೊಂದು ಪ್ರತಿಯನ್ನು ಸಂಪಾದಿಸುವ ಪ್ರಯತ್ನಮಾಡಿ, ಅದರಲ್ಲಿ ಕೃತಕೃತ್ಯರಾದೆವು. ತಮ್ಮಲ್ಲಿದ್ದ ಹಸ್ತಲಿಖಿತ (ಕ) ಪ್ರತಿಯನ್ನು ಒದಗಿಸಿಕೊಟ್ಟು, ನಮಗೆ ನೆರವಾದ ಶ್ರೀ. ತ. ಸು. ಶ್ಯಾಮರಾಯರ ಉಪಕಾರವನ್ನು ನಾವು ಎಂದೂ ಮರೆಯುವಂತಿಲ್ಲ. ಈ ಪುಸ್ತಕವನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟು ಉಪಕರಿಸಿದ ಮಂಗಳೂರಿನ ಶಾರದಾ ಪ್ರೆಸ್ಸಿನ ಮ್ಯಾನೇಜರಿಗೂ ನಮ್ಮ ಧನ್ಯವಾದಗಳನ್ನು ಅರ್ಪಿಸುವೆವು. ಕೊನೆಯದಾಗಿ, ಈ ಪುಸ್ತಕದ ಪ್ರಕಟಣೆಗೆ ಹಲವು ತರದ ಸೌಕರ್ಯಗಳನ್ನು ಒದಗಿಸಿಕೊಟ್ಟು ಉಪಕರಿಸಿದ ಮತ್ತು ಇದನ್ನು ಮದ್ರಾಸ್ ವಿಶ್ವವಿದ್ಯಾನಿಲಯದ ಕನ್ನಡ ಪುಸ್ತಕ ಮಾಲೆಯಲ್ಲಿ ಸೇರಿಸಿಕೊಳ್ಳಲು ಅನುಮತಿಕೊಟ್ಟಿರುವ ನಮ್ಮ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೂ ನಾವು ಚಿರಋಣಿಗಳಾಗಿರುವೆವು.

ವಿಶ್ವವಿದ್ಯಾನಿಲಯ,
ಮದ್ರಾಸು.
೩೦—೬—೫೫

ಎಂ. ಮರಿಯಪ್ಪ ಭಟ್ಟ,
ಮತ್ತು
ಎಂ. ಗೋವಿಂದ ರಾವ್,
ಸಂಪಾದಕರು.

॥ ಶ್ರೀ ॥

ಶ್ರೀ ವೀತರಾಗಾಯನಮಃ

ಶ್ರೀ ಪಂಚಪರಮೇಷ್ಠಿಭ್ಯೋನ್ನಮಃ

# ಜಾತಕತಿಲಕಂ

**ಶ್ರೀಧರಾಚಾರ್ಯ ವಿರಚಿತಂ**

---

ಕಂ ॥ ಶ್ರೀಮದನಂತ ಚತುಷ್ಟಯ ।
ಧಾಮಂ ಜಿತದುರಿತಸಮಿತಿ ನಿಶ್ರೇಯಸ ಲ ॥
ಕ್ಷ್ಮೀಮಹಿತಂ ತ್ರೈಲೋಕ್ಯ ।
ಸ್ವಾಮಿಜಿನಂ ಮಾಟ್ಕೆಯೆಮಗೆ ಶಾಶ್ವತಪದಮಂ ॥ ೧ ॥

[1]ಶ್ರುತಮೂರ್ತಿಯಾಗಿಯುಂ ರುಚಿ ।
ರತನು ಕರಂ ಬಿಳಿಯಳಾಗಿಯುಂ ಚತುರವಚೋ ॥
ನ್ನಿತೆ ಬಾಯ್ವಾಯೊಳ್ನೆಲಸಿಯು ।
ಮತಿಶುಚಿ ವಾಗ್ದೇವಿ ಕೂರ್ತು ಮಾಟ್ಕೆಮಗಱಿವಂ ॥ ೨ ॥

ಭ್ರಾಂತೇಂ ಜಗತ್ಪ್ರಸಿದ್ಧ ಚಿ ।
ರಂತನ ನೂತನ ಮಹಾಕವೀಶ್ವರಕೃತಿ ಶಾ ॥
ಸ್ತ್ರಾಂತರಸ್ಮಾರತೆ ನಿಲ್ಕೆ ನಿ ।
ರಂತರಮಸ್ಮತ್ಪ್ರಣೀತ ಜಾತಕಕೃತಿಯೊಳ್ ॥ ೩ ॥

ಉದಧಿವೃತೋರ್ವಿಗೆ ಮುಖಮೆನಿ ।
ಸಿದ ಬೆಳುವಲ ನಾಟ್ಗೆ ತಿಲಕದಂದದ ನಱುಗುಂ ॥
ದದ ವಿಪ್ರಕುಲೋತ್ತಮನ ।
ಭ್ಯುದಿತಯಶಂ ಶ್ರೀಧರಂ ವಚೋವಿಭವಧರಂ ॥ ೪ ॥

ಮ ॥ ಅನವದ್ಯಂ ಕವಿತಾಗುಣಾರ್ಣವನಿಳಾದೇವಾನ್ವಯಾಬ್ಧ್ಯಂಬುಜಾ ।
ರಿನಿಭಂ ಪ್ರೌಢವಿಳಾಸಿನೀಮನಸಿಜಂ ಶ್ರೀ ಶೀಲಭದ್ರಂ ದ್ವಿಷ ॥
ಜ್ಜನ ದುರ್ಭಾರ ಗಜಾಂಕುಶಂ ಸುಜನರತ್ನಂ ತಾನೆನಲ್ಕೇಂ ಕೃತಾ ।
ರ್ಥನೊ[1] ಕರ್ಣಾಟಕವೀಂದ್ರ ಸದ್ಗುಣಗಣಾ ಸಂಜ್ಞಾಧರಂ ಶ್ರೀಧರಂ ॥ ೫ ॥

---

1. ಈ ಭಾಗ ಕ ಪ್ರತಿಯಲ್ಲಿ ಮಾತ್ರವಿದೆ.

ಕಂ ॥ ಧರಣೀಸ್ತುತಾರ್ಯಭಟನಂ ।
ನಿರತಿಶಯೋಜ್ವಳಯಶಃಪ್ರಕೋರಕನಂ ಶ್ರೀ ॥
ಕರಣಮೆನೆ ನೆಗಳ್ದಿನಂ[1]ಕರ ।
ಣರತ್ನ[1]ಮೆಂಬುದು ಜಗಜ್ಜನಂ ಶ್ರೀಧರನಂ ॥ ೬ ॥

ಮ ॥ ಬರೆಪಂ ಚಿತ್ರಿತ ಚಿತ್ರದಂತೆ ಮೃದುರೇಖಾಮಂಡನಾಡಂಬರ ।
ಸ್ಫುರಿತಂ ಭಾಜನೆ ಪನ್ನಗಧ್ವಜಮಹೀಭೃತ್ಸೇನೆವೋಲ್ ಕರ್ಣಸೌಂ ॥
ದರಮುದ್ಯತ್ಕವಿತಾಗುಣಂ ಕಣಿಕೆವೋಲ್ ಭಾವಾದ್ಯಳಂಕಾರಬಂ ।
ಧುರಮೆಂಬುನ್ನತಿಯಿಂ ಜಗಕ್ಕೆ ನೆಗಲ್ದಂ ವಾಕ್ಶ್ರೀಧರಂ ಶ್ರೀಧರಂ ॥ ೭ ॥

ಉ ॥ ಅಂಕದ ಕಬ್ಬಿಗರ್ ಕೃತಿಗಳಂ ಮೆಱೆವರ್ ಪರಿಪೂರ್ಣವರ್ಣನಾ ।
ಳಂಕರಣಂಗಳಿಂದಮದು ಚೋದ್ಯಮೆ ಜೋಯಿಸಗಬ್ಬಮೊಪ್ಪೆ ಸ ॥
ಲ್ಲಂ ಕವಿಮಾರ್ಗದುರ್ಗಮದಱೊಳ್ ರಸಮಂ ಪಡೆಯಲ್ಕೆ ಪೂಣೆನೀ ।
ರಂ ಕಡೆವಲ್ಲಿ ಬೆಣ್ಣೆದೊರೆವಂತೆವೋಲಕ್ಕುಮದೇಂ ಸುಸಾಧ್ಯಮೋ ॥ ೮ ॥

ಕಂ ॥ ಸ್ವರುಚಿವಿರಚನೆಯೊಳೋರೊ ।
ರ್ಮೆ ರಂಜಿಕುಂ ಕುಕವಿಯಾದೊಡಂ ಸಂತತಮಾ ॥
ತ್ಮರುಚಿ ವ್ಯಪೇತ ಶಾಸ್ತ್ರಾ ।
ರ್ಥರಚನೆಯೊಳ್ ಸುಕವಿಯಲ್ಲದೊಂ ರಂಜಿಪನೇ ॥ ೯ ॥

ವಿಬುಧಕದಂಬಕಮಱಿಗುಂ ।
ವಿಬುಧಪರಿಶ್ರಮಮನಸುಖದಿಂದೆ ಮಗಂಬೆ ॥
ತ್ತಬಲೆಯರಱಿವಂದದೆ ಬಂ ।
ಜೆ ಬೇನೆಯಱಿದಪಳೆ ಕುಕವಿಯೇನಱಿದಪನೇ ॥ ೧೦ ॥

ತ್ರುತಿ ಸುಂದರಮೆನೆ [2]ಜಟಿ[2]ತಿ ।
ಪ್ರತೀತಕಳಮೆನೆ ಮನೋಜ್ಞಮೆನೆ ದೋಷವಿವ ॥
ರ್ಜಿತಮೆನೆ ವಿರಚಿಸಿ ಮೆಱೆವುದು ।
ಕೃತಿಯಂ ಕೃತಿ[3]ತತಿ[3]ಗೆ ಶಾಸ್ತ್ರಕವಿತಾಚತುರಂ ॥ ೧೧ ॥

ಪದಪೂರಣಮನಣಂ ಪುಗಿ ।
ಸದೆ ಕುದಿದು ವೃಥಾಕ್ಷರಂಗಳಂ ಪ್ರಾಸದೊಳಿ ॥
ಕ್ಕದೆ ಶಾಸ್ತ್ರದರ್ಥಮಂ ಬಿಸು ।
ಡದೆ ಪೂಣ್ಕೆಯಿನೋದುವೇಟ್ಠೋದಾರ್ ಮೆಚ್ಚರಿದಂ ॥ ೧೨ ॥

ಜೋಯಿಸಗಬ್ಬಮಿದೆನ್ನದೆ ।
ಚೀಯೆನ್ನದಸಾರಮೆನ್ನದೆನ್ನರುಮದಱಿಂ ॥
ಜೀಯೆನೆ ತಜ್ಞರ್ ವಿಬುಧಾ ।
ದೇಯಮಿದೆನೆ ಪೇಳ್ದು ಮೆಱೆವು[4]ದಱಿವಂ[4] ಮೆಱೆವೆಂ ॥ ೧೩ ॥

1. ತರಣಿರತ 2. ಝುಡಿ 3. ಕಲಿ 4. ದದಱಿಂ



ಕಂ ॥ ಸೂಚಿಸಿದೆಂ ಶಾಸ್ತ್ರಾರ್ಥಮ ।
ನೌಚಿತ್ಯದಿನಱಿದುಕೊಳುವುದೆನ್ನದೆ ಮುನ್ನಂ ॥
ಗೋಚರಮಾಗಲೊಡಂ ಪ್ರ ।
ದ್ಗೋಚರಮಪ್ಪಂತಿರೋದಿ ಪೇಳ್ವುದು [1]ಕಜ್ಞಂ[1] ॥ ೧೪ ॥

ತ್ರಿಜಗತ್ಸಾರಂ ಭಾವಿಪೊ ।
ಡೆ ಜೋಯಿಸಂ ಸಾರಮ[2]ಲ್ಲಿ[2] ಜಾತಕಮದು ವಿ ॥
ಶ್ವಜನಾನಂದಿತ ಜೋತಿಷ ।
ಮಾಜಾತಕಮೆನಿಪ ಸೂಕ್ತಿಸಾಧಕಮದಱಿಂ ॥ ೧೫ ॥

ಮುನ್ನಾರುಂ ಜಾತಕಮಂ ।
ಕನ್ನಡದಿಂ ವ್ಯಕ್ತಮಾಗೆ ಪೇಳ್ದನ್ನಿತರಿ ॥
ಲ್ಲಿನ್ನುಂ ಪೇಳ್ದಿ ಪರಿಲ್ಲು ।
ತ್ಪನ್ನಂ ಶ್ರೀಧರನೆ ಪೇಳ್ಗುಮೆಂದಾದರದಿಂ ॥ ೧೬ ॥

ಸಕಳಬುಧನಿವಹಮೊತೆಟ ।
ದೆ ಕೊಂಡುಕೊನೆದೊಳ್ಪುವಡೆಯೆ ನೀಂ ಪೇಳ್ವುದು ಜಾ ॥
ತಕತಿಲಕಮನೆನೆ ಪಲರ್ಗಱ ।
ಯೆ ಕನ್ನಡದಿನೆಸೆಯೆ ಪೇಟಲುದ್ಯತನಾದೆಂ ॥ ೧೭ ॥

ಪಲವುಂ ಶಾಸ್ತ್ರಂಗಳೊಳಂ ।
ಪಲಾಲಮಂ ಬಿಸುಟು ಸಾರಮಂ ತೆಗೆದು ಬುಧಾ ॥
ವಳಿಗೆ ತಿಳಿವಂತು ಜಾತಕ ।
ತಿಲಕಮನುದಿತಬುಧತಿಳಕಮಂ ವಿರಚಿಸುವೆಂ ॥ ೧೮ ॥

ಭವಬದ್ಧ ಶುಭಾಶುಭ ಕ ।
ರ್ಮವಿಪಾಕದ ಫಲಮನಱಿಪುಗುಂ ಜ್ಯೋತಿಜ್ಞಾ ॥
ನವದೆಂತೆನೆ ಕಟ್ಟಲೆವನೆ ।
ಯ ವಸ್ತುವಂ ತೋರ್ಪ ಸೊಡರ ಬೆಳಗಿನ ತೆಱದಿಂ ॥ ೧೯ ॥

ಇದು
ಪೀಠಿಕೆ

1. ತಜ್ಞಂ 2. ಲ್ತೆ

# ಪ್ರಥಮಾಧಿಕಾರಂ

## ಸಂಜ್ಞಾಪ್ರಕರಣ ವರ್ಣನಂ

ಕಂ ॥ ಎಡೆಯುಡುಗದೆ ಕಾಲಾಂಗದೊ ।
ಳೆಡೆಗಳ ಜಾಡಿಗೆ ಶಿರಂ ಮುಖಂ ತೋಳ್ ಹೃದಯಂ ॥
ಪೊಡೆ ಕಟಿವಸ್ತಿವ್ಯಂಜನ ।
ತೊಡೆ ಮೊಣಕಾಲ್ ಜಂಘೆ ಪದಗಳಕ್ಕುಂ ಕ್ರಮದಿಂ ॥ ೧ ॥

ತರದಿಂದಂ ಲೋಹಿತಸಿತ ।
ಹರೀತಪಾಟಳಿಮಪಾಂಡು ವೈಚಿತ್ರ್ಯಸಿತೇ ॥
ತರಕಾಂಚನ ಪಿಂಗಳ ಕ ।
[1]ರ್ಬುರ ಬಭ್ರುವಮಳಿನವರ್ಣಮಿವು [2]ಗ್ರಹವರ್ಣಂ ॥ ೨ ॥

ಹರಿ ಮಿಥುನ ತುಳಾಜ ಧನು ।
ರ್ಧರ ಘಟಮಿವು ಪುರುಷರಾಶಿಗಳ್ ಕ್ರೂರಂಗಳ್ ॥
ತರುಣಿ ಮೃಗ ಕರ್ಕಟಕ ಶಾ ।
ಕ್ವರ ವೃಶ್ಚಿಕ ಝುಷಮಿವಬಲೆಗಳ್ ಸೌಮ್ಯಂಗಳ್ ॥ ೩ ॥

ಚರರಾಶಿ ಕುಳೀರ ತುಳಾ ।
ಧರ ಮೃಗ ಮೇಷಂ ಘಟೋಕ್ಷ ವೃಶ್ಚಿಕ ಸಿಂಹಂ ॥
ಸ್ಥಿರರಾಶಿ ಧನು ಝುಷಂ ಸುಂ ।
ದರಿ ಮಿಥುನಂ ದ್ವಿಸ್ವಭಾವರಾಶಿಗಳೆನಿಕುಂ ॥ ೪ ॥

ಅಮರಾಸೆಯನಜ ಹರಿ ಧನು ।
ಯಮಾಸೆಯುಂ ವೃಷಭ ಕನ್ಯಕಾ ಮಕರಂ ಪ ॥
ಶ್ಚಿಮಮಾ ಮಿಥುನತುಳಾ ಕುಂ ।
ಭಮಾಳ್ದುಮುದಗಾಸೆಯುಂ ಕುಳೀರಾಳಿ ಝುಷಂ ॥ ೫ ॥

ಶನಿ ಘಟ ಮೃಗಕ್ಕೆ ಗುರು ಝುಷ ।
ಧನುಗೆ ಬುಧಂ ಮಿಥುನ ವಧುಗೆ ಶಶಿ ಕರ್ಕಿಗೆ ಭೌ ॥
ಮನಜಾಳಿಗೆ ರವಿ ಹರಿಗುಶ ।
ನನುಕ್ಷತೌಳಿಗೆ ತದಂಶಕಕ್ಕಮಧೀಶರ್ ॥ ೬ ॥

[3]ಭವನಂ ದ್ವಾದಶಭಾಗಂ ।
ನವಾಂಶಕಂ ತ್ರಿಂಶಾಂಶಕಹೋರಾದ್ರೇಕ್ಕಾ ॥
ಣವೆನಿಪ್ಪಿನಿತುಂ ಷಡ್ವ ।
ರ್ಗವೆಂಬಪೆಸರಿಂ ಪ್ರವರ್ತಿಕುಂ ಬುಧಮಿತ್ರಾ ॥ ೭ ॥

1. ರ್ವು 2. ಗೃ 3. ಈ ಪದ್ಯ ಕ ಪ್ರತಿಯಲ್ಲಿ ಆಶ್ವಾಸದ ಅಂತ್ಯದಲ್ಲಿದೆ.



ಮ ॥ ಕ್ರಮದಿಂ ದ್ವಾದಶಭಾಗವೊಂದು ಗೃಹಕಕ್ಕುಂ ತದ್ಗೃಹದ್ವಾದಶಾಂ ।
ಶಮನಾಳ್ವರ್ ಸ್ವಗೃಹಾಧಿರಾಶಿಪತಿಗಳ್ ದ್ರೇಕ್ಕಾಣಮಾಮ್ಲೂಱನಿ ॥
ಕ್ಕುಮಧೀಶಂ ಪ್ರಥಮಕ್ಕೆ ತತ್ಪ್ರಥಮರಾಶೀಶಂ ದ್ವಿತೀಯಕ್ಕೆ ಪಂ ।
ಚಮರಾಶೀಶ್ವರನಲ್ಲಿ ಮೂಱನೆಯದಕ್ಕಕ್ಕುಂ ನವಕ್ಕಾರ್ಧಿಪಂ ॥ ೮ ॥

ಚಂ ॥ ಮೃಗಪತಿ ಮೇಷಚಾಪಧರರಾಶಿಗೆ ಮೇಷಗೃಹಾದಿ ಕನ್ಯಕಾ ।
ಮೃಗವೃಷಭಾಭಿಧಾನಭವನಕ್ಕೆ ಮೃಗಾದಿ ನೃಯುಗ್ಮ ಕುಂಭತೌ ॥
ಳಿಗೆ ವೃಷಭಾದಿ ಕರ್ಕಿ ಶಫರಾಳಿಗೆ ಕರ್ಕಟಕಾದಿಯಾಗಿರಲ್ ।
ಬಗೆದು ನಿಜಾಂಶಕಕ್ಕೆಣಿಸು ರಾಶ್ಯಧಿಪಾಂಶಮದಾನವಾಂಶದೊಳ್ ॥ ೯ ॥

ಮ ॥ ಕುಜನೈದಂ ತನಿಯುಯ್ದುನೆಂಟನಮರೇಂದ್ರಾಮಾತ್ಯನೇೞಂ ಶಶಾಂ ।
ಕಜನೈದಂ ಭೃಗುನಂದನಂ ವಿಷಮದೊಳ್ ದೈತ್ಯೋಜನೈದಂ ಹಿಮಾಂ ॥
ಶುಜನೇೞಂ ಗುರುವೆಂಟನರ್ಕತನಯಂ ತಾನೈದನೈದಂ ಸಮಂ ।
ಕುಜನಾಳ್ಗುಂ ಸಮದೊಳ್ ಯಥಾಕ್ರಮದೆ ರಾಶಿ ತ್ರಿಂಶದಂಶಂಗಳೊಳ್ ॥ ೧೦ ॥

ಕಂ ॥ ಗ್ರಹಮೆರಡು ಹೋರೆ ಸಮದಾ ।
ದಿಹೋರೆಗುಡುನಾಥನಿತರಹೋರೆಗೆ ಪಂಕೇ ॥
ರುಹಮಿತ್ರನಸಮಗೃಹದಾ ।
ದಿ ಹೋರೆಗರ್ಕನಿತರಕ್ಕೆಯುಡುಪತಿಯಧಿಪಂ ॥ ೧೧ ॥

ಚಂ ॥ ಹರಿವೃಷಮೇಷಚಾಪಮಕರಾದಿಮಭಾಗಗೃಹಂ ಚತುಷ್ಪದೋ ।
ತ್ಕರಮಬಳಾತುಳಾಮಿಥುನಮಸ್ತಕಹೀನಘಟಂ ಮನುಷ್ಯಮಂ ॥
ದಿರಮನಿಮೇಷ ಕುಂಭಮಕರಾಪರಭಾಗನಿಕೇತನಂ ಪಯ ।
ಶ್ಚರಪತಿ ಕೀಟಮೆಂಬುದದು ಕರ್ಕಿಸರೀಸೃಪಜಾತಿ ವೃಶ್ಚಿಕಂ ॥ ೧೨ ॥

ಸುರಪತಿ ಕಾಷ್ಠೆ[1]ಯೊಳ್ ನರಗೃಹಂ ಯಮದಿಙ್ಮುಖದೊಳ್ ಚತುಷ್ಪದಂ ।
ವರುಣದಿಶಾಂತರಾಳದೊಳೆ ಕೀಟಗೃಹಂ ಧನದಾಸೆಯೊಳ್ ಪಯ ॥
ಶ್ಚರಗೃಹಮಲ್ಲಿ[2] ಕೀಟಗೃಹಮಂತದು ಸಂಜೆಗಳೊಳ್ ಚತುಷ್ಪದೋ ।
ತ್ಕರಮಿರುಳೊಳ್ ಮನುಷ್ಯಭವನಂ ಪಗಲೊಳ್ ಬಳವಂತಮಾವಗಂ ॥ ೧೩ ॥

ಮ ॥ ಯುವತೀದಂಪತಿ ತೌಳಿ ಕುಂಭಧರಚಾಪಾದ್ಯರ್ಧಗೇಹಂಗಳೆಂ ।
ಬಿವು ದಲ್ ಗ್ರಾಮವರೇಣ್ಯಜಂ ಮಕರಪೂರ್ವಾರ್ಧಂ ಮೃಗಾಧೀಶಮೆಂ ॥
ಬಿವೆ ಚಾಪಾಪರಭಾಗವೃಶ್ಚಿಕವೃಷಾಜಂಗಳ್ ವನಗ್ರಾಮಸಂ ।
ಭವಮಕ್ಕುಂ ಮಕರಾಪರಾರ್ಧ ಝುಷಕರ್ಕಿಕ್ಷೇತ್ರಮಂತಶ್ಚರಂ ॥ ೧೪ ॥

ಕಂ ॥ ಕ್ರಮದಿಂ ತನುಧನ ಸಹಜಾ ।
ತ[3]ಮಿತ್ರ ಪುತ್ರಾರಿ ಯುವತಿ ನೈಧನಧರ್ಮೋ ॥
ದ್ಯಮ ಲಾಭವ್ಯಯಮೆಂದಿನಿ ।
ತುಮಿವಕ್ಕುಂ ಲಗ್ನಭಾವ ನಾಮಫಳಂಗಳ್ ॥ ೧೫ ॥

1. ಷ್ಠದೊಳ್ 2. ಲ್ತೆ 3. ಮಾತೃ

ಕಂ ॥ ವ್ಯವಹರಿಪ ಸಂಜ್ಞೆ ಚತುರ ।
ಸ್ರವಮೆಂದಷ್ಟಮ ಚತುರ್ಥಗ್ರಹಕೆ ಚತುರ್ಥ ॥
ಕ್ಕೆವಲಂ ಮತ್ತಂ ಪಾತಾ ।
ಳವೇಶ್ಮ ಸುಖ ಹಿಬುಕ ಬಂಧುವೆಂದೈದು ಪೆಸರ್ ॥ ೧೬ ॥

ಮ ॥ ನವಮಂ ಪಂಚಮಜಂ ತ್ರಿಕೋಣಮೆನೆ ಸಲ್ಗುಂ ತ್ರಿತ್ರಿಕೋಣಾಖ್ಯಮಾ ।
ನವಮಂ ಪಂಚಮರಾಶಿ ಬುದ್ಧಿಯೆನಿಕುಂ ದುಶ್ಚಿಕ್ಯ ಸಂಜ್ಞಂ ತ್ರಿದಲ್ ॥
ಮೊದಲಾ ದ್ವಾದಶರಾಶಿ ರಿಪ್ಫಮದು ಜಾಮಿತ್ರಂ ದ್ಯುನದ್ಯೂನಮೆಂ ।
ದುವಲಂ ಸಪ್ತಮರಾಶಿ ಛಿದ್ರಮದು ಲಗ್ನಕ್ಕಷ್ಟಮಸ್ಥಾನಕಂ ॥ ೧೭ ॥

ಕಂ ॥ ಉದಯುದಶಾಸ್ತಮಯ ಚತು ।
ರ್ಥದೆಡೆಗೆ ಕೇಂದ್ರಂ ಚತುಷ್ಟಯಂ ಕಂಟಕಮೆಂ ॥
ಬುದು ಸಂಜ್ಞೆ ತತ್ಪರಂ ತಾ ।
ನದು ಪಣಫರಮದಱ ಪರಮದಾ[1]ಬೋಕ್ಲೀಬಂ ॥ ೧೮ ॥

ಉಪಚಯ ಭವನಂ ಮೂಱಾ ।
ಱು ಪತ್ತು ಪನ್ನೊಂದೆನಿಪ್ಪ ನಾಲ್ಕೆ ಗೃಹಂ ಮ ॥
ತ್ತಪಚಯಭವನಂ ಪರಿಭಾ ।
ವಿಪೊಡುೞಿದೆಂಟುಂ ಗೃಹಂ ಗ್ರಹಕ್ಕೆ ಗೃಹಕ್ಕಂ ॥ ೧೯ ॥

ಅಂಶಕದೊಳ್ ವರ್ಗೋತ್ತಮ ।
ದಂಶಕಮಕ್ಕುಂ ಸಮಸ್ತ ಚರರಾಶಿಗಳಾ ॥
ದ್ಯಂಶಕಮುಂ ಸ್ಥಿರಗೃಹ ಮ ।
ಧ್ಯಾಂಶಕಮುಂ ದ್ವಿ[2]ಸ್ವಭಾವದಂತ್ಯಾಂಶಕಮುಂ ॥ ೨೦ ॥

ಮ ॥ ಲಲನಾವೃಶ್ಚಿಕತೌಳಿ ಕುಂಭಹರಿಗಳ್ ಶೀರ್ಷೋದಯಂಗಳ್ ದಿವಾ ।
ಬಲಿಗಳ್ ಮೇಷನೃಯುಗ್ಮ ಕರ್ಕಿ ಮೃಗಚಾಪಾಕ್ಷಾಲಯಂಗಳ್ ನಿಶಾ ॥
ಬಲಿಗಳ್ ಭಾವಿಪೊಡಲ್ಲಿಯುಂ ನೃಮಿಥುನಂ ತಾನಾಗೆ ಪೃಷ್ಠೋದಯಂ ।
ಗಳುಮಿನ್ನೊಂದು ಭವೋದಯಂ ಝಷಗೃಹಂ ಬಲ್ಲಿತ್ತಹಃಕಾಲದೊಳ್ ॥ ೨೧ ॥

ಕಂ ॥ ದಿನ[3]ಪತಿಗೆ ಮೇಷಮಿನನಂ ।
ದನಂಗೆ ತೊಲೆ ಗುರುಗೆ ಕರ್ಕಿ ಶುಕ್ರಂಗೆ ಝಷಂ ॥
ಕನಕಂಗೆ ಮೃಗಂ ಮೃಗಲಾಂ ।
ಛನಂಗೆ ವೃಷಭಂ ಬುಧಂಗೆ ಕನ್ನೆ ನಿಜೋಚ್ಚಂ ॥ ೨೨ ॥

ಮ ॥ ದಿನಪಂ ಪತ್ತಱೊಳುರ್ವರಾತನಯನಿಪ್ಪತ್ತೆಂಟಱೊಳ್ ಭಾನುನಂ ।
ದನನಿಪ್ಪತ್ತಱೊಳೈದಱೊಳ್ [4]ಗುರು ಶಶಾಂಕಂ ಮೂಱಱೊಳ್ ಶೀತರು ॥
ಕ್ತನುಜಾತಂ ಪದಿನೈದಱೊಳ್ ಭೃಗುಜನಿಪ್ಪತ್ತೇೞಱೊಳ್ ನಿಂದೊಡ ।
ಲ್ಲಿ ನಿಜೋಚ್ಚಾಲಯಭಾಗದಲ್ಲಿ ಪರಮೋಚ್ಚಸ್ಥಾಯಿ ತಾನಾ[5]ಗ್ರಹಂ ॥ ೨೩ ॥

1. ಪೋ 2. ತ್ವ 3. ಪಂ 4. ದು 5. ಗೃ



ಕಂ ॥ ದಿನಪಾದಿಗಳುಚ್ಚಕ್ಕೇ ।
ೞನೆಯ ಗೃಹಂ ನೀಚಮವರ್ಗೆ ಹರಿವೃಷಮಜಘಂ ॥
ಗನೆ ಧನು ತೊಲೆ ಕುಂಭಮಿವಿಂ ।
ತಿನಿತುಂ ಮೂಲತ್ರಿಕೋಣಮಕ್ಕುಂ ಕ್ರಮದಿಂ ॥ ೨೪ ॥

ಚಂ ॥ ಸಮನಿಸುಗುಂ ತೃತೀಯದಶಮಂಗಳನೀಕ್ಷಿಸೆ ಪಾದದೃಷ್ಟಿ ಪಂ ।
ಚಮ ನವಮರ್ಕ್ಷಮಂ ಗೃಹಮುಮಂ ಗೃಹಮೀಕ್ಷಿಪೊಡರ್ಧದೃಷ್ಟಿಯ ॥
ಷ್ಟಮಮುಮನಾ ಚತುರ್ಥಮುಮನೀಕ್ಷಿಸೆ ಪಾದವಿಹೀನದೃಷ್ಟಿ ಸ ।
ಪ್ತಮಮನಭೀಕ್ಷಿಸಲ್ ಸಕಳದೃಷ್ಟಿ ತದೀಕ್ಷಣದೊಳ್ ಸಮಂ ಫಲಂ ॥ ೨೫ ॥

ಮ ॥ ರವಿಪುತ್ರಂ ತ್ರಿದಶಸ್ಥನೀಕ್ಷಿಸುವೊಡರ್ಧಂ ದೃಷ್ಟಿ ದೇವಾರ್ಚಿತಂ ।
ನವಪಂಚಾಳಯಸಂಸ್ಥನೀಕ್ಷಿಪೊಡೆ ಪಾದೋನಕ್ರಮಂ ದೃಷ್ಟಿ ನೋ ॥
ಡುವೊಡಾರಂ ಚತುರಶ್ರಗಂ ಸಕಳಮಕ್ಕುಂ ದೃಷ್ಟಿಶೇಷಗ್ರಹ ।
ಕ್ಕೆ ವಿಶೇಷೇಕ್ಷಣಮಿಲ್ಲ ಪೂರ್ವಗದಿತಾಲೋಕಕ್ರಮಂ ಕೂಡುಗುಂ ॥ ೨೬ ॥

ಇದು

ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ಸಂಜ್ಞಾಪ್ರಕರಣ ವರ್ಣನಂ

**ಪ್ರಥಮಾಧಿಕಾರಂ**

# ದ್ವಿತೀಯಾಧಿಕಾರಂ

## ಬಲಾಬಲಪ್ರಕರಣ ವರ್ಣನಂ

ಕಂ ॥ ಸುರಪತಿ ಶಿಖಿ ಯಮ ನೈರುತಿ ।
ವರುಣಮರುದ್ಧನದ ಪುರಹರಾಶಾಪತಿಗಳ್ ॥
ತರದಿಂ ಭಾಸ್ಕರ ಭೌಮಭೃ ।
ಗುರಾಹು[1]ಮಂದೇಂದು ಚಂದ್ರನಂದನ[1] ಗುರುಗಳ್ ॥ ೧ ॥

ಭೃಗುಸುತ ಗುರುಬುಧಪೂರ್ಣೇಂ ।
ದುಗಳ್ ಶುಭಗ್ರಹರಿನಾರ ವಕ್ರಕ್ಷೀಣೇಂ ॥
ದುಗಳಶುಭಗ್ರಹರಾ ಕ್ರೂ ।
ರಗಣದೊಳೊಂದಿದೊಡೆ ಸೋಮಸುತನುಂ ಕ್ರೂರಂ ॥ ೨ ॥

ದಿನಪತಿ ವಾಕ್ಪತಿ ವಸುಧಾ ।
ತನಯರ್ ಪುರುಷಾಧಿಪರ್ ಸುಧಾಕರ ಭೃಗುನಂ ॥
ದನರಂಗನಾಧಿಪರ್ ಶಶಿ ।
ಜನುಮರ್ಕಜನುಂ ನಪುಂಸಕಾಧಿಪರೆನಿಕುಂ ॥ ೩ ॥

ಪತಿ ಋಗ್ವೇದಕ್ಕೆ ಬೃಹ ।
ಸ್ಪತಿ ದಾನವಪೂಜಿತಂ ಯಜುರ್ವೇದಕ್ಕಾ ॥
ಕ್ಷಿತಿಸೂನು ಸಾಮವೇದ ।
ಕ್ಕೆ ತುಷಾರಾಂಶುಜನಥರ್ವವೇದಕ್ಕಕ್ಕುಂ ॥ ೪ ॥

ಸಿತವಾಕ್ಪತಿಗಳಿಳಾಮರ ।
ಪತಿಗಳ್ ಕ್ಷತ್ರಾಧಿಪರ್ ಕುಜಾರ್ಕರ್ ದೋಷಾ ॥
ಪತಿ ವೈಶ್ಯಸ್ವಾಮಿ ನಿಶಾ ।
ಪತಿಜಂ ಶೂದ್ರಪತಿ ಸಂಕರಾಧಿಪನಸಿತಂ ॥ ೫ ॥

*ಸುಹೃದಾಲಯದೊಳ್ ಮೇಣ್ ನಿಜ ।
ಗೃಹದೊಳ್ ತನ್ನುಚ್ಚದೊಳ್ ಸ್ವಕೀಯಾಂಶಕದೊಳ್ ॥
ಗ್ರಹಮಿರೆ ಮೇಣ್ ತದುಪಗತ ।
ಗ್ರಹದೃಷ್ಟಿ ಕೂಡೆ ಮೇಣ್ ಕಾಣ್ಬೊಡೆ ಬಲವಂತಂ ॥ ೬ ॥

ಒಡನಿರೆ ಗೃಹಪತಿ ಮೇಣ್ ಕಾ ।
ಣ್ಬೊಡೆ ಮೇಣಾರಾಶಿಯುಂ ಬುಧಾಂಗಿರಸರ್ಕಾ ।
ಣ್ಬೊಡೆ ಬಲವಂತಂ ತದ್ಗೃಹ ।
ದೊಡನನ್ಯರ್ಕೂಡದಿರ್ದೊಡಂ ಕಾಣದೊಡಂ ॥ ೭ ॥

1. ಮದೆಂದು ಚಂದ್ರನೆಂದುಂ *ಈ ಭಾಗವು ಕ ಪ್ರತಿಯಲ್ಲಿ ಮಾತ್ರವಿದೆ.



ಕಂ ॥ ರಾತ್ರೀಶಭೃಗುಜರಬಳಾ ।
ಕ್ಷೇತ್ರಂಗಳೊಳಿರೆ ಬುಧಾರ್ಕಮಿತ್ರಧರಿತ್ರೀ ॥
ಪುತ್ರಾಂಗಿರಸಪುರ್ರುಷ ।
ಕ್ಷೇತ್ರಂಗಳೊಳಿರೆ ಬಳಾನ್ವಿತರ್ ನಿರುಪಹತರ್ ॥ ೮ ॥

ಶಕ್ರಾಶೆಯೊಳಿಂದುಜನುಂ ।
ಶಕ್ರೇಜ್ಯನುಮಂತಕಾಶೆಯೊಳ್ ಭಾಸ್ಕರನುಂ ॥
ನಕ್ರನುಮಸಿತಂ ಪಡುವಲ್ ।
ಶುಕ್ರೇಂದುಗಳುತ್ತರಾಶೆಯೊಳ್ ಬಲವಂತರ್ ॥ ೯ ॥

GOVERNMENT ORIENTAL
26 MAR 1957
MADRAS

ಉದಗಯನದೊಳಿರೆ ರಜನಿಕ ।
ರದಿವಾಕರರಿಬ್ಬರುಂ ಬಳಾನ್ವೀತರ್ವ ॥
ಕ್ರದೊಳಿರೆ ಪರಾಭವಂ ಬಾ ।
ರದೆ ಬೆಳಗುತಿರ್ದೊಡುಳಿದವರ್ ಬಲವಂತರ್ ॥ ೧೦ ॥

ಮ ॥ ಪಗಲಂಭೋರುಹಮಿತ್ರ ದೇವಗುರು ದೈತ್ಯಾಮಾತ್ಯರೆಂದಿಂತಿವರ್ ।
ಪಗಲುಂ ಮತ್ತಿರುಳುಂ ಶಶಾಂಕಜನಿರುಳ್ ಮಂದಾವನೀನಂದನೇಂ ॥
ದುಗಳಾತ್ಮೀಯ ದಿನಂಗಳೊಳ್ ದಿವಸನಾಥಾ*ದಿಗ್ರಹಶ್ರೇಣಿ ಸೌ ।
ಮ್ಯಗಣಂ ಜೊನ್ನದೊಳನ್ಯರುಂ ಬಹುಳದೊಳ್ ನಿರ್ವ್ಯಾಜದಿಂ ಬಲ್ಲಿದರ್ ॥ ೧೧ ॥

ಶನಿಯಿಂದಂ ಮಹಿಜಾತನಾಮಹಿಜನಿಂದಂ ಸೌಮ್ಯನಾಸೋಮನಂ ।
ದನನಿಂದಂ ಗುರುವಾಸುರೇಂದ್ರಗುರುವಿಂದಂ ಶುಕ್ರನಾಶುಕ್ರನಿಂ ॥
ವನಜಾತಾಹಿತನಾವನೇಜರಿಪುವಿಂ ಪಂಕೇಜಮಿತ್ರಂ ಬಳಾ ।
ಢ್ಯನೆನಿಕ್ಕುಂ ಕ್ರಮದಿಂದಮಿಗ್ರಹಬಲಂ ನೈಸರ್ಗಿಕಂ ನಾಮದಿಂ ॥ ೧೨ ॥

ಕಂ ॥ ಪ್ರಬಳಮೆನಿಕುಂ ಗ್ರಹಂ ಸ್ಥಾ ।
ನಬಳಂ ಚೇಷ್ಟಾಬಳಂ ನಿಸರ್ಗಬಳಂ [1]ಕಾ ॥
ಲ[1]ಬಳಂ [2]ದಿಶಾ[2]ಬಳಂ [3]ಪಿರಿ ।
ಯ[3]ಬಳಮೆನಿಪ್ಪಾಱುಬಳಮುಮಂ ಪಡೆದಾಗಳ್ ॥ ೧೩ ॥

ಮ ॥ ದಿನನಾಥಂಗೆ ಹಿಮಾಂಶು ಭೌಮಗುರುಗಳ್ ಸೋಮಂಗೆ ಸೂರ್ಯೇಂದುಜರ್ ।
ಕನಕಂಗಿಂ[4]ದ್ವಿನ ಮಂತ್ರಿಗಳ್ ಶಶಿಸುತಂಗರ್ಕೋಶನರ್ ಮಂತ್ರಿಗಿಂ ॥
ದ್ವಿನಭೌಮಂ ಭೃಗುಜಂಗೆ ಸೌಮ್ಯರವಿಜರ್ ಮಂದಂಗೆ ಶುಕ್ರೇಂದುನಂ ।
ದನರಾರ್ಕೈಯ್ಯೆ ನಿಸರ್ಗಮಿತ್ರರೆನಿಕುಂ ಸಮ್ಯಕ್ತ್ವರತ್ನಾಕರಾ ॥ ೧೪ ॥

ರವಿಗಿಂದೂದ್ಭವನಿಂದುವಿಂಗೆ ರವಿಜಾಂಗಾರಾಂಗಿರಃಪುತ್ರ ಭಾ ।
ರ್ಗವರಾರಂಗೆ ಸಿತಾರ್ಕಜರ್ ವಿಧುಸುತಂಗಂಗಾರ ಸೌರಾಂಗಿರರ್ ॥
ದಿವಿಜೇಜ್ಯಂಗೆ ಶನೈಶ್ಚರಂ ಭೃಗುಸುತಂಗಿಂದ್ರೇಜ್ಯಧಾತ್ರೀತನೂ ।
ಭವರಬ್ಜಪ್ರಿಯಸೂನುಗಾಂಗಿರನುದಾಸೀನಂ ಗ್ರಹಾನೀಕದೊಳ್ ॥ ೧೫ ॥

*ಇದು ವರೆಗಿನ ಭಾಗ ಕ. ಪ್ರತಿಯಲ್ಲಿ ಮಾತ್ರವಿದೆ. 1. ದೃಷ್ಟಿ 2. ಕಾಲ್ಯುದಯ 3. ಸ್ವ 4. ದಿ

ಚಂ ॥ ದಿವಸಕರಂಗೆ ಭಾರ್ಗವದಿನೇಶಸುತರ್ವಿಧುವಿಂಗೆ ವೈರಿಯಿ ।
ಲ್ಲವನಿಸುತಂಗೆ ಚಂದ್ರಸುತನಿಂದುಸುತಂಗಮೃತಾಂಶು ಮಂತ್ರಿಗೈಂ ॥
ದವಭೃಗುನಂದನರ್ ಭೃಗುಸುತಂಗೆ ರವೀಂದುಗಳರ್ಕನಂದನಂ ।
ಗವನಿತನೂಜಸೋಮಸರಸೀಜಸಖರ್ ಪಗೆವರ್ ನಿರಂತರಂ ॥ ೧೬ ॥

ಕಂ ॥ ಸಹಜಾಯುವ್ಯಯ ಧನದಶ ।
ಸುಹೃದ್ಗೃಹಸ್ಥಾಯಿಯಾಗೆ ತತ್ಕಾಲದೊಳಾ ॥
ಗ್ರಹಮಂತದು ತಾತ್ಕಾಲಿಕ ।
ಸುಹೃದ್ಗೃಹಂ ಪರಯುತಂ ದ್ವಿಷದ್ಗೃಹಮೆನಿಕುಂ ॥ ೧೭ ॥

ವೃ ॥ ಆನಿಸರ್ಗಮಿತ್ರಗ್ರಹಂ ತತ್ಕಾಲಮಿತ್ರನಾದಂದತಿಮಿತ್ರನಕ್ಕುದಾ ।
ಸೀನನುಂ ಮಿತ್ರನಕ್ಕುಂ ಶತ್ರುವಾಗಿರ್ದನುದಾಸೀನನಕ್ಕುಂ ತತ್ಕಾಲಶತ್ರು ॥
ಸ್ಥಾನದೊಳ್ ನೆಲಸಿರ್ದ ಶತ್ರುತಾನತಿ ಶತ್ರುವಕ್ಕುಂ ಮಿತ್ರನುದಾಸೀ ।
ನನಕ್ಕುಂ ಉದಾಸೀನಂ ಶತ್ರುವಕ್ಕುಂ ಕವಿರಾಜಬಾಂಧವಾ ॥ ೧೮ ॥

ಕಂ ॥ ತನು ಕೇಶಂ ಮಧು ಪಿಂಗಾ ।
ಕ್ಷನಸ್ಥಿಸಾರಂ ಸಪಿತ್ತದೇಹಂ ತಾಂ ಚತು ॥
ರನ[1]ಭಿಮತಂ ಸಮನೆಲೆ ಪೃಥು ।
ತನು ರಕ್ತಶ್ಯಾಮನೆನಿಸುಗುಂ ದಿನನಾಥಂ ॥ ೧೯ ॥

ಮೃದುವಾಕ್ಯನಶ್ರುಕ್ಸಾರಂ ।
ಸುದೃಷ್ಟಿ ಮೇಧಾವಿ ನಿಡಿಯನನಿಲಕಫಾತ್ಮಂ ॥
ಸದಯಂ ಕೆಚ್ಚನೆ ಮೆಯ್ ಬ ।
ಟ್ಟಿದನತಿಚಪಳಂ ಸಖಿಪ್ರಿಯಂ ಶಶಿಯೆನಿಕುಂ ॥ ೨೦ ॥

ತರಳಂ ಕುಬ್ಜಂ ಚಪಳಂ ।
ಸರಕ್ತಗೌರರುಚಿವ್ಯಪೈತ್ತಿಕಂ ಪಿಂಗಾಕ್ಷಂ ॥
ತರುಣಾಂಗಂ ಹಿಂಸಾತ ।
ತ್ಪರಶೀಳಮಬ್ಜಸಾರನೆನಿಸುಗುಮಾರಂ ॥ ೨೧ ॥

ಸಮುದಿತ ಸಿರೋಂಗನತಿ ಹೃ ।
ಷ್ಟಮನಂ ನಿಪುಣಂ ಪ್ರಿಯಂವದಂ ತ್ವಕ್ಸಾರಂ ॥
ಸಮದೋಷತ್ರಿತಯಂ ಮ ।
ಧ್ಯಮರೂಪಂ ಸೋಮಸೂನು ದೂರ್ವಶ್ಯಾಮಂ ॥ ॥ ೨೨ ॥

ಗೌರಚ್ಛಾಯಂ ಸ್ಥೂಳಶ ।
ರೀರಂ ಮೃದುಲೋಚನಂ ಕಫಾತ್ಮಂ ದೀರ್ಘಾ ॥
ಕಾರಂ ಸುಬುದ್ಧಿ ಮೇದ ।
ಸ್ಸಾರಂ ನಸುಗೆಂಚತಲೆಯನಕ್ಕುಂ ಜೀವಂ ॥ ॥ ೨೩ ॥

---

1. ಭೀತಂ



ಕಂ ॥ ಪವನ ಕಫಪ್ರಕೃತಿ ಸುಮಧು ।
ರವಾಣಿ ಕಾಂತಂ ಪ್ರಕೃಷ್ಟಪರ್ವಂ ಶ್ಯಾಮ ॥
ಚ್ಛವಿ ಕರಿದಪ್ಪ ಕುರುಳ್ವಲೆ ।
ಯವನತಿಸುಖಿ ಶುಕ್ಲಸಾರನಕ್ಕುಂ ಶುಕ್ರಂ ॥ ೨೪ ॥

ಅಸಿತಂ ಕಡುನಿಡಿಯಂ ಸ್ನಾ ।
ಯಿಸಾರನನಿಲಾತಿರಕ್ತನಲಸುಂಗಾರಂ ॥
ಪಿಸುಣಂ ಪಿಂಗಳಲೋಚನ ।
ನಸಿತಂ ಸ್ಥೂಳನಖದಂತರೋಮಂ ರವಿಜಂ ॥ ೨೫ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ಬಳಾಬಳಪ್ರಕರಣ ವರ್ಣನಂ

**ದ್ವಿತೀಯಾಧಿಕಾರಂ**

616

# ತೃತೀಯಾಧಿಕಾರಂ

## ಗರ್ಭಪ್ರಕರಣ ವರ್ಣನಂ

ಮ ॥ ರಮಣೀಸಂಗಮಮಾಗೆ ಸಂಭವಿಪ ಗರ್ಭಾದಾನಲಗ್ನಕ್ಕೆಸ ।
ಪ್ತಮಮಪ್ಪಾಳಯದೊಂದು ಶೀಲದವೊಲಕ್ಕುಂ ತತ್ಪ್ರಸಂಗಂ ವಿಲ ॥
ಗ್ನಮನಾಳೋಕಿಸೆ ಸದ್ಗ್ರಹಂ ನೆಲಸೆ ಮೇಣ್ಕೂಟಂ ಸರಾಗಂ ವಿರಾ ।
ಗಮದಂ ವೀಕ್ಷಿಸೆ ಕೂಡೆ ಮೇಣ್ ತದಿತರರ್ಥಂ ಮಿಶ್ರದಿಂ ಮಿಶ್ರಕಂ ॥ ೧ ॥

ರವಿಪುತ್ರಾಂಶದೊಳಕ್ಕೆ ಮೇಣ್ ಹಿಬುಕದೊಳ್ ಮೇಣ್ ವಾಕ್ಪರಾಂ
ಶಂಗಳೊಳ್ ।
ರವಿಪುತ್ರಾನ್ವಿತನಾಗಿ ಮೇಣಿರೆ ಶಶಾಂಕಂ ದೀಪಮಿಲ್ಲೆಂಗೆ ತ ॥
ದ್ಭವನಭ್ಯಂತರದೊಳ್ ತದನ್ಯಗತಿಯಿಂದಂ ದೀಪಮುಂಟೆಂಗೆ ನೋ ।
ಡುವೊಡಾ[1]ಮಾನವಿಲಗ್ನ ತಜ್ಜನನಲಗ್ನ ಪ್ರಶ್ನಲಗ್ನಂಗಳೊಳ್ ॥ ೨ ॥

ಚಂ ॥ ವನಿತೆಗೆ ಗರ್ಭಮಾಗೆ ಮೊದಲೊಳ್ ಕಲಲಂ ಸಿತನಿಂದೆವೊಂದುಗುಂ ।
ಘನಮವನೀಜನಿಂದವಯವಂ ದಿವಿಜಾರ್ಚಿತನಿಂದಮಸ್ಥಿಗಳ್ ॥
ದಿನಕರನಿಂ ತ್ವಚಂ ಹಿಮಗುವಿಂ ನವಿರರ್ಕತನೂಜನಿಂದೆ ಚೇ ।
ತನಮುಡುನಾಥಜಾತನಿನಧೀಶರಿವರೇೞು ತಿಂಗಳುಂ [ಬರಂ] ॥ ೩ ॥

ಮ ॥ ಬರೆ ಮಾಸಾಷ್ಟಕ[2]ಮಲ್ಲಿ ತಾಯುಣಿಸನುಣ್ಬುಂ ಗರ್ಭಲಗ್ನೇಶನೀ ।
ಶ್ವರನಕ್ಕುಂ ಸಿತರೋಚಿಯುಂ ನವಮಮುಕ್ಕುದ್ವೇಗಮಕ್ಕುಂ ದಿವಾ ॥
ಕರನೀಶಂ ದಶಮಾಸದೊಳ್ ಜನಿಯಿಕುಂ ಮಾಸಾಧಿಪರ್ಕಾಂತಿಗೆ ।
ಟ್ಟೊಡೆ ಗರ್ಭಕ್ಕತಿಪೀಡೆ ಸೋಲ್ತೊಡೞಿಗುಂ ನಿಲ್ಕುಂ ನಿರಾಬಾಧೆಯಿಂ ॥ ೪ ॥

ರವಿಯಿಂದೇೞಿಱೊಳಾರ ಸೌರರಿರೆ ಕುತ್ತಂ ತಂದೆಗಂತಾದೊಡಿಂ ।
ದುವಿನಿಂ ತಾಯ್ಗೆ ಕುಜಾರ್ಕಿ ಮಧ್ಯದೊಳಿನಂ ಕೂಡಿರ್ದೊಡಂ ತಂದೆಗಿಂ ॥
ದುವೆ ಮತ್ತಲ್ಲಿರೆ ತಾಯ್ಗೆ ಮೃತ್ಯು ಜನಕಂಗಕ್ಕ್ಯಾರಕರ್ ನೋಡೆ ಭಾ ।
ನುವನೊರ್ವಂ ನೆಱೆದಿರ್ಪೊಡೊರ್ವನುಡುಪಂಗಂತಾಗೆ ತಾಯ್ಗಂ ಲಯಂ ॥ ೫ ॥

ಪಗಲೊಳ್ ತಂದೆ ದಿವಾಕರಂ ಜನನಿ ಶುಕ್ರಂ ರಾತ್ರಿಯೊಳ್ ತಂದೆ ತೀ ।
ಕ್ಷ್ಣ[3]ಕುಜಂ ಮಾತೃ ಸುಧಾಮರೀಚಿ ಕಿಱಿಯಯ್ಯಂ ಸೂರ್ಯಪುತ್ರಂ ಪಗಲ್ ॥
ಮೃಗಲಕ್ಷ್ಮಂ ಕಿಱಿಯಬ್ಬೆ ಮತ್ತೆ ಕಿಱಿಯಯ್ಯಂ ಭಾಸ್ಕರಂ ರಾತ್ರಿಯೊಳ್ ।
ಭೃಗುಪುತ್ರಂ ಕಿಱಿಯಬ್ಬೆಯೆಂದಱಿಗೆ ಶಿಷ್ಟಾರಿಷ್ಟಸಂಪ್ರಾಪ್ತಿಯಂ ॥ ೬ ॥

ಚಂ ॥ ಪಗಲಿನಲಗ್ನಮಕ್ಕಿರುಳಲಗ್ನದೊಳೋಜೆ ಗೃಹಸ್ತನಾಗಿ ತಂ ।
ದೆಗೆ ಜನಕಗ್ರಹಂ ನೆಲಸೆ ಯುಗ್ಮದೊಳಾಜನನೀಗ್ರಹಂ ಸ್ವಮಾ ॥
ತೃಗೆ ಜನಕಾನುಜಂಗೆ ಕಿಱಿಯಬ್ಬೆಗೆ ತತ್ಕ್ರಮದಿಂದವೊಳ್ಪುಕೂ ।
ಡುಗುಮದು ವೈಪರೀತ್ಯಮೆನೆ ಬಂದೊಡರಿಷ್ಟಮನುಂಟುಮಾಡುಗುಂ ॥ ೭ ॥

1. ದಾ 2. ದ 3. ಗುಜಂ



ಮ ॥ ಭೃಗುಸೂರ್ಯರ್ ನಿಲೆ ಭರ್ತೃಜನ್ಮಭವನಕ್ಕಾದಾನಲಗ್ನಕ್ಕೆ ಮೇಣ್ ।
ಸ್ವಗೃಹಾಂಶೋಪಚಯರ್ಕ್ಷದೊಳ್ ಬಳಯುತರ್ ಮೇಣ್
ತತ್ವಧೂ ಜನ್ಮರಾ ॥
ಶಿಗೆ ಮೇಣ್ ಲಗ್ನಗೃಹಕ್ಕೆ ಚಂದ್ರಧರಣೀಜಾತರ್ ಬಳಾನ್ವೀತರಾ ।
ತ್ಮಗೃಹಾಂಶೋಪಚಯಸ್ಥರಾಗೆ ದೊರೆಕೊಳ್ಗುಂ ಗರ್ಭಮವ್ಯಾಜದಿಂ ॥ ೮ ॥

ಅಮರಾಧೀಶ್ವರವಂದಿತಂ ಬಳಸಮೇತಂ ಲಗ್ನದೊಳ್ ಲಗ್ನಪಂ ।
ಚಮದೊಳ್ ಮೇಣ್ ನವಮರ್ಕ್ಷದೊಳ್ ನೆಲಸೆ ಮೇಣಂಗಾರ
ಸಾರಾರ್ಕಚಂ ॥
ದ್ರಮರಾತ್ಮೀಯ ನವಾಂಶದೊಳ್ ನೆಲಸೆ ಗರ್ಭಂ ನಿಲ್ಕುಮಿನ್ನಲ್ಲಿ ವಂ ।
ದ್ಯಮನುಷ್ಯಾಳಿಗೆ ಮಾೞ್ಕುಮಾ ಮಿಥುನಭಾವಂ ನಂದನಾಭಾವಮಂ ॥ ೯ ॥

ಕಂ ॥ ಗುರುಲಗ್ನ ದಿವಾಕರ ಹಿಮ ।
ಕರರಸಮಗೃಹಾ[1] ಸಮಾಂಶಕಂಗಳೊಳೊಡಗೂ ॥
ಡಿರೆ ಪುಂ ಜನ್ಮಮೆ ಸಮಮಂ ।
ದಿರದಶಮಾಂಶಕದೊಳಿರೆ ವಧೂಟೀಜನ್ಮಂ ॥ ೧೦ ॥

ಜನ್ಮಕ್ಕಾದಾನಕ್ಕಿನ ।
ಜನ್ಮಂ ವಿಷಮಸ್ಥನಾಗೆ ಸಮನಿಸುಗುಂ ಪುಂ ॥
ಜನ್ಮಂ ನಿಲೆ ಸಮದೊಳ್ ಸ್ತ್ರೀ ।
ಜನ್ಮಮದೆಂಬುದು ಬಲಾಬಲಪ್ರಬಲತೆಯಿಂ ॥ ೧೧ ॥

ಅಸಮಾಲಯದೊಳ್ ನಿಲೆ ಸೂ ।
ರ್ಯಸುರೇಜ್ಯರ್ ಬಳಯುತಂ ನರಂ ಪುಟ್ಟುಗುಮಾ ॥
ರಸಿತೇಂದುಗಳತಿಬಳರಾ ।
ಗಿ ಸಮದೊಳಿರೆ ರಮಣಿ ಪುಟ್ಟುಗುಂ ಬುಧಮಿತ್ರಾ ॥ ೧೨ ॥

ಮ ॥ ಬಿಸಜಾತಪ್ರಿಯಮಂತ್ರಿಗಳ್ ಬಳಯುತರ್ ಮಧ್ಯಂಗಳೊಳ್ ನಿಂದೊಡಿಂ ।
ದುಸುತಂ ವೀಕ್ಷಿಸೆ ಕೂಡುಗುಂ ಯಮಳ ಪುಂ ಜನ್ಮಂ ಬೞಿಕ್ಕಲ್ಲಿ ಸೋ ॥
ಮಸಿತಾರ್ಕರ್ ನಿಲೆ ಚಾಂದ್ರಿ ನೋಡೆ ಯಮಳಸ್ತ್ರೀಜನ್ಮಮಲ್ಲಿರ್ದು [2]ವೀ ।
ಕ್ಷಿಸೆ ತತ್ಪಂಚಕಮಂ ಬುಧಂ ಯಮಳಪುಂಸ್ತ್ರೀಜನ್ಮಮೇಂ ಸಂದೆಯುಂ ॥ ೧೩ ॥

ವನಜಾತಾಹಿತಸೂನು ದಂಪತಿ ನವಾಂಶಸ್ಥಾಯಿ ಪುಂದ್ವ್ಯಂಗರಾ ।
ಶಿನವಾಂ[3]ಶೋಪಗತಾಖಿಳಗ್ರಹವಿಲಗ್ನಕ್ಷೇತ್ರಮಂ ವೀಕ್ಷಿಸಲ್ ॥
ಜನಿಯಿಕ್ಕುಂ ಪುರುಷತ್ರಯುಂ ಬುಧನೆ ಮತ್ತಂ ನೋಡೆ ಕಾಂತಾದ್ವಿದೇ ।
ಹನವಾಂಶೋಪಗತಗ್ರಹೋದಯಮುಮಂ ಪೆಣ್ಣೊಂಧೆರೞ್
ಗಂಡುಗಳ್ ॥ ೧೪ ॥

1. ಹ 2. ದೀ 3. ಶಗತಾ

ಮ ॥ ಶತಪತ್ರಾರಿಜನಂಗನಾಂಶಕಗತಂ ಸ್ತ್ರೀದ್ವಿಸ್ವಭಾವಾಂಶಕ ।
ಸ್ಥಿತ ಸರ್ವಗ್ರಹಲಗ್ನಮೆಂಬವನೆ ನೋಡಲ್ ಪುಟ್ಟುಗುಂ ಕನ್ಯಕಾ ॥
ತ್ರಿತಯಂ ತನ್ವನಿತಾಂಶಕಸ್ಥಿತ ಬುಧಂ ಪುಂದ್ವಿಸ್ವಭಾವಾಂಶಕ ।
ಸ್ಥಿತಸರ್ವಗ್ರಹಲಗ್ನವೀಕ್ಷ್ಯಕನೆನಲ್ ಗಂಡೊಂದೆರಳ್ ಪೆಣ್ಣುಗಳ್ ॥ ೧೩ ॥

ಚಂ ॥ ನವಮನವಾಂಶಕಂ ಹರಿಯಲಗ್ನದೊಳಾಗೆ ಧನುರ್ಧರಾಂಶಕಂ ।
ಸವನಿಸೆ ಬಂದ ರಾಶಿಗಳೊಂದಿದೊಡಾ ಸಕಳಗ್ರಹಂಗಳ್ಬೆಂದವಾ ॥
ಧವದಿವಸಾಧಿನಾಥಸುತರೀಕ್ಷಿಸುವಂದು ನಿಷೇಕಲಗ್ನಮಂ ।
ಯುವತಿಯ ಗರ್ಭದೊಳ್ ಪಲರುಮೊರ್ಮೆಯೆ ಪುಟ್ಟುವರೇಕ
ಕಾಲದೊಳ್ ॥ ೧೬ ॥

ಮ ॥ ಮೊದಲಾದಾನವಿಲಗ್ನದೊಳ್ ಮೃಗಘುಟಾಂಶಂ ಕೂಡೆ ಮಂದಂ ತದ ।
ಸ್ತದೊಳೊಂದಿರ್ದೊಡೆ ಪುಟ್ಟುಗುಂ ಬಸಿಱೊಳಿರ್ದುಂ ಮೂಱು
ವರ್ಷಾದಿಲ ॥
ಗ್ನದೊಳೊಂದಿರ್ದೊಡೆ ಕರ್ಕಟಾಂಶಮುದಯಸ್ಥಸ್ಥಾನದೊಳ್
ಚಂದ್ರನೊಂ ।
ದಿದೊಡಂ ದ್ವಾದಶವತ್ಸರಕ್ಕೆ ಮನುಜಂ ಗರ್ಭಸ್ಥಿತಂ ಪುಟ್ಟುಗುಂ ॥ ೧೭ ॥

ವಿದಿತಂ ಕಾಂತೆಗೆ ಪೊೞ್ತು ತೀವಿದುದು ಪೇೞ್ನಾವುದಕ್ಕುಂ ಪ್ರಸೂ ।
ತದಿನಂ ತಾನೆನೆ ಚಂದ್ರನಾವಗ್ರಹದೊಳ್ ತತ್ಕಾಲದೊಳ್ ನಿಂದನಾ ॥
ಸದನದ್ವಾದಶಭಾಗಮಂತೆನಿತು ಸಲ್ದುಂ ಮುಂತೆ ತತ್ಸಂಖ್ಯೆ ಗೇ ।
ಹದಿನತ್ತಲ್ ನಿಲೆ ಚಂದ್ರಮಂ ಪ್ರಸವಕಾಲಂ ಕಾಂತೆಗಂತಾದಿನಂ ॥ ೧೮ ॥

ಚಂ ॥ ವನಿತೆಗೆ ಪೊೞ್ತು ತೀವಿದುದು ತತ್ಪ್ರಸವಕಾಲದೊಳಾವ ಪೊೞ್ತು ಪೇ ।
ೞೆನೆ ದಿನರಾತ್ರೆ[1] ಸಂಜ್ಞೆಯುದಯಂ ಬರೆ ಬಂದ ವಿಲಗ್ನದಲ್ಲಿ ತಾ ॥
ನೆನಿತೆನೆ ಸಲ್ದು ಮುನ್ನನಿತೆ ನಾಳಿಕೆ ಜನ್ಮ [2]ಘುಟೀ[2]ಪ್ರಮಾಣಮಾ ।
ದಿನರಜನೀಪ್ರಮಾಣದನುಪಾತನದಿಂ ನಿಜಲಗ್ನಸಂಜ್ಞೆಯೊಳ್ ॥ ೧೯ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ಗರ್ಭಪ್ರಕರಣ ವರ್ಣನಂ
ತೃತೀಯಾಧಿಕಾರಂ

1. ತ್ರಿ 2. ಘಟ

# ಚತುರ್ಥಾಧಿಕಾರಂ

## ಜನ್ಮಪ್ರಕರಣ ವರ್ಣನಂ

ಕಂ ॥ ದಿವಿಜೇಜ್ಯನುಮುಡುಪತಿಯುಂ ।
ರವಿಯುಂ ಸತ್ವಗ್ರಹಂ ಶಶಾಂಕಜನುಂ ಭಾ ॥
ರ್ಗವನುಂ ರಜೋಗ್ರಹಂ ದಾ ।
ನವನುಂ [1]ಧರಣಿಜನು ಶನಿ[1] ತಮೋಗ್ರಹರೆನಿಪರ್ ॥ ೧ ॥

ಮ ॥ ದಿನಪಂ ಸತ್ವರಜಸ್ತಮೋಗ್ರಹದ ರಾಶಿತ್ರಿಂಶದಂಶಂಗಳೊಳ್ ।
ಜನನಪ್ರಸ್ತುತಕಾಲದೊಳ್ ನೆಲಸೆ ಸಾರ್ಗುಂ ತದ್ಗುಣಂ ಮೇಣ್ ವಿಲ ॥
ಗ್ನ ನವಾಂಶಾಧಿಪ ಮೂರ್ತಿಯಕ್ಕೆ ಬಳಸಂಯುಕ್ತಗ್ರಹಾಕಾರಮು ।
ಕ್ಕೆ ನರಂಗಕ್ಕುಮನೇಕಜಾತಿಕುಲದೇಶೋದ್ಭೂತ ಭೇದಂಗಳುಂ ॥ ೨ ॥

* ಕಂ ॥ ಉದಯಮನುಡುಪತಿ ಮೇಣ್ ಕಾ ।
ಣದೊಡಿಂದುಜ ಭೃಗುಜ ಮಧ್ಯದೊಳ್ ಶತಿ ಮೇಣಾ ॥
ಸ್ತದೊಳಾರಂ ಮೇಣ್ ಶನಿ ಲ ।
ಗ್ನದೊಳಿರೆ ಮೇಣ್ ತಂದೆಯಿಲ್ಲ ಪುಟ್ಟುವ ಪದದೊಳ್ ॥ ೩ ॥

ಚಂ ॥ ಸರಸಿಜಬಾಂಧವಂ ದಶಮದಿಂ ಕೆಳಗಾ ಜನನೋದಯಂ ಬರಂ ।
ಚರಭವನಂಗಳೊಳ್ ನಿಲೆ ವಿದೇಶಗತಂ ಸ್ಥಿರಮಂದಿರಸ್ಥನಾ ॥
ಗಿರೆ ಗೃಹಮಧ್ಯದೊಳ್ ನೆಲೆಯೊಳಿರ್ದನವಂ ದ್ವಿಶರೀರಸಂಸ್ಥನಾ ।
ಗಿರೆ ಜನಕಂ ಪದಾಂತರದೊಳಿರ್ಪನವಂ ಗೃಹಬಾಹ್ಯದೇಶದೊಳ್ ॥ ೪ ॥

ಕಂ ॥ ರವಿಯಿಂ ಪಂಚಮ ಸಪ್ತಮ ।
[ನವ]ಮಮೆನಿಪುಗ್ರಗ್ರಹದೊಳಗ್ರ ದ್ವಿತಯಂ ॥
ಸವನಿಸಿ ಬಂದೆಡೆಯೊಳ್ ಲ ।
ಗ್ನವಶ[ದೆ] ಬಂಧನವನೆಯ್ದುಗುಂ ತಜ್ಜನಕಂ* ॥ ೫ ॥

ಹೋರೇಶನನಕ್ಕಿನಸುತ ।
ತಾರೇಶನನಕ್ಕೆ ಗುರು ನಿರೀಕ್ಷಿಸದೊಡೆ ಮೇಣ್ ॥
ಕ್ರೂರಗ್ರಹದೊಡನಿರೆ ಶಶಿ ।
ಸೂರರ್ ಮೇಣ್ ಜಾರಜಾತನಕ್ಕುಂ ಜಾತಂ ॥ ೬ ॥

ಸುರಸಚಿವ ತ್ರಿಂಶಾಂಶದೊ ।
ಳಿರೆ ಚಂದ್ರಂ ಮಂತ್ರಿ ನೋಡೆ ಮೇಣ್ ಕೇಂದ್ರದೊಳೊಂ ॥
ದಿರೆ ತಾರಾಧಿಪನೀಕ್ಷಿಸೆ ।
ಗುರು ತದ್ಯೋಗತ್ರಯಕ್ಕೆ ಭಂಗಂ ಬರ್ಕುಂ ॥ ೭ ॥

1. ಮಾಹಿಯನುಂ *ಈ ಭಾಗ ಕ. ಪ್ರತಿಯುಲ್ಲಿ ಮಾತ್ರ ಉಂಟು.

ಮ ॥ ಹಿಮಧಾಮಂ ನಿಲೆ ಜೀವವರ್ಜಿತಪರತ್ರಿಂಶಾಂಶದೊಳ್ ನೋಡದಂ ।
ದಮರಾಧೀಶ್ವರಮಂತ್ರಿ ಮೇಣ್ ನಿಲೆ ಶಶಾಂಕಂ ಕೇಂದ್ರದೊಳ್ ಕಾಣದಂ ॥
ದಮರೇಜ್ಯಂ [1]ಪರಜಾತನಾತನಬಳಂ ತಚ್ಚಂದ್ರನಂ ನೋಡೆ ಜಾ ।
ತಮನುಷ್ಯಂ ಪರಜಾತನೆಂದು ನುಡಿಯರ್ ಶುದ್ಧಾತ್ಮನಾಮಾನವಂ ॥ ೮ ॥

ಕಂ ॥ ಗುರುಶಶಿ[2] ರವಿಗಳ್ ನೀಚದೊ ।
ಳಿರೆ ಲಗ್ನದೊಳಿರೆ ಶನೈಶ್ಚರಂ ಮೇಣ್ ದೋಷಾ ॥
ಕರ ಲಗ್ನಸ್ಥಿತನೀಕ್ಷಿಸ ।
ದಿರೆ ಸೌಮ್ಯಂ ಜಾತಜಾತನಾತನ ಸುತನುಂ ॥ ೯ ॥

ಮ ॥ ಬಳವದ್ವ್ಯೋಮಚರಂ ಚತುಷ್ಟಯದೊಳಿರ್ದಂದಾಗ್ರಹಾಶಾಮುಖಂ ।
ನಿಳಯದ್ವಾರಮದಲ್ಲದಾಗಳುದಯಾಂಶದ್ವಾರಮಕ್ಕುಂ ನೋಡರ್ ॥
[3]ಚಳರಾಶ್ಯಾದಿಗಳೊಳ್ ದಿನೇಶನಿರೆ ತದ್ವ್ಯ[4]ಪ್ತಂ ಶಶಾಂಕೋಪಮಂ ।
ನೆಲಸಿರ್ದೆಣ್ಣೆ ವಿಲಗ್ನಮಿಂತನಿತೆ ಸಲ್ಗುಂ ಬತ್ತಿಯುಂ ತತ್ಸಮಂ ॥ ೧೦ ॥

ಕಂ ॥ ಬಳವತ್ಖೂರನನೀಕ್ಷಿಸೆ ।
ಬಳಾನ್ವಿತರ್ ಪಲರು[5] ನೋಡರ್ಗಳಕ್ಕುಂ ಮನೆಯೊಳ್ ॥
ಜಳಜಸಖನಂ ನಿರೀಕ್ಷಿಸೆ ।
ಬಳಹೀನರ್ ಕೊಳ್ವವೆಳಗಿನೊಳ್ ಪೆಱುಗುಮವಳ್ ॥ ೧೧ ॥

ಮ॥ ಸ್ರ॥ ಅದೃಢಂ ಮಾರ್ತಂಡನಿಂ ನಿಪ್ಪೊಸತು ಹಿ[6]ಮಗುವಿಂ ಬೆಂದುದಂಗಾರನಿಂ ಚಿ ।
ತ್ರದ ಮಾಟಂ ಸೌಮ್ಯನಿಂ ಬಲ್ಲಿತು ಸುರಗುರುವಿಂ ಸುಂದರಂ ಶುಕ್ರನಿಂ ತ ॥
ಬ್ಬಿದುದಕ್ಕುಂ ಮಂದನಿಂ ಮಂದಿರಮತಿಬಳರಾದಂದವರ್ ತದ್ಗ್ರಹಾಭ್ಯ ।
ರ್ಣದ ಗೇಹಕ್ಕಾಕ್ರಮಂ ತದ್ಗೃಹಮಕುಳಮೆ ತನ್ಮಂದಿರಸ್ವಾಮಿಗಕ್ಕುಂ ॥ ೧೨ ॥

ಕಂ ॥ ಅರಸರ್ ಚಂದ್ರಾದಿತ್ಯರ್ ।
ಧರಣಿಸುತಂ ದಂಡನಾಯಕಂ ಕುವರಂ ಶೀ ॥
ತರುಚಿಸುತಂ ಪೆರ್ಗಡೆಗಳ್ ।
ಗುರು ಭಾರ್ಗವರರ್ಕಸೂನು ಭೃತ್ಯನೆನಿಕ್ಕುಂ ॥ ೧೩ ॥

ಮ ॥ ದಿವಿಜೇಂದ್ರಾರ್ಚಿತನುಚ್ಚಗಂ ದಶಮದೊಳ್ ನಿಂದಂದೆರಟ್ಮೊಱು ನಾ ।
ಲ್ಕು[7]ವಲಂ ಭೂಮಿಕೆಯಕ್ಕುಮುಚ್ಚವಶದಿಂ ಗೇಹಕ್ಕೆ ಮತ್ತಂ ಧನು ॥
ರ್ಭವನಾಂತಸ್ಥಿತನಾಗೆ ತದ್ಗುರು ಬಳೋಪೇತಂ ನಿಕೇತಂ ತ್ರಿಶಾ ।
ಳವೆನಿಕ್ಕುಂ ದ್ವಿಶರೀರರಾಶಿಯೊಳಿರಲ್ಕಕ್ಕುಂ ದಿ[8]ಶಾಲಾಲಯಂ ॥ ೧೪ ॥

ರವಿಯಿಂದಂ ಕಿಸು ಚಂದ್ರನಿಂ ಮಣಿ ಧರಿತ್ರೀಪುತ್ರನಿಂ ಹೇಮಮ್ಯೆಂ ।
ದವನಿಂದಂ ತ್ರಪುಕಾಂಸ್ಯವರ್ಗಮಮರೇಂದ್ರಾಮಾತ್ಯನಿಂ ಬೆಳ್ಳಿ ಭಾ ॥
ರ್ಗವನಿಂ ಮುತ್ತಿನಸೂನುವಿಂ ಸಮನಿಕುಂ ಕರ್ಬೊನ್ ಬಲಂಬೆತ್ತೊಡಾ ।
ದಿವಿಜೇಜ್ಯಂ ಸ್ವಗೃಹಂಗಳೊಳ್ ನಿಲೆ ಸುವರ್ಣಂ ಪೂರ್ಣಮಾ
ಗೇಹದೊಳ್ ॥ ೧೫ ॥

1. ವ 2. ನಿ 3. ಬ 4. ಷ್ಟಂ 5. ವು 6. ಮೊ 7. ವೊ 8. ದ್ವಿ



ವೃ ॥ ಬರೆ ರಾಶಿಚಕ್ರಮನಲ್ಲಿ ಲಗ್ನಕ್ಕೆ ಷಟ್ ತ್ರಿನವದ್ವಾದಶಾಳಯಂಗ[1]ಳೊಳ್ ।
ಹೊರಸಿಂಗವು ನಾಲ್ಕುಕಾಲ್ಗಳೆಡೆಯ ರಾಶಿಗಳೆಕ್ಕೆಗಳ್ ಲಗ್ನದತ್ತಲೆ[2]
ಯೆನಿಕುಂ ॥
ಇರೆ ಶುಭಗ್ರಹಮಾಮರಂ ಲೇಸಕ್ಕುಂ ದ್ವಿಶರೀರಂ ಬರೆ ನಳಿದಿರ್ಕುಂ ಕ್ರೂ ।
ರರಿರೆ ತದುಪಘಾತಮಕ್ಕುಂ ವೃತ್ತತ್ರಿಕೋಣೋಚ್ಚದೊಳ್ ಶುಭಮಿರ್ದೊಡೆ
ಪರಿಹರಿಕುಂ ॥ ೧೬ ॥

ಚಂ ॥ ಉದಯಮಜಾಳಿ ತೌಳಿಘಟ[3]ಕರ್ಕಟಕಾಳಯಮಾಗೆ ಮೂಡಲಿ ।
ರ್ದುದು ಹೊರಸೆಂದು ಪೇಱೆ ಮೃಗಸಿಂಹನಿಕೇತನಮಾಗೆ ತೆಂಕಲಿ ॥
ರ್ದುದು ವೃಷಮಾಗೆ ಪಶ್ಚಿಮದೊಳಿರ್ದುದು ದಂಪತಿ ಮೀನಚಾಪಭೃ ।
ತ್ಸದತಿಗಳಾಗೆಯುಂ ಬಡಗಲಿರ್ದುದು ಸೂತಿಕೆಯಿರ್ದಗೇಹದೊಳ್ ॥ ೧೭ ॥

ಹಿಮಕರನಿಂ ವಿಲಗ್ನದೆಡೆಯೊಳ್ ನಿಲೆ ತದ್ಗ್ರಹ [4]ಸಂಖ್ಯೆಯಿಂ ಗೃಹ ।
ಪ್ರಮದೆಯರಿಂಗೆ ಚಕ್ರದುದಯಾರ್ಧದೊಳಿರ್ದನಿಬರ್ ಗೃಹಾಂತರ ॥
ಪ್ರಮದೆಯರಿಂಗೆ ಚಕ್ರದಪರಾರ್ಧದೊಳಿರ್ದನಿಬರ್ ಗೃಹಸ್ಥಿತ ।
ಪ್ರಮದೆಯರಿಂಗೆ ಮೇಣ್ ದ್ವಿಜನಮೆಂದಱಿಗಾ ಗ್ರಹಚಾರದುಕ್ತಿ
ಯೊಳ್ ॥ ೧೮ ॥

ಕಂ ॥ ನರಲಗ್ನಮನೀಕ್ಷಿಸೆ ರವಿ ।
ಸುರನೃಪಗೋಗೃಹದೊಳಗ್ನಿಹೋತ್ರಾಲಯದೊಳ್ ॥
ಗುರುವೀಕ್ಷೆಸೆ ಶಿಲ್ಪಿಗೃಹಾಂ ।
ತರದೊಳ್ ವೀಕ್ಷಿಸೆ ಬುಧಂ ನರಂ ಜನಿಯಿಸುಗುಂ ॥ ೧೯ ॥

ಇರೆ ಜಳಲಗ್ನದೊಳಸಿತಂ ।
ಖರಕಿರಣಂ ನೋಡೆ ನದಿಯ ತಡಿಯೊಳ್ ದೋಷಾ ॥
ಕರನೀಕ್ಷಿಸೆ ಮಳ[5]ಲೊಳ್ ಸೀ ।
ತರು[6]ಕ್ಸುತಂ ನೋಡಲುದಕದೊಳ್ ಪೆಱುಗುಮವಳ್ ॥ ೨೦ ॥

ಅಸದಾಳೋಕಿತಮಾ[7]ರ್ತಂ ।
ಡಸುತಂ ಕೂಡಿರೆ ವಿಲಗ್ನಗತಭವನದೊಳ ॥
ಕ್ಕೆ ಸುಧಾಮರೀಚಿ ಮೇಣಾ ।
ಪ್ರಸೂತೆಯಕ್ಕುಂ ವಧೂಟಿ ಕಾರಾಗೃಹದೊಳ್ ॥ ೨೧ ॥

ಇರೆ ನೀಚಗೃಹದಿ ಸೌಮ್ಯಂ ।
ಮರಮೊದಲೊಳ್ ಸಾಳಮೂಳದೊಳ್ ಜನ್ಮಂ ಮೇ ॥
ಣಿರೆ ಚಂದ್ರಂ ಲಗ್ನದೊಳ ।
ನ್ಯರಭೀಕ್ಷಿಸಿದಂದು ನಿರ್ಜನಸ್ಥಾನಕದೊಳ್ ॥ ೨೨ ॥

1. ಗಳ್ 2. ಯೆನಿಕ್ಕುಂ 3. ಮ 4. ಶಂಕೆಯಿಂ 5. ಣ 6. ಚಿಸು 7. ರ್ತಾಂ

ಮ ॥ ಇರೆ ನೀಚಾಂಶಕದೊಳ್ ಹಿಮಾಂಶು ಮೃಗಕುಂಭಕ್ಷೇತ್ರದೊಳ್ ನೋಡೆ ಭಾ।
ಸ್ಕರಿ ಮೇಣ್ ಪುಂಶ್ಚರಲಗ್ನಮಪ್ಪ ಗೃಹದೊಳ್ ಚಂದ್ರಾನಿಲಂ ನೋಡೆ ಭಾ॥
ಸ್ಕರಿ ಜನ್ಮಂತಮದೊಳ್ ತುಷಾರರುಚಿ ಜಾಮಿತ್ರಸ್ಥನಾದಂದು ಸೂ।
ರ್ಯನ ಪುತ್ರಂ ಬಗೆದೀಕ್ಷಿಪಂದು ನೆಲದೊಳ್ ತದ್ಬಾಲಕಂ ಪುಟ್ಟುಗುಂ ॥ ೨೩ ॥

ಅಸಿತಂ ವೃಶ್ಚಿಕ ಕರ್ಕಿಲಗ್ನ ಗೃಹದೊಳ್ ನಿಂದಂದು ಚಂದ್ರಂ ನಿರೀ।
ಕ್ಷಿಸೆ ಜನ್ಮಂ ಕುಳಿಯೊಳ್ ನೃಲಗ್ನಮನದಂ ಚಂದ್ರಾಸುರೇಜ್ಯಂ ನಿರೀ॥
ಕ್ಷಿಸೆ ಜನ್ಮಂ [1]ಸುಷಿರೋರ್ವಿಯೊಳ್ ನೆರೆವಿಲಗ್ನಕ್ಷೇತ್ರಮಂ ಭೌಮನೀ।
ಕ್ಷಿಸೆ ಜನ್ಮಂ ಪೆಱತೇಂ ಪರೇತವನದೊಳ್ ತದ್ಬಾಲಕಂಗೊಂದುಗುಂ ॥ ೨೪ ॥

ಕಂ ॥ ವನಜರಿಪುವಂತ್ಯದೊಳ್ ಪೂ।
ರ್ಣನಾಗಿ ಮೇಣ್ ಕರ್ಕಿಯೊಳ್ ಸಿತಾಂಗಿರಸರ್ ನಾ॥
ಲ್ಕನೆಯೊಳ್ ಜಲಲಗ್ನದೊಳಿಂ।
ದುನಂದನಂ ನಿಲೆ ಬಹಿತ್ರದೊಳ್ ಜನಿಯಿಸುಗುಂ ॥ ೨೫ ॥

ಜಲಚರಭವನೋದಯಮಂ।
ಜಲಗೃಹಗತಿ ಸೂರ್ಯಚಂದ್ರಮರ್ ನೋೞ್ಪೊಡೆ ಮೇಣ್ ॥
ನಿಲೆ ದಶಮದೊಳಮೃತಕರಂ।
ಜಲಮಧ್ಯದೊಳಾಕೆ ಬೆಸಲೆಯಕ್ಕುಮಮೋಘಂ ॥ ೨೬ ॥

ಚರಲಗ್ನಮದಡವಿಯೊಳಾ।
ಸ್ಥಿರಲಗ್ನಂ ಕೂಡೆ ಮನೆಯೊಳುಭಯನಿವಾಸಾಂ॥
ತರದೊಳ್ ತದ್ಗೇಹಾಂಶಂ।
ಬರೆ [2]ಜನ್ಮಂ ಕೂಡುಗುಂ ಸ್ವಕೀಯೋದಯದೊಳ್ ॥ ೨೭ ॥

ಪಿತೃಜನನೀಗೃಹದೊಳ್ ಬಳ।
ಯುತಮಪ್ಪಾಲಯದೊಳಬಳೆ ಪೆಱುಗುಂ ದೋಷಾ ॥
ಪತಿ ಪಾಪಗ್ರಹಯುತನೆನೆ।
ಚತುರ್ಥಮಂದಿರದೊಳಾಕೆಗಕ್ಕುಂ ಕ್ಲೇಶಂ ॥ ೨೮ ॥

ಉದಯದೊಳಂ ತತ್ಪ್ರಸ್ಥಾ।
ನದೊಳುದಯಿಸಿದೊಂದು ತನ್ನವಾಂಶಕದೊಳಮಾ ॥
[3]ವುದು ಬಳಸಮೇತಮಾಭವ।
ನದಂಶಕಂ ಬಂದ[4] ಭೂಮಿಯೊಳ್ ಜನಿಯಿಸುಗುಂ ॥ ೨೯ ॥

ಉದಯಿಸುಗುಂ ಶೀರ್ಷೋದಯ।
ದುದಯಂ ಬರೆ ಶೀರ್ಷದಿಂದೆ ಪೃಷ್ಠೋದಯಮ ॥
ಪ್ಪುದಯಂ ಬರೆ ಪದದಿಂ ಕೆಲ।
ದುದಯದೆ ಪಾರ್ಶ್ವದೊಳ್ ಮನುಜನುದಯಂಗೆಯ್ಗುಂ ॥ ೩೦ ॥

1. ಶುಚಿ 2. ಜನನಂ 3. ಉದ 4. ಥ



ಕಂ ॥ ಅವನಿಜನರ್ಕಸುತಂ ಸಿಂ।
ಹವೃ[1]ಷಾಂಗೋದಯದೊಳೇಕಲಗ್ನಸ್ಥಿತರಾ ॥
ಗೆ ವಿಲಗ್ನಗೃಹ ನವಾಂಶಕ।
ದವಯವದೊಳ್ ಸುತ್ತಿಸುಗೆ ಕರುಳ್ತೊಡಕಕ್ಕುಂ ॥ ೩೧ ॥

ಉದಯಗತೇಂದು[2]ವಿನಿರ್ವ।
ಕ್ಕದೊಳುಗ್ರಂ ನೆಲಸೆ ಲಗ್ನಹಿಮಕರನಿರ್ವ ॥
ಕ್ಕದೊಳುಗ್ರಂ ಮೇಣಾ ಸೌ।
ಮ್ಯದೃಷ್ಟಿ ಕೂಡಿದೊಡೆ ಕೂಸು ತಾಯ್ವೆರಸಱಿಗುಂ ॥ ೩೨ ॥

ಅಸಿತಾಂಗಾರಕರಿಂ ಪಂ।
ಚಸಪ್ತನವಮಂಗಳೊಳ್ ಶಶಾಂಕಂ ನಿಲೆ ತಾಯ್ ॥
ಬಿಸುಡುಗುಮರ್ಭಕನಂ ವೀ।
ಕ್ಷಿಸೆ ಶಶಿಯಂ ಗುರು ಚಿರಾಯುವುಂ ಸುಖಿಯುಮವಂ ॥ ೩೩ ॥

ಅಶುಭೇಕ್ಷಣಮುದಯಸ್ಥಿತ।
ಶಶಿ ಕೂಡಿರೆ ಭೌಮನೇೞಱೊಳ್ ನಿಲೆ ಮೇಣ್ ಕೂ ॥
ಡೆ ಶನೈಶ್ಚರನಿರಲೇಕಾ।
ದಶದೊಳ್ ತಾಯ್ ಬಿಸುಟ ಕೂಸು ಬಿಸುಡುಗುಮಸುವಂ ॥ ೩೪ ॥

ಶಶಧರನುದಯದೊಳಿರೆ ನೋ।
ಡೆ ಶುಭಗ್ರಹಮವಱ ಜಾತಿಯವರ್ಗಳ ದೆಸೆಗಾ ॥
ಶಿಶು ಸಾರ್ಗುಂ ಶಶಿಯಂ ನೋ।
ಡೆ ಶುಭೇತರರನ್ಯರತ್ತ ಸಾರ್ದೊಡೆ ಸಾಯ್ಗುಂ ॥ ೩೫ ॥

ನವಮದೊಳಕ್ಕೆಯ್ದುಱೊಳ್ಪೆಂ।
ದವನಿರಶೇಷಗ್ರಹಂಗಳುೞಿದೆಡೆಯೊಳ್ ವೀ ॥
ರ್ಯವಿಹೀನರಾಗಿ ನಿಲೆ ಮಾ।
ನವಂಗೆ ಕರಚರಣದಶನವಿಮ್ಮಡಿಯಕ್ಕುಂ ॥ ೩೬ ॥

ಉದಯದ ನವಪಂಚತ್ರಿಂ।
ಶದೊಳಿರೆ ತಱದಿಂದೆ ಸದ್ಗ್ರಹಂಗಳ್ ತಲೆಯಿ ॥
ಲ್ಲದೆ ಕಾಲಿಲ್ಲದೆ ಕೈಯಿ।
ಲ್ಲದೆ ನರನಾಶ್ಚರ್ಯಮಪ್ಪಿನಂ ಜನಿಯಿಸುಗುಂ ॥ ೩೭ ॥

ಮ ॥ ರವಿಚಂದ್ರರ್ ನಿಲೆ ಸಿಂಹಲಗ್ನದೊಳಿಳಾಜಾತಾರ್ಕಜಂ ನೋಡೆ ನೇ।
ತ್ರವಿಹೀನಂ ನರನಾವಿಲಗ್ನಮನೆ ಸದ್ವ್ಯೋಮಗ್ರಹಶ್ರೇಣಿ ನೋ ॥
ಡುವೊಡಂ ಬುದ್ಬುದನೇತ್ರನಂತೆರಡುಮಂ ಸೌಮ್ಯಗ್ರಹಂ ತಾವೆ ನೋ।
ಡುವೊಡಲ್ಪಂ ಫಲಮಕ್ಕುಮಾ ದುರಿತಮಂ ನಿಶ್ಶೇಷ[3]ಮಾರ್ ಮಾಂದಿಪರ್ ॥ ೩೮ ॥

1. ಷಾದ್ಯುದಯದೊಳೇಕ 2. ವವಿನಿಬ 3. ವಾರ್ಮಂಡಿಪರ್

ಕಂ ॥ ಭವನಾಂತದೊಳುಗ್ರಂ ನೆಲ ।
ಸೆ ವೃಷಭದೊಳ್ ಚಂದ್ರನೊಂದಿ ನಿಲೆ ಮೂಗನೆನಿ ॥
ಕ್ಕುವದಂ ಶಶಿ × × ನೋ ।
ಡುವೊಡೆ ಶುಭಪ್ರಕರಮಾತನೆನಿಕುಂ ತೊದಳೇಂ ॥ ೩೯ ॥

ಅಕ್ಕರ ॥ ಹಿಮಾಂಶುಜ ನವಾಂಶದೊಳ್ ವೃಷಭಕನ್ಯಕಾರಾಶಿಯಾಗೆ ।
ಯಮಾಂಗರಿರೆ ಕೂಸು ಪಲ್ವೆರಸು ಪುಟ್ಟುಗುಂ ಮೇಣ್ ಗ್ರ ॥
ಹಮಾಂಶಮಾಗೆ ತಜ್ಜನನ ಲಗ್ನಮಂ . . . . (?) ।
ಹಿಮಾಂಶು ರವಿಮಂದರೀಕ್ಷಿಪೊಡೆ ವಾಮನಂ ನರಂ ॥ ೪೦ ॥

ಮ ॥ ಶಶಲಕ್ಷ್ಮಂ ನಿಲೆ ಕರ್ಕಿಲಗ್ನ ಗೃಹದೊಳ್ ಭೌಮಾರ್ಕ[1]ಜರ್ ನೋಡೆ ಕು ।
ಬ್ಜಶರೀರಂ ಬರೆ ಹೀನದೇಹದುದಯಂ ನೋಟ್ಪಿಂದದಂ ಮಂದ ವ ॥
ಕ್ರಶಶಾಂಕರ್ ಪೆಱವಂ ಗೃಹಾಂತದೊಳಿರಲ್ ಪಾಪಾನ್ವಿತಂ ಶೀತರೋ ।
ಚಿ ಶುಭಾಳೋಕನಮಿಲ್ಲದಂದು ಕಿವುಡಂ ತಾನಕ್ಕುಮಾ ಮಾನವಂ ॥ ೪೧ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ಜನ್ಮಪ್ರಕರಣ ವರ್ಣನಂ
**ಚತುರ್ಥಾಧಿಕಾರಂ**

1. ಜಂ

# ಪಂಚಮಾಧಿಕಾರಂ

## ವಿಯೋನಿಜನ್ಮಪ್ರಕರಣ ವರ್ಣನಂ

ಮ ॥ ರವಿಜಂ ಮೇಣ್ ಬುಧನಕ್ಕೆ ಕೇಂದ್ರಗೃಹದೊಳ್ ನಿಂದಂದು ಮೇಣ್ ಪ್ರಶ್ನಲ ।
ಗ್ನವನಾಳೋಕಿಸಿ ಸದ್ಗ್ರಹರ್ ವಿಬಳರುಗ್ರರ್ ಶಕ್ತರಾದಂದು ತ ॥
ದ್ಭವನದ್ವಾದಶಭಾಗದೊಳ್ ನೆಲಸಿ ನಿಂದಂದಿಂದು ತದ್ಭಾವದಂ ।
ದವೆ ತಜ್ಜಾತಚತುಷ್ಪದಂಗಳವು ತಿರ್ಯಗ್ಜಾತಿಸಂಜ್ಞೋದಯಂ ॥ ೧ ॥

ಕಂ ॥ ಅಶುಭಗ್ರಹಮಾತ್ಮದ್ವಾ ।
ದಶಭಾಗದೊಳತಿ ಬಲಾಢ್ಯರಾಗಿರೆ ಬಳಹೀ ॥
ನಶುಭಗ್ರಹಮನ್ಯದ್ವಾ ।
ದಶಭಾಗದೊಳಿರೆ ವಿಯೋನಿ[1] ಜನ್ಮಂ ಲಗ್ನಂ ॥ ೨ ॥

ಮ॥ ಸ್ರ॥ ತಲೆ ಮೇಷಂ ವಕ್ತ್ರಮುಂ [2]ಕಂಠಮುಮೆನಿಪೆರಡುಂ ಸ್ಥಾನಮುಕ್ಷಂ ನೃಯುಗ್ಮಂ ।
ಚಲನಾಂಶಂ ಕರ್ಕಿ ಪೃಷ್ಠಂ ರದನಿ[3]ರಿಪುವುರಂ ಕನ್ಯಕಾರಾಶಿ ಪಾರ್ಶ್ವಂ ॥
ತೊಲೆ ಕುಕ್ಷಿಸ್ಥಾನಕಂ ವೃಶ್ಚಿಕವಸತಿ ಗುದಂ ಮೇಹನಂ ಚಾಪಸಂ [4]ಭೃ ।
ನ್ನಿಳಯಂ [5]ಮುಷ್ಕಂ ಮೃಗಾಖ್ಯಂ ಕಟಿಘುಟವುರುಮೀನೋದಯಂ ಬಾಲಮಕ್ಕುಂ ॥ ೩ ॥

ಕಂ ॥ ಬೆಸಗೊಂಡ ಲಗ್ನದೊಳ್ ವ ।
ರ್ತಿಸುವ ನವಾಂಶದೊಳಮುದಯದೊಳ್ ನಿಂದು ನಿರೀ ॥
ಕ್ಷಿಸುವ ಗ್ರಹದೊಳಮತಿ ವೀ ।
ರ್ಯಸಹಿತಮಪ್ಪುದಱ ವರ್ಣಮದು ಪಶುವರ್ಣಂ ॥ ೪ ॥

ಆ ಲಗ್ನಮನೆನಿತುಗ್ರಹ ।
ಮಾಲೋಕಿಪುವನಿತೆ ಮೆಯ್ಯೊಳೇಡಕ್ಕುಂ ದ್ಯೂ ॥
ನಾಲಯಗತಮೆನಿತು ಗ್ರಹ ।
ಮಾ ಲೆಕ್ಕದಲೇಡು ಬೆನ್ನಲಾ ಪಶುಗಕ್ಕುಂ ॥ ೫ ॥

ಮ ॥ ದೊರೆಕೊಂಡಂದು ವಿಲಗ್ನದೊಳ್ ಬುಧನವಾಂಶಂ ಮೇಣ್ ಖಗತ್ರ್ಯಂಶಕಂ ।
ಚರರಾ[6]ಶ್ಯಂಶಕಮಲ್ಲಿ ಕೂಡಿರೆ ಬಳಾನ್ವಿತಗ್ರಹಂ ನೋಡೆ ಭಾ ॥
ಸ್ಕರ ಮೇಣ್ ಕೂಡಿರೆ ಪುಟ್ಟುಗುಂ ಸ್ಥಳಖಗಂ ಮೇಣಲ್ಲಿ ಶೀತಾಂಶು ಕೂ ।
ಡಿರೆ ಮೇಣೀಕ್ಷಿಸೆ ನಿಶ್ಚಯಂ ಜಳಖಗಂ ತಲ್ಲಗ್ನದೊಳ್ ಪುಟ್ಟುಗುಂ ॥ ೬ ॥

1. ಗಿ 2. ಹರ 3. ರಿಪಾರಂ 4. ಭೂ 5. ವೃ 6. ಶ್ಯಾಂ

ಕಂ ॥ ಬಳಹೀನನಾದ ಶಶಿಯಂ ।
ಬಳಭೃದ್ಗುರುವುಂ ವಿಲಗ್ನಮಂತದುಜನ್ಮ ॥
ಸ್ಥಳೆ ರಾಶ್ಯಂಶಕಮಾಗಲ್ ।
ಸ್ಥಳತ್ತರು ಜಳಭಾಂಶಮಾಗೆ ಜಳತರುವೊಗೆಗುಂ ॥ ೭ ॥

ಸ್ಥಳರಾಶಿಯೊಳಾರಂ ನಿಲೆ ।
ವಿಳಗ್ನದಿಂದೆನಿತ[1]ರೆಡೆಯೊಳನಿತೆ ದಲಕ್ಕುಂ ॥
ಸ್ಥಳಭೂರುಹಮಾ ಹೋರೆಗೆ ।
ಜಳಗೃಹಪತಿ ನೆಲಸೆ ಜಳಕುಜಂ ಜನಿಯಿಸುಗುಂ ॥ ೮ ॥

ಶುಭರಾಶಿಯೊಳಶುಭಂ ನಿಲೆ ।
ಸುಭೂಮಿಯಕ್ಕುಂ ಮರಂ ಮನೋಹರಮಕ್ಕುಂ ॥
ಶುಭಮಶುಭಗ್ರಹದೊಳ್ ನಿಲೆ ।
ಶುಭಭೂಮಿಯಕ್ಕುಂ ಮೇಣ್ ಮರಂ ಪೊಲ್ಲೆನಿಕುಂ ॥ ೯ ॥

ತನು ತುಳಯಾಂಶಕದಿಂ ಗ್ರಹ ।
ಮೆನಿತನೆಯಂಶಕದೊಳಿರ್ದುವನಿತೆ ದಲಕ್ಕುಂ ॥
ಜನಿತ ಕುಜಾವಳಿ ತಲ್ಲ ।
ಗ್ನನವಾಂಶಕದುದಯಮೆಂತುಟಂತುಟೆ ಮರನುಂ ॥ ೧೦ ॥

ಮ ॥ ಅರವಿಂದಪ್ರಿಯನಿಂದೆ ಕೆಚ್ಚು ಶಶಿಯಿಂ ಸ್ನಿಗ್ಧಂ ಸದುದ್ಧ ದ್ರುಮಂ ।
ಧರಣೀನಂದನನಿಂ ಸಕಂಟಕಕುಟತ್ವಂ ಸೌಮ್ಯನಿಂ ನಿಃಫಳಂ ॥
ಗುರುವಿಂದಂ ಸಫಳಂ ಗುರುಪ್ರಭವನಿಂ ಪುಷ್ಪಾನ್ವಿತಂ ಸೌರಿಯಿಂ ।
ಪರುಷಂ ತತ್ತರುವಿಂಗೆ ಪೂರ್ವಗದಿತ ಸ್ಥಾನಸ್ಥರಾದಂದವರ್ ॥ ೧೧ ॥

ಕಂ ॥ ಸಕಳ ಚತುಷ್ಪದಪಕ್ಷಿ ।
ಪ್ರಕರಕ್ಕಂ ಭೂಜರಾಜಿಗಂ ಮಾನವ ಜಾ ॥
ತಕ ಫಳಮೆಂತಂತುಟೆ ತ ।
ತ್ರಿಕಟಾಯುಪ್ರಮಿತಮಿಂತದಾಯುಜ್ಞಾನಂ ॥ ೧೨ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ವಿಯೋನಿಜನ್ಮಪ್ರಕರಣ ವರ್ಣನಂ
**ಪಂಚಮಾಧಿಕಾರಂ**

1. ಟಿ[3]

## ಷಷ್ಠಾಧಿಕಾರಂ

### ಅರಿಷ್ಟಯೋಗಪ್ರಕರಣ ವರ್ಣನಂ

ಕಂ ॥ ಶಶಿ ಷಷ್ಠಾಷ್ಟಮಗತನಾ ।
ಗೆ ಶುಭೇತರ ದೃಷ್ಟಿ ಕೂಡೆ ಸದ್ಯೋಮರಣಂ ॥
ಶಿಶುಗೆಂಟು ವರ್ಷದಿಂ ನೋ ।
ಡೆ ಶುಭಗ್ರಹಮರ್ಧದಿಂ ತದುಭಯೇಕ್ಷಣದೊಳ್ ॥ ೧ ॥

ಕ್ರೂರರ್ ನಿಲೆ ಲಗ್ನಾಸ್ತಾ ।
ಗಾರಂಗಳೊಳೊಂದಿ ನಿಲೆ ಸುಧಾಸಂಭೂತಂ ॥
ಕ್ರೂರರೊಳೀಕ್ಷಿಸದಂದ ।
ಕ್ರೂರರ್ ತದ್ಬಾಲಕಂಗೆ ಸದ್ಯೋಮರಣಂ ॥ ೨ ॥

ತಾಮರಸಪ್ರಿಯರವಿಸುತ ।
ಸೋಮಂ ಮೃತ್ಯುವಿನೊಳಕ್ಕೆ ಷಷ್ಠದೊಳಿರೆ ಸ ॥
ದ್ಯೋಮರಣಂ ಶಿಶುವಿಂಗೆ ಸ ।
ಮಾಮಧ್ಯದೊಳಕ್ಕೆ ಮರಣಮೆಂಬರ್ ಕೆಲಬರ್ ॥ ೩ ॥

ಎರಡು ಶುಭಗ್ರಹಮುದಯದೊ ।
ಳಿರೆ ಸೌಮ್ಯರ್ ನೋಡದಂದು ಮೇಣ್ ಕುಜಯಮಮಂ ॥
ದಿರಮೆನಿಪ ಪತ್ತರೊಳ್ ರವಿ ।
ಯಿರೆ ಪಾಪಾಳೋಕಮಾಗೆ ಸದ್ಯೋಮರಣಂ ॥ ೪ ॥

ಶಶಲಕ್ಷ್ಮಂ ಕ್ಷೀಣಂ ದ್ವಾ ।
ದಶದೊಳ್ ನಿಲೆ ಜನ್ಮಲಗ್ನದೊಳ್ ನಿಧನದೊಳ ॥
ಕ್ಕಶುಭರಿರೆ ಕೇಂದ್ರದಿಂ ತೊಲ ।
ಗೆ ಶುಭಗ್ರಹಮಂದೆ ಸಾಯ್ಗುಮಾ ಪುಟ್ಟಿದವಂ ॥ ೫ ॥

ನವಪಂಚ[1]ಮದೊಳ್ ಕಂಟಕ ।
ಭವನದೊಳಶುಭ ಗ್ರಹಂಗಳಿರೆ ಸೌಮ್ಯರ್ [2]ವ್ಯೆ ॥
ರಿವಿನಾಶವ್ಯಯದೊಳ್ನಿಲೆ ।
ರವಿಯುದಯದೊಳಾಗೆ ಶಿಶುಗೆ ಸದ್ಯೋಮರಣಂ ॥ ೬ ॥

ಭವನಾಂತದೊಳ್ ಸುಧಾಸಂ ।
ಭವನಿರೆ ಕಾಣದಿರೆ ಸೌಮ್ಯರಿಂ ಪಾಪಗಣಾ ॥
ನವಪಂಚಮದೊಳ್ ಪುಟ್ಟಿದ ।
ಕುವರಂ [3]ಜೋಣರನಂತೆ ಪಲವುದೆವಸಮಿರಂ ॥ ೭ ॥

1. ಕ 2. ದ್ವೈ 3. ಜೋಕೋರ

ಕಂ ॥ ತಾರೇಶಂ ಕ್ಷೀಣಕರಂ ।
ಕ್ರೂರಗ್ರಹದೊಡನೆ ಕೂಡೆ ನೋಡುವೊಡವನಂ ॥
ತಾರಾಹು ಕೆಲವು ದಿವಸದೊ ।
ಳಾರ್ಗುಂ ಕಾಯಲ್ಕೆ ನೆಱೆಯರಾಬಾಲಕನಂ ॥ ೮ ॥

ಉದಯಿಸೆ ಮುಂ ಕೇತು ವಿಲ ।
ಗ್ನದೊಳುಳ್ಕಾಪಾತ ಪವನನಿರ್ಘಾತಂ ಕೂ ॥
ಡಿದೊಡೊಂದಿ ಬಂದೊಡಂ ರೌ ।
ದ್ರದಂದಶೂಕಂ ಮುಹೂರ್ತಮಾಗಡೆ ಸಾಯ್ಗುಂ ॥ ೯ ॥

ನಿರತಿಶಯ ರಾಜಯೋಗಂ ।
ಬರೆ ಹೀನಕುಲೋದ್ಭವಂಗೆ ಬರ್ಕುಂ ಸದ್ಯೋ ॥
ಮರಣಂ ಕೇತುವಿಲಗ್ನದೊ ।
ಳಿರೆ ಪುಟ್ಟಿದ ಮನುಜನೊಂದೆ ತಿಂಗಳ್ ಬಾೞ್ಗುಂ ॥ ೧೦ ॥

ಹೋರಾಧಿಪನಿರ್ದಾಶಾ ।
ಗಾರದೊಳಭಿಭೂತಮಾಗೆ ಮೇಣಲ್ಲದೊಡಾ ॥
ಹೊರೇಶನಿರ್ದನಿಧನಾ ।
ಗಾರದೊಳಭಿಭೂತಮಾಗೆ ಮಾಸದೆ ಮರಣಂ ॥ ೧೧ ॥

ಮ ॥ ಇರೆ ಷಷ್ಠಾಷ್ಟಮದೊಳ್ ಶುಭಗ್ರಹವದಂ ವಕ್ರ[1]ಸ್ಥಿತಾರ್ಥಶ್ಶುಭೇ ।
ತರ[1] ರಾಳೋಕಿಸೆ ಕಾಣದಿರ್ದೊಡದನಾ ಸೌಮ್ಯಗ್ರಹಂ ಮೇಣ್ ಶುಭೇ ॥
ತರರಸ್ತೋದಯ ಸಂಸ್ಥಲಗ್ನಪತಿಯುಂದೆಲ್ಲಿರ್ದೊಡಂ [2]ಮಾಸದಿಂ ।
ಮರಣಂ ಲಗ್ನಭವಂಗೆ ಸಂಭವಿಸುಗುಂ ಭಾವೋದ್ಭವಂ ಕಾವೊಡಂ ॥ ೧೨ ॥

ಕಂ ॥ ಶತ್ರುಗೃಹಮೆನಿಪಮಿತ್ರ ।
ಕ್ಷೇತ್ರದೊಳಿರೆ ಮಿತ್ರಮಿತ್ರಪುತ್ರಧರಿತ್ರೀ ॥
ಪುತ್ರರ್ ತದ್ಬಾಲಕನಂ ।
ಧಾತ್ರನುಮರ್ತಿಂಗಳಿಂಗೆ ಕಾಯಲ್ ನೆಱೆಯಂ ॥ ೧೩ ॥

ನೆಲಸಿರೆ ನಿಧನಾಲಯದೊಳ್ ।
ವಿಲಗ್ನನಾ[3]ವಂ ಸಮಸ್ತಪಾಪಗ್ರಹಮಂ ॥
ಬಲಯುತರಭಿವೀಕ್ಷಿಸೆ ತ ।
ದ್ವಿಲಗ್ನಜಂ ನಾಲ್ಕು ತಿಂಗಳಿಂದಂ ಸಾಯ್ಗುಂ ॥ ೧೪ ॥

ಕ್ರೂರಗ್ರಹದೊಡನಿರ್ಗೆ [4]ವನ ।
ಜಾರಿ ವಿಲಗ್ನಾಂತಗೃಹದೊಳಲ್ಲಿರದಂತಾ ॥
ಕ್ರೂರರಱುದಿಂಗಳಿಂದಂ ।
ದಾರಕಲಯಮಲ್ಲದಂದು ಮಾಸಾಷ್ಟಕದೊಳ್ ॥ ೧೫ ॥

1. ಸ್ಥಿತರ್ತತ್ಸುಖೋತ್ಕರ 2. ಮೋ 3. ದಂ 4. ದನು



ಮ ॥ ಶನಿಲಗ್ನಸ್ಥಿತನಾಗೆ ವೀಕ್ಷಿಸೆ ಶುಭಾನ್ಯರ್ ಷೋಡಶಾಹಕ್ಕೆ ಮೇಣ್ ।
ಶನಿ ಪಾಪಗ್ರಹಯುಕ್ತನಾಗೆ ಶುಭಹೀನರ್ ನೋಡೆ ಮಾಸಕ್ಕೆ ಮೇಣ್ ॥
ಶನಿಯಂ ನೋಡೆ ಶುಭೇತರಗ್ರಹಗಣಂ ವರ್ಷಕ್ಕೆ ತಲ್ಲಗ್ನಜಾ ।
ತ ನರಂ ಸಂದೆಯಮೇನೊ ಪೊಂದುಗುಮದಕ್ಕೇಂ [1]ಪಚ್ಛಮೇಂ[1]
ಮಂತಣಂ ॥ ೧೬ ॥

ಕಂ ॥ ಅಹಿತಾಲಯಮೆನಿಪಷ್ಟಮ ।
ಗೃಹದೊಳ್ ಸೌಮ್ಯೇತರಗ್ರಹಂ ನಿಲೆ ಪಾಪ ॥
ಗ್ರಹಮದನಾಳೋಕಿಪೊಡೇ ।
ಕಹಯನದಿಂದತ್ತಲರ್ಭಕಂ ನಿರ್ವಹಿಸಂ ॥ ೧೭ ॥

ವಕ್ರಸ್ಥನಾಗಿ ಶನಿ ನಿಲೆ ।
ವಕ್ರಾಲಯಮೆನಿಪ ಕೇಂದ್ರ ಷಷ್ಠಾಷ್ಟ[2]ಮದೊಳ್ ॥
ವಕ್ರಂ ಬಳಯುತನೀಕ್ಷಿಸೆ ।
ವಕ್ರಿಪರಾರವನ ಸಾವನಬ್ದದ್ವಯದೊಳ್ ॥ ೧೮ ॥

ಸೂರ್ಯಯುತಮಿಂದು ಕೇಂದ್ರಾ ।
ಗಾರದೊಳಿರೆ ನೋಡೆ ಭಾಸ್ಕರಾಪತ್ಯನುಮಂ ॥
ಗಾರಕನುಂ ಮೇಣ್ ಕೂಡಿರೆ ।
ದಾರಕನಬ್ದದ್ವಯಕ್ಕೆ ಲಯಮಾಗದಿರಂ ॥ ೧೯ ॥

ಧರಣೀಗೃಹಮೆನಿಪೆಂಟನೆ ।
ಯ ರಾಶಿಯೊಳ್ ನಿಂದ ಗುರುವನೀಕ್ಷಿಸೆ ಶ[3]ನಿ ಭಾ ।
ಸ್ಕರಸೌಮ್ಯ ಭೌಮರೀಕ್ಷಿಸ ।
ದಿರೆ ಭೃಗುಜಂ ಮೂಱು ವರ್ಷದೊಳ್ ಮಡಿಗುಮವಂ ॥ ೨೦ ॥

ಹೋರೇಶಂಗೆಂಟನೆಯೊಳ್ ।
ತಾರೇಶಂ ಕ್ಷೀಣನಿರೆ ನಿರೀಕ್ಷಿ[4]ಸೆ ಸಕಳಂ ॥
ಕ್ರೂರಗ್ರಹಂ ಕಾಣದೊಡಾ ।
ಕ್ರೂರಗ್ರಹಮಾತನೞಿಗುಮಬ್ದತ್ರಯದೊಳ್ ॥ ೨೧ ॥

ಬುಧನೊಂದಿದೊಡಷ್ಟಮಷ ।
ಷ್ಠಧಾಮಮೆನಿಸಿದ ಕುಳೀರದೊಳ್ ಕಾಣ್ಬೊಡದಂ ॥
ವಿಧು ನಾಲ್ಕುವರ್ಷದಿಂದಂ ।
ನಿಧನಂ ಬಾಳಂಗೆ ಕಾಳನಿಂ ಸಮನಿಸುಗುಂ ॥ ೨೨ ॥

ಉದಯದೊಳಿರೆ ಫಣಿಪತಿ ವ ।
ಕ್ರದದಶನ ವಿಭಾಗದೊಳ್ ಶುಭಪ್ರಕರಮದೃ ॥
ಶ್ಯದೊಳಿರೆ ಶುಭಗ್ರಹಂ ಪು ।
ಟ್ಟಿದವಂ ಪಂಚತ್ವನಾಗಿ ಪಂಚಮ ಸಮದೊಳ್ ॥ ೨೩ ॥

1. ಪಂಚದೆಂ 2. ಕ 3. ಶಿ 4. ಸಿ

ಕಂ ॥ ರವಿಶಶಿಕುಜಗುರುಗಳ್ ಮೇ ।
ಣವನಿಜ ಶನಿ[1]ಸೂರ್ಯಚಂದ್ರಜರ್ ಮೇಣ್ ಶಶಿ ಭಾ ॥
ರ್ಗವರವಿಕುಜರೇಕಾಲಯ ।
ನಿವಾಸಿಗಳೆನಿಪ್ಪೊಡಯ್ದು ವರ್ಷಂ ಬಾೞ್ಗುಂ ॥ ೧೪ ॥

ಭೃಗುಜನಿರೆ ಕರ್ಕಿಯೊಳ್ ಮೇಣ್ ।
ಮೃಗಪತಿಯೊಳ್ ದ್ವಾದಶಾದಿ ನಿಧನಸ್ಥಿತ ಸೌ ॥
ಮ್ಯಗಣಂ ವೀಕ್ಷಿಸುವೊಡೆ ಪೊಂ ।
ದುಗುಮಾಲಗ್ನೋದ್ಭವಂ ಷಡಬ್ದಾಂತರದೊಳ್ ॥ ೧೫ ॥

ದಿನಕೃತ್ಸುತ ಧರಣೀಸುತ ।
ದಿನೇಶನಾೞನೆಯಲಿರೆ ಶಶಾಂಕಂ ಕ್ಷೀಣಂ ॥
ದ್ಯುನದೊಳಿರೆ ಕಾಣದಿರೆ ಭೃಗು ।
ಜನಿರಲವಂ ಬಾೞನೇೞು ವರ್ಷದಿನತ್ತಂ ॥ ೧೬ ॥

ಮೃಗರಾಜ ಮೇಷಕುಂಭಾ ।
ದಿಗಳೆಂಬ ವಿಲಗ್ನದೊಳ್ ಫಣೀಂದ್ರಂ ನಿಲೆ ಪಾ ॥
ಪಗಣಮನೀಕ್ಷಿಸುವೊಡೆ ಪೊ ।
ರ್ದುಗುಮಾನರನೇೞು ವರ್ಷ[2]ಮಂ ಯಮಪುರಮಂ ॥ ೧೭ ॥

ಉದಯದ್ರೇಕ್ಕಾಣಂ ನಿಗ ।
ಳದ ಪಾಶದ ಫಣಿಯ ಖಗದ ಪೆಸರಿಂ ಬರೆ ಕೂ ॥
ಡಿದರಶುಭರ್ತದ್ರೇಕ್ಕಾ ।
ಣದ ಪತಿಕಾಣದೊಡೆ ಸಪ್ತಮಾಬ್ದದಿನೞಿಗುಂ ॥ ॥ ೧೮ ॥

ದಿವಸಕರ ಚಂದ್ರಯುತ ಭಾ ।
ರ್ಗವನಂ ಜನ್ಮಾವಸರದೊಳೀಕ್ಷಿಸುವೊಡೆ ದೇ ॥
ವವಿನೂತಂ ಪುಟ್ಟಿದ ಮಾ ।
ನವನಿರದೆ ನವಾಬ್ದದಿಂ ಪುನರ್ಭವನಕ್ಕುಂ ॥ ೧೯ ॥

ಶಶಿಯುಂ ದ್ವಾದಶದೆಡೆಯೊಳ್ ।
ಶಶಿರಂ ಪ್ರದ್ಯೋತನಂದನಂ ನಿಲೆ ಲಗ್ನೇ ॥
ಶಶುಭಗ್ರಹವೀಕ್ಷಿಸುವೊಡ ।
ಮಶುಭಗ್ರಹಮಾನರಂ ನವಾಬ್ದದಿನೞಿಗುಂ ॥ ೨೦ ॥

ಆರಾರ್ಕರೊಡನೆ ಕೂಡಿ ಸು ।
ಧಾರುಚಿ ಪಂಚಮದೊಳಕ್ಕೆ ವಿತ್ತದೊಳಿರಲಾ ॥
ಕ್ರೂರರಭೀಕ್ಷಿಸಿದಂದು ಕು ।
ಮಾರಕನೊಂಬತ್ತು ವರುಷದಿಂದಂ ಸಾಯ್ಗುಂ ॥ ೨೧ ॥

1. ಶಿ 2. ದಿಂ



ಕಂ ॥ ಉರಗೇಂದ್ರಂ ಕೇಂದ್ರದೊಳಿರೆ ।
ನಿರೀಕ್ಷಿಸೆ ಶುಭೇತರರ್ನ್ನರಂ ದಶಸಂವ ॥
ತ್ಸರದಿಂ ಮೇಣ್ ಷೋಡಶ ವ ।
ತ್ಸರದಿಂದಂ ಸಾಯ್ಗುಮೆಂಬರರೆಬರ ಮತ[1]ದೊಳ್ ॥ ೨೨ ॥

ಇಂದುಸುತಂ ಕೂಡಿರೆ ಸೂ ।
ರ್ಯೇಂದುಗಳೊಳ್ ನೋಡೆ ಸೌಮ್ಯರುದಯದೊಳಿರೆ ಸಂ ॥
ಕ್ರಂದನಗುರುವಂತ್ಯದೆ ಪ ।
ನ್ನೊಂದಬ್ದದಿನತ್ತಲಗ್ಗಳಂ ಬಾೞನವಂ ॥ ೨೩ ॥

ರಾಹು ನೆಲಸಿದೊಡೆ ಸಪ್ತಮ ।
ಗೇಹದೊಳೀಕ್ಷಿಪೊಡೆ ಸೂರ್ಯಶಶಿಗಳ್ ಶುಭಸಂ ॥
ದೋಹಂ ಕಾಣದೊಡನಲಂ ।
ಗಾಹುತಿ ಪನ್ನೆರಡು ವರ್ಷದಿಂದವನಕ್ಕುಂ ॥ ೨೪ ॥

ಜನನಗೃಹನಾಥ ಲಗ್ನಾ ।
ಧಿನಾಥರಸ್ತಮಿಪೊಡಷ್ಟಮ ದ್ವಾದಶ ಷ ॥
ಷ್ಠನಿವಾಸದೊಳಾ ಲಗ್ನಜ ।
ನನಿತಬ್ದದಿನತ್ತಲಗ್ಗಳಂ ಬರ್ದಪನೇ ॥ ೨೫ ॥

ಹರಿಜನ್ಮಮಾಗೆ ಮಂದಂ ।
ಬೆರಸಿನನಿರೆ ನಿಧನದೊಳ್ ನಿರೀಕ್ಷಿಸೆ ರಕ್ಷೋ ॥
ಗುರು ಲಗ್ನದಿನಷ್ಟಮಮಂ ।
ದಿರಕ್ಕಜಾಳಿಯೆನೆ ತತ್ಪ್ರಮಾಣಕ್ಕೆ ಲಯಂ ॥ ೨೬ ॥

ಮ ॥ ಉದಯೇಶಂ ನಿಲೆ ಷಷ್ಠದೊಳ್ [2]ಪೆೞಗಣಿಂ ಮೇಷಾದಿರಾಶಿ ಪ್ರಮಾ ।
ಣದೆ ಸಾಯ್ಗುಂ ನಿಲೆ ಷಷ್ಠದೊಳ್ ತದುದಯದ್ರೇಕ್ಕಾಣಕಂ ತತ್ಪ್ರಮಾ ॥
ಣದ ತಿಂಗಳ್ಗೞಿಗುಂ ನರಂ ನಿಲೆ ತದಂಶಾಧೀಶ್ವರಂ ಷಷ್ಠಗೇ ।
ಹದೊಳಾಲಗ್ನಭವಂ ಪುನರ್ಭವನೆನಿಕ್ಕುಂ ತತ್ಪ್ರಮಾಣಾಬ್ದದಿಂ ॥ ೨೭ ॥

ವೃ ॥ ಹರಿಯೊಳಗೈದು ಗೋಪತಿಯೊಳೊಂಬತ್ತು ಕುಂಭದೊಳಿಪ್ಪತ್ತೇೞು
ದಂಪತಿಯೊಳಿಪ್ಪ ।
ತ್ತೆರಡು ಮೃಗದೊಳಿಪ್ಪತ್ತು ಕರ್ಕಿಯೊಳಿಪ್ಪತ್ತೆರಡಳಿಯೊಳಿಪ್ಪ
[3]ತ್ತುಮೂಱು ॥
ತರುಣಿ ಗೃಹದೊಳೊಂದಜದೊಳೆಂಟನಿಮೇಷದೊಳ್ ಹತ್ತು
ಧನುವಿನೊಳೆಂಟು ತುಳಾ ।
ಧರನೊಳ್ ನಾಲ್ಕು ಭಾಗೆಯೊಳಿರೆ ಹಿಮಕರಂ ತತ್ಪ್ರಮಾಣಾಬ್ದ
ದಿನಾನರಂ ಮಡಿಗುಂ ॥ ೨೮ ॥

1. ದಿಂ 2. ಪೊ 3. ತ

ಮ ॥ ನಿಲೆ ದೋಷಾಕರನೊಂದು ಕೇಂದ್ರಗೃಹದೊಳ್ ಕ್ರೂರತ್ರಿಕೋಣಂಗಳೊಳ್ ।
ನಿಲೆ ಮೇಣ್ ಸಂಜ್ಞೆಯೊಳಿಂದು ಹೋರೆಯೊಳಿನಂ ಪಾಪಂ ಗೃಹಾಂ
ತ್ಯಂಗಳೊಳ್ ॥
ನಿಲೆ ಮೇಣ್ ಕ್ಷೀಣ ಸುಧಾಕರಂ ನಿಲೆ ವಿಲಗ್ನಕ್ಷೇತ್ರದೊಳ್ ಕ್ರೂರರುಂ ।
ನಿಲೆ ಕೇಂದ್ರಂಗಳೊಳಕ್ಕೆ ಮೇಣ್ ನಿಧನದೊಳ್ ಲಗ್ನೋದ್ಭವಂ
ಪೊಂದುಗುಂ ॥ ೩೯ ॥

ಶಾ ॥ ಜ್ಯಾಮಿತ್ರಾಷ್ಟಮಧರ್ಮ ಪಂಚಮವಿಲಗ್ನ ದ್ವಾದಶಕ್ಷೇತ್ರದೊಳ್ ।
ಸೋಮಂ ಕ್ರೂರರೊಳೊಂದಿ ನಿಂದೊಡೆ ಬುಧಂ ಮೇಣ್ ಭಾರ್ಗವಂ
ಮೇಣ್ ಸುರೇಂ ॥
ದ್ರಾಮಾತ್ಯಂ ಬಳವಂತರೀಕ್ಷಿಸದೆ ಮಾಣ್ದೊಂದಿರ್ದು ನಿಂದಂದು ಮೇ ।
ಣಾಮರ್ತ್ಯಂ ಕ್ಷಣಮಾತ್ರದಿಂದೆ ಪುಗುಗುಂ ಕೀನಾಶ[1]ನಾವಾಸಮಂ ॥ ೪೦ ॥

ಚಂ ॥ ಉದಯದಿನಿಂದು ಹೀನತನು ಕೂಡಿರೆ ಕೇಂದ್ರದೊಳಕ್ಕೆ ಮೃತ್ಯುಗೇ ।
ಹದೊಳಿರೆ ಪಾಪವರ್ಗಮದು ಕೂಡದೆ ಮಾಣ್ದೊಡೆ ಪಾಪಯುಗ್ಮ ಮ ॥
ಧ್ಯದೆ ಚತುರಶ್ರರಾಶಿಗಳೊಳಸ್ತದೊಳಕ್ಕಿರೆ ಶೀತರೋಚಿ ಪುಟ್ಟೆ ಪು ।
ಟ್ಟಿದ ಮನುಜಂ ಸುಧಾರಸಮನೀಂಟಿದೊಡಂ ಬರ್ದುಕಲ್ಕೆ ಬಲ್ಲನೇ ॥ ೪೧ ॥

ಮ ॥ ದಿನಪಂ ಸಪ್ತಮದೊಳ್ ವಿಲಗ್ನಗೃಹದೊಳ್ ಧಾತ್ರೀತನೂಜಾತನ ।
ಕ್ಕಿನಜಂ ಕೂಡಿರೆ ಮೇಣ್ ದಿನೇಶಸುತನಕ್ಕುರ್ಬೀಜನಕ್ಕಸ್ತದೊಳ್ ॥
ದಿನಪಂ ಲಗ್ನದೊಳಿರ್ದೊಡಕ್ಕೆ ಶಶಲಕ್ಷ್ಮಂ ಮಂದನೊಳ್ ಮೇಣ್ ಮಹೀ ।
ಜನೊಳೊಂದಿರ್ದೊಡೆ ಸೌಮ್ಯರೀಕ್ಷಿಸಿದೊಡಕ್ಕುಂ ಲಗ್ನಜಂ
ಪೊಂದುಗುಂ ॥ ೪೨ ॥

ಕಂ ॥ ಅಶುಭಂ ಸಬಳನತಿಕ್ಷೀ ।
ಣಶಶಾಂಕಯುತಂ ತ್ರಿಕೋಣ [2]ಲಗ್ನಸ್ಥ ದ್ವಾ ॥
ದಶ ನಿಧನದೊಳಿರೆ ಕಾಣದೊ ।
ಡೆ ಶುಭಗ್ರಹಮಾಕುಮಾರಕಂಗಳಿವಕ್ಕುಂ ॥ ೪೩ ॥

ಉದಯಿಸೆ ಕೀಟಗೃಹಂ ಚ ।
ಕ್ರದ ಪೂರ್ವಾರ್ಧದೊಳಸದ್ಗ್ರಹಂ ನಿಲೆ ಪಶ್ಚಾ ॥
ರ್ಧದೊಳಿರೆ ಸೌಮ್ಯರ್ ಮೇಣುದ ।
ಯದೊಳಸ್ತದೊಳಿರೆ ಶುಭೇತರರ್ಕಳಳಿಗುಮವಂ ॥ ೪೪ ॥

ಹಿಮಕರನಿರೆ ಸುಖಸಪ್ತಾ ।
ಷ್ಟಮದೊಳ್ ಪಾಪಗ್ರಹಂಗಳಿರೆ ಕೆಲದೊಳ್ ಸಂ ॥
ಕ್ರಮಿಸಿರೆ ಮೇಣುದಯದೊಳಿರೆ ।
ಹಿಮಕರನಸ್ತದೊಳಸದ್ಗ್ರಹಂ ನಿಲೆ ಮರಣಂ ॥ ೪೫ ॥

1. ನೀ 2. ಲಗ್ನಾಸ್ತದ್ವಾ



ಕಂ ॥ ಕನಕಂ ಛಿದ್ರದೊಳುಷ್ಣಾಂ ।
ಶು ನವಮದೊಳ್ ಚಂದ್ರನುದಯದೊಳ್ ದ್ವಾದಶದೊಳ್ ।
ಶನಿ ನಿಲೆ ಜೀವಂ ಬಳವಂ ।
ತನಾಗೆ ತದ್ಬಾಳನಕ್ಕಟೆಂತುಂ ಬಾಳಿಂ ॥ ೪೬ ॥

ಉಡುನಾಥಂ ಪಾಪಗ್ರಹ ।
ದೊಡನಿರದುದಯಾಂತ್ಯಸಪ್ತಮಾಷ್ಟಮದೊಳ್ ನಿಂ ॥
ದೊಡೆ ಸೌಮ್ಯರ್ ಕೇಂದ್ರದೊಳಿರ ।
ದೊಡವರ್ಕಾಣದೊಡೆ ಕಾಣರಾಬಾಲಕನಂ ॥ ೪೭ ॥

ಜಲಜಸಖನಕ್ಕೆ ಶಶಿಯು ।
ಕ್ಕೆ ಲಗ್ನಗತರಾಗೆ ನಿಧನನವಪಂಚಮದೊಳ್ ॥
ನಿಲೆ ಪಾಪಗಣಂ ಸೌಮ್ಯರ್ ।
ಬಲಯುತರಾಗದೊಡೆ ಕಾಣದಿರ್ದೊಡೆ ಮರಣಂ ॥ ೪೮ ॥

ಕ್ರೂರದ್ವಯ ಮಧ್ಯದೊಳಿರೆ ।
ತಾರಾಪತಿ ನಿಧನಗೃಹದೊಳಕ್ಕಸ್ತದೊಳಂ ॥
ಕ್ರೂರರಿರೆ ಪೂರ್ಣಬಳರ ।
ಕ್ರೂರರ್ ಕಾಣದೊಡೆ ಕೂಸು ತಾಯ್ವೆರಸಳಿಗುಂ ॥ ೪೯ ॥

ಮ ॥ ಬರೆ ಸೋಮಗ್ರಹಣಂ ವಿಲಗ್ನದೊಳಿನಾಪತ್ಯೇಂದುಗಳ್ ಛಿದ್ರದೊಳ್ ।
ಧರಣೀನಂದನ ನೋಡೆ ತಾಯ್ವೆರಸು ಕಂದಂ ಪೊಂದುಗುಂ ಮತ್ತೆಯುಂ ॥
ಬರೆ ಸೂರ್ಯಗ್ರಹಣಂ ಕುಜಂ ನಿಧನದೊಳ್ ಲಗ್ನಾರ್ಕ್ಷದೊಳ್
ಭಾನು ಭಾ ।
ಸ್ಕರಿಗಳ್ ಕೂಡಿರೆ ಕೂಸು ತಾಯ್ವೆರಸು ಶಸ್ತ್ರಾಘಾತದಿಂ ಪೊಂದುಗುಂ ॥ ೫೦ ॥

ಕಂ ॥ ಸಮನಿಸೆ ಗಂಡಾಂತಂ ಜಾ ।
ತಮರ್ತ್ಯನಳಿಗುಂ ಸ್ವಮಾತೃಪಿತೃಕುಳಸಹಿತಂ ॥
ಸಮವಾಯಾ ಬರ್ದುಕಿದೊಡ ।
ತ್ಸಮತಂಗಜಪತಿಯೆನಿಪ್ಪ ಭೂಪತಿಯಕ್ಕುಂ ॥ ೫೧ ॥

ಮ॥ ಸ್ರ॥ ಬರೆರಿಪ್ಪಂ ಕೃತ್ಯಯೋಗಗ್ರಹಪತಿ ಬಳನಾಗಿರ್ದ[1] ತಾಣಕ್ಕೆ ಜನ್ಮಂ ।
ದೊರೆಕೊಳ್ವಂದಿಂದು ಮುನ್ನಿರ್ದೆಡೆಗೆ ಜನನಲಗ್ನಕ್ಕೆ ಮೇಣ್ ವೀರ್ಯ
ಯುಕ್ತಂ ॥
ಹರಿಣಾಂಕಂ ಬಂದೊಡಾ ಮೂಱನೆಯೆಡೆಯುಡುಪಂ ನೋಱ್ಪೊ
ಡುಗ್ರರ್ ಬಲಾಢ್ಯರ್ ।
ಮರಣಂ ಸಂವತ್ಸರಾಭ್ಯಂತರದೊಳೆ ಶಿಶುವಿಂಗಾದಿನಕ್ಕೊಂದಿ
ಬರ್ಕುಂ ॥ ೫೨ ॥

1. ರ್ದ

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ಅರಿಷ್ಟಯೋಗಪ್ರಕರಣ ವರ್ಣನಂ
**ಷಷ್ಠಾಧಿಕಾರಂ**

---

# ಸಪ್ತಮಾಧಿಕಾರಂ

## ಅರಿಷ್ಟಭಂಗಪ್ರಕರಣ ವರ್ಣನಂ

ಮ ॥ ಉಶನಂ ಮಿತ್ರನವಾಂಶಕೋಪಗತನಾಪೂರ್ಣೇಂದುವಂ ನೋಡೆ ಮೇಣ್ ।
ಶಶಲಕ್ಷ್ಮಂ ಪರಮೋಚ್ಚದೊಳ್ ನೆಲಸೆ ಶುಕ್ರಂ ನೋಡೆ ಸರ್ವಗ್ರಹಂ ॥
ಶಿಶಿರ ಪ್ರದ್ಯುತಿಯಂ ಪ್ರಪೂ[1]ರ್ಣತನುವಂ[1] ಮೇಣ್ ನೋಡೆ
ಮೇಣ್ ಪೂರ್ಣನಾ ।
ಗಿ ಶುಭದ್ವಾದಶ ಭಾಗದೊಳ್ ನಿಲೆ ಶಶಾಂಕಂ ಚಂದ್ರರಿಷ್ಟಾಪಹಂ ॥ ೧ ॥

ಕಂ ॥ ಅತಿಶಯಫಳದಾಯಿಗ್ರಹ ।
ಯುತನಮೃತಮರೀಚಿ ತದ್ಗ್ರಹ ದ್ರೇಕ್ಕಾಣಾ ॥
ನ್ವಿತನೆನಿಪೊಡರಿಷ್ಟಮಹ ।
ರ್ಪತಿಯಿಂ ತಮದೊಡ್ಡು [2]ಕಿಡುವ ತೆಱದಿಂ ಕಿಡುಗುಂ ॥ ೨ ॥

ವನಜಾರಿಯಿನಾಱನೆಯೋ ।
ಱನೆಯೆಂಟನೆಯೆಡೆಯೊಳಕ್ಕೆ ಸೌಮ್ಯರ್ ನಿಲೆ ಪಾ ॥
ಪನಿರೀಕ್ಷಣಮಿಲ್ಲದೊಡಾ ।
ಮನುಜಂಗಾ ಶಿಶಿರಕರನರಿಷ್ಟಂ ಕಿಡುಗುಂ ॥ ೩ ॥

ಶಾ ॥ ಜನ್ಮೇಶಂ ಬಳಯುಕ್ತನಾಗಿರೆ ಸುಹೃತ್ಸೌಮ್ಯಗ್ರಹಂ ನೋಡೆ ಮೇಣ್ ।
ಜನ್ಮೇಶಂ ನಿಲೆ ಜನ್ಮಲಗ್ನ ಗೃಹದೊಳ್ ಸರ್ವಗ್ರಹಂ ನೋಡೆ ಮೇಣ್ ॥
ಜನ್ಮಸ್ವಾಮಿ ಬಳಾಢ್ಯನಾಗಿ ನಿಲೆ ಸೌಮ್ಯರ್ ನೋಡೆ ಕೂಸಂ ಸುಧಾ ।
ಜನ್ಮಂ ರಕ್ಷಿಸುಗುಂ ಸ್ವಕೀಯ ಶಿಶುವಂ ತಾಯ್ ರಕ್ಷಿಪೊಂದಂದದಿಂ ॥ ೪ ॥

ಕಂ ॥ ಶಶಲಾಂಛನನಿಂದಂ ದ್ವಾ ।
ದಶದೊಳ್ ಬುಧಶುಕ್ರರಿರೆ ಬೃಹಸ್ಪತಿಯಿರೆ ತಾ ॥
ನೆ ಶುಭಗ್ರಹ ಗೃಹಮೆನಿಸಿದ ।
ದಶಮದೊಳುಡುನಾಥಜಾತದುರಿತವಿನಾಶಂ ॥ ೫ ॥

ತಾರಾಧಿನಾಯಕಂ ನಿಲೆ ।
ಹೋರೇಶಂಗುಪಚಯರ್ಕ್ಷದೊಳ್ ಹಿಬುಕದೊಳಾ ॥
ಕ್ರೂರಗ್ರಹಮೀಕ್ಷಿಪೊಡೆ ಸು ।
ಧಾರೋಚಿಯಿನಾದುದೊಂದರಿಷ್ಟಂ ಕಿಡುಗುಂ ॥ ೬ ॥

ಕ್ರೂರಗ್ರಹ ಮಧ್ಯದೊಳ ।
ಕ್ರೂರಗ್ರಹ[3]ವರ್ಗದೊಳ್ ಸುಧಾಕರನಿರೆ ಮ ॥
ತ್ತಾರಾಶ್ಯಾಧಿಪ ನೋಡೆ ಕು ।
ಮಾರಕನಾರಿಷ್ಟವಿಜಯಿ ಬುಧಜನಮಿತ್ರಾ ॥ ೭ ॥

---

1. ರ್ಣತನುವಂ 2. ಕೆಡುವ 3. ಮವರ್ಗಳೊಳ್

ಕಂ ॥ ಜನನೋದಯಾಧಿಪಂ ಕೇಂ ।
ದ್ರನಿವಾಸದೊಳೊಂದಿ ನಿಂದನಪ್ಪೊಡೆ ಶ[1]ಶಲಾಂ ॥
ಛನನಕ್ಕೆ ಸೌಮ್ಯನಕ್ಕಾ ।
ಱನೆಯೆಂಟನೆಯೆಡೆಯೊಳಿರ್ದ ದೋಷಮನ[2]ಲೆಗುಂ ॥ ೮ ॥

ದೊರಕೊಳೆ ಜನ್ಮಂ ಜೊನ್ನದೊ ।
ಳಿರುಳೊಳ್ ಸೌಮ್ಯಗ್ರಹಂ ನಿರೀಕ್ಷಿಸೆ ಶುಕ್ಲೇ ॥
ತರ ಪಕ್ಷದೊಳಹದೊಳ್ ಕ್ರೂ ।
ರರಭೀಕ್ಷಿಸೆ ಶಶಿಯಿನೊಗೆದರಿಷ್ಟಂ ಕಿಡುಗುಂ ॥ ೯ ॥

ಮ॥ ಸ್ರ॥ ಹರಿಣಾಂಕಂ ಪೂರ್ಣಬಿಂಬಂ ನಿಲೆ ನಿಜಗೃಹದೊಳ್ ಸೌಮ್ಯಮಿತ್ರಾತ್ಮ
ವರ್ಗಾಂ ।
ತರದೊಳ್ ಮೇಣುಚ್ಚದೊಳ್ ವೀಕ್ಷಿಸೆ ಶುಭನಿವಹಂ ನೋಡ
ದಿರ್ದಂದು ಮೇಣ್ ಕೂ ॥
ಡಿರದಂದುಗ್ರಗ್ರಹಂ ಕಾಣ್ಕೆಗೆ ಪೊಱಗೆನೆ ತತ್ಕಾಲ ಶತ್ರುಗ್ರಹಂಗಳ್ ।
ದೊರೆಕೊಳ್ಗುಂ ಯಾಮಿನೀಸ್ವಾಮಿಯಿನೊಗೆವ ಮಹಾರಿಷ್ಟ
[3]ಭೀಷ್ಟಕ್ಕೆ ಭಗ್ನಂ ॥ ೧೦ ॥

ಕಂ ॥ ಬಳಯುತರಾಗಿರೆ ಸೌಮ್ಯರ್ ।
ಬಳಹೀನರಸದ್ಗ್ರಹಂಗಳಾಗಿರೆ ಬಳವ ॥
ದ್ಬಳಭೃದ್ಗುರುವೀಕ್ಷಿಸೆ ಶುಭ ।
ವಿಲಗ್ನಮಾದಂದು ಸ[4]ರ್ವರಿಷ್ಟಂ ಕಿಡುಗುಂ ॥ ೧೧ ॥

ಪಿರಿದು ಪಳಾಳದೊಳೇಂ ಸುರ ।
ಗುರುವೊರ್ವನೆ ವೀರ್ಯವಂತನುಂ ಕಾಂತನುಮಾ ॥
ಗಿರೆ ಜನ್ಮಲಗ್ನದೊಳ್ ಸಂ ।
ಹರಿಸುಗುಮಘಮಂ ಕರೀಂದ್ರನಂ ಸಿಂಹದವೋಲ್ ॥ ೧೨ ॥

ಶುಭವರ್ಗದೊಳೊಡಗೂಡಿರೆ ।
ಶುಭೇತರಗ್ರಹಮದಂ ನಿರೀಕ್ಷಿಪೊಡೆ ವಲಂ ॥
[5]ಶುಭಲಗ್ನದೊಳೊಡಗೂಡಿದ ।
ಶುಭಗ್ರಹಂ ಸಕಳ ದುರಿತಮಂ ಪರಿಹರಿಕುಂ ॥ ೧೩ ॥

ಸಮನಿಸೆ ಜನ್ಮೋದಯಮಾ ।
ಸಮಯದೊಳುದಯಿಪೊಡಗಸ್ತ್ಯಮುನಿಪಂ ಮೇಣ್ ಸ ॥
ಪ್ತಮುನೀಂದ್ರರುದಯಮಾದೊಡೆ ।
ಸಮಸ್ತ ದೋಷೋಪಶಮನಮದು ಬುಧಮಿತ್ರಾ ॥ ೧೪ ॥

1. ಶಿ 2. ರೆ 3. ಭೇ 4. ವಾ 5. ಶುಭವರ್ಗದೊಳೊಡಗೂಡಿದ



ಮ ॥ ಉರಗೇಂದ್ರಂ ನಿಲೆ ಷಟ್ತ್ರಿಲಾಭಗೃಹದೊಳ್ ಸೌಮ್ಯಗ್ರಹಂ ನೋಡೆ ಮೇಣ್ ।
ಬರೆ ಲಗ್ನಂ ವೃಷಮೇಷಕರ್ಕಟಕಮಾಲಗ್ನಂಗಳೊಳ್ ರಾಹು ಕೂ ॥
ಡಿರೆ ಮೇಣಾಸಕಳಗ್ರಹಂ ನಿರಭಿಭೂತಂ ಪೂರ್ಣ ತೇಜಸ್ವಲಾ ।
ಗಿರೆ ಶೀರ್ಷೋದಯ ರಾಶಿಯೊಳ್ ನಿಖಿ[1]ಳರಿಷ್ಟಂ ನಷ್ಟಮಂ
ಪೊರ್ದುಗುಂ ॥ ೧೫ ॥

ಕಂ ॥ ಶುಭಯೋಗಾವಳಿ ಬರೆ ಮೇಣ್ ।
ಶುಭಗ್ರಹಂ ಕೂಡದಿರ್ದೊಡಂ ಸೌಮ್ಯರ್ ಮ ॥
ತ್ತಭಿವೀಕ್ಷಿಸೆ ಬಹುವಿಧರಿ ।
ಷ್ಟಭಂಗಮೆಂದಱಿಗೆ ಜನನ ತಾತ್ಕಾಲಿಕದೊಳ್ ॥ ೧೬ ॥

ಪವನರಜಂ ಸ್ನಿಗ್ಧಮುಮಾ ।
××××ದೊಡೆ ಶುಭಮುಹೂರ್ತಮಾಗಿರೆ ಮುಗಿಲೊ ॥
ದವೆ ನುಣ್ಪಂ ಪಡೆದೊಡೆ ಪರಿ ।
ಭವಮುಂ ಗ್ರಹಕಾಗದಿರ್ದೊಡಘಸಂಹರಣಂ ॥ ೧೭ ॥

ಗ್ರಹಮಿರೆ ಪರಿವೇಷದೊಳಾ ।
ಗ್ರಹಮಂ ನಿರೀಕ್ಷಿಸುವೊಡರಿ (?) ॥
ಷ್ಟಹರಂ ತುಷ್ಟಿಕರನಭೀ ।
ಷ್ಟಹೇತು ಜನ್ಮಾವಸರದೊಳಿದು ಬುಧಮಿತ್ರಾ ॥ ೧೮ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ಅರಿಷ್ಟಭಂಗಪ್ರಕರಣ ವರ್ಣನಂ
**ಸಪ್ತಮಾಧಿಕಾರಂ**

1. ಳಾ

# ಅಷ್ಟಮಾಧಿಕಾರಂ

## ಆಯುರ್ದಾಯನಿರ್ಣಯಪ್ರಕರಣ ವರ್ಣನಂ

ಮ ॥ ಕ್ರಮದಿಂದಂ ಗ್ರಹರಾಶಿಭಾಗಕಲೆಯಂ ನೂಱೆಂಟಱಿಂ ಪೆರ್ಚಿಸು ।
ಕ್ರಮದಿಂದೆತ್ತಱುವತ್ತಱಿಂದೆ ಕಲೆಯಂ ಮೂವತ್ತಱಿಂದೆತ್ತು ಭಾ ॥
ಗಮನೀರಾಱಲು ರಾಶಿಯಂ ಭಗಣಮಕ್ಕುಂ ಲಬ್ಧಮಾಪೆತ್ತ ಲ ।
ಬ್ಧಮನೀರಾಱಱಿನಬ್ದಮಾಸದಿನನಾಡೀಸಂಖ್ಯೆ ಶೇಷಸ್ಥಿತಂ ॥ ೧ ॥

ರವಿಮುಖ್ಯಗ್ರಹಕೆಂತು ತಪ್ಪದು ವಿಲಗ್ನಕ್ಕಂತೆ ದಲ್ ತಪ್ಪದಾ ।
ಯುಪನಾಲಗ್ನವಶೇಷ ವೀರ್ಯಯುತಮಾಗಿರ್ದಂದು ರಾಶಿಪ್ರ[1]ಮಾ ॥
ಬ್ದವೆನಿಕ್ಕುಂ ಬೞಿಕಂಶಮಂ ಕಳೆಯುಮಂ ತ್ರೈರಾಶಿಕಂಗೊಂಡೊಡ ।
ಲ್ತೆ ವಲಂ ಪೆತ್ತವು ಮಾಸವಾಸರಘಟೀಮಾನಂ ತದಾಯುಷ್ಯದಾ ॥ ೨ ॥

ಜನನಪ್ರಸ್ತುತ ಕಾಲದೊಳ್ ಸ್ವಭವನದ್ರೇಕ್ಕಾಣ ವರ್ಗೋತ್ತಮಾಂ ।
ಶನವಾಂಶೋಪಗತಂ ಸಕೃದ್ವಿಗುಣಮಂ ವಕ್ರಸ್ಥನಾಗಿರ್ದೊಡ ॥
ಕ್ಕೆ ನಿಜೋಚ್ಚಸ್ಥಿತನಾದೊಡಂ ತ್ರಿಗುಣಮಂ ತಾನೀಗುಮಾಮೇನೆ ಪೆ ।
ತ್ತನಿತಂ ಮೂವಡಿ ಮಾೞ್ಪುದೊಮ್ಮೆಯೆ ವಲಂ ದ್ವಿತ್ರ್ಯಂಹಕಂ
ಬಂದೊಡಂ ॥ ೩ ॥

ಚಂ ॥ ಯಮದನುಜೇಂದ್ರವಂದ್ಯರಹಿತಂ ರವಿಮಂಡಳದೊಳ್ ಗ್ರಹಂಗಳ ।
ಸ್ತಮಿಸಿದೊಡಕ್ಕೆ ಭೌಮರಹಿತಂ ದಿನಪಂ ನಿಲೆ ನೀಚದೊಳ್ ತದ ॥
ರ್ಧಮನಧಿಕರ್ ವಿರೋಧಿಭವನೋಪಗತಗ್ರಹಮಾ ತೃತೀಯ ಭಾ ।
ಗಮನದು ತನ್ನದೊಂದು [2]ಕಡುವಾಯುವಿನೊಳ್ ಕ್ಷಣದಿಂದೆ
ಕುಂದಿಕುಂ ॥ ೪ ॥

ಮ ॥ ಉದಯಕ್ಕಂತ್ಯದೊಳೊಂದಿ ನಿಂದೊಡೆ ನಿಜಾಯುರ್ದಾಯಮಂ ಲಾಭಗೇ ।
ಹದೊಳಂ ತದ್ವಿತಯಾಂಶಮಂ ದಶಮದೊಳ್ ಸತ್ರ್ಯಂಶಮಂ ತ್ರಿತ್ರಿಕೋ ॥
ಣದೊಳಾ ನಾಲ್ಕನೆಯಂಶಮಂ ನಿಧನದೊಳ್ ಪಂಚಾಂಶಮಂ ಸಪ್ತಮ ।
ಕ್ಷ್ಣದೊಳಾಱಂಶಮನಾವಗಂ ಕಿಡಿಸುಗುಂ ಪಾಪಗ್ರಹಂ ನಿಶ್ಚಯಂ ॥ ೫ ॥

ಅಕ್ಕರ ॥ ಜನನಲಗ್ನಕ್ಕಂತ್ಯದೊಳಾಯದೊಳಾಯುರ್ಭಾಗಮನಾಯದೊ
ಳಾಯುವ ನಾ ।
ಲ್ಕನೆಯ ಭಾಗಮಂ ದಶಮದೊಳಾಯುವ ಷಡ್ಭಾಗಮಂ ನವಮದೊಳೆಂ ॥
ಟನೆಯ ಭಾಗಮನೆಂಟನೆಯೆಡೆಯೊಳಾಯುವ ದಶಮಭಾಗಮನಸ್ತನಿಕೇ ।
ತನದೊಳಾಯುವ ದ್ವಾದಶಭಾಗಮಂ ಸದ್ಗ್ರಹಂ ಕಿಡಿಸುಗುಂ ನಿಜ
ದಾಯದೊಳ್ ॥ ೬ ॥

1. ಮಾಣಾ 2. ಕು



ಕಂ ॥ ನಿಲೆ ತದ್ವ್ಯಯಾದಿ ಗೃಹದೊಳ್ ।
ಪಲವುಂ ಗ್ರಹಮಶುಭಮಕ್ಕೆ ಶುಭಮಕ್ಕವಱೊಳ್ ॥
ಬಲಯುಕ್ತ ಗ್ರಹಮದು ಕೇ ।
ವಲಮಾಯುವನಾತ್ಮದಾಯದೊಳ್ ಪರಿಹರಿಕ್ಕುಂ ॥ ೭ ॥

ಮ ॥ ಜನನಂ ಸಂಭವಿಸಿರ್ದ ಲಗ್ನಗೃಹದೊಳ್ ಪಾಪಗ್ರಹಂ ನಿಂದೊಡ ।
ರ್ಧನವಾಂಶಂಗಳಿನಾಯುವನ್ನಿರಿದು ಭಾಗಂಗೊಂಡು ನೂಱೆಂಟಱಿಂ ॥
ದೆ ನರಾಯುಷ್ಯದೊಳಲ್ತೆ ಕುಂದಿಪುದು ಪೆತ್ತಾಲಬ್ಧಮಂ ನೋಡೆ ಸಾ ।
ಮ್ಯನದಂ ಕುಂದಿಪುದಾಯುವಬ್ದದೊಳಗಂತಾಲಬ್ಧದೊಂದರ್ಧಮಂ ॥ ೮ ॥

ಕಂ ॥ ಗ್ರಹಮೇೞುಂ ಜನನೋದಯ ।
ಗೃಹಮುಂ ಬಳಯುತಮೆನೆ ಪರಸ್ಪರ ಪೀಡಾ ॥
ರಹಿತಂ ಸ್ವಗೃಹಸ್ಥಿತ [ತ] ।
ದ್ಗೃಹಮೆನೆ ಪರಮಾಯುವಂ ಯಥೋಕ್ತಂ ಕುಡುಗುಂ ॥ ೯ ॥

ಮ ॥ ಪರಮಾಯುಷ್ಯಮುಮಯ್ದಿರುಳ್ವೆರಸು ನೂಱಿಪ್ಪತ್ತು ವರ್ಷಂ ನರ ।
ದ್ವಿರದೌಘಕ್ಕೆ ಹಯಕ್ಕೆ ಮೂವತೆರಡಿಪ್ಪತ್ತೆಯ್ದು ಬೆಳ್ಗತ್ತೆಗಂ ॥
ಕರಭಕ್ಕಂ ಮಹಿಷೋಕ್ಷ ಜಾತಿಗೆವಿರೂಪಾನ್ವಿತಮಾನಾಯ್ಗೆ ಪ ।
ನ್ನೆರಡೀರೆಂಟಜಮಾದಿಯಾಗೆ ಮೃಗಸಂದೋಹಕ್ಕೆ ಶಾಸ್ತ್ರೋಕ್ತಿಯಿಂ ॥ ೧೦ ॥

ಧರಣೀಜಂ ಪದಿನೆಯ್ದು ಘರ್ಮರುಚಿ ಪತ್ತೊಂಭತ್ತು ಶಾಶಂಕಿ ಪ ।
ನ್ನೆರಡಿಪ್ಪತ್ತು ದಿನಾಧಿನಾಥಸುತನಿಪ್ಪತ್ತೆಯ್ದು ಚಂದ್ರಂ ಪುರಂ ॥
ದರವಂದ್ಯಂ ಪದಿನೆಯ್ದು ದೈತ್ಯಗುರುವಿಪ್ಪತ್ತೊಂದು ಸಂವತ್ಸರಂ ।
ಪರಮೋಚ್ಚಾಂಶದೊಳೊಂದಿ ನಿಂದೊಡದು ಪಿಂಡಾಯುಷ್ಯಮಕ್ಕುಂ
ಧ್ರುವಂ ॥ ೧೧ ॥

ಕಂ ॥ ಇರೆ ನೀಚದೊಳರ್ಧಮನಪ ।
ಹರಿಸುಗುಮಾನೀಚರಾಶಿಯಿಂದಂ ಪೂರ್ವಾ ॥
ಪರದೊಳನುಪಾತದಿಂ ಪರಿ ।
ಹರಿಸುಗುಂ ನಿಖಿಳಗ್ರಹಂ ಪಿಂಡಾಯುವಿನೊಳ್ ॥ ೧೨ ॥

ಮ ॥ ಇರೆ ಸರ್ವಗ್ರಹಮುಚ್ಚದೊಳ್ ಜನಿಯಿಸಿರ್ದಾವಿಶ್ವ ವಿಶ್ವಂಭರೇ ।
ಶ್ವರನಕ್ಕುಂ ಪರಮಾಯುವಂ ಪಡೆಗುಮೆಂದಂದಾ ವಿಲಗ್ನೋದ್ಭವಂ ॥
ಪರಮಾಯುಷ್ಯಮನೆಯ್ದೆ ಬರ್ದದನತಂ ತಾನುರ್ಪುದಂ ಕಂಡು ಕಂ ।
ಡಿರೆ ಪಿಂಡಾಯುವದೇವುದೆಂಬರರೆಬರ್ ಕೆಯ್ಕೊಳ್ವರಂಶಾಯುವಂ ॥ ೧೩ ॥

ಚಂ ॥ ನವಮನವಾಂಶಕಂ ಝುಷವಿಲಗ್ನದೊಳಾಗಿರೆ ಶೀತರುಕ್ತನೂ ।
ಭವನಿರೆ ಪಂಚವಿಂಶತಿ ಕಳಾಂತರದೊಳ್ ವೃಷರಾಶಿಯಲ್ಲಿ ಮಿ ॥
ಕ್ಕವರಿರೆ ತಮ್ಮತಮ್ಮ ಪರಮೋಚ್ಚಭಾಗದೊಳಾನರಂಗೆ ಸಂ ।
ಭವಿಸುಗುಮಾಯಥೋಕ್ತಪರಮಾಯುವಲಂ ಕವಿರಾಜಬಾಂಧವಾ ॥ ೧೪ ॥

ಮ ॥ ತ್ರಿದಶಾಧೀಶ್ವರಮಂತ್ರಿ ಶೀತಕರರೆಂಬೀಯಿರ್ವರುಂ ಕರ್ಕಿಗೇ ।
ಹದೊಳಿರ್ದಂದು ಶಶಾಂಕಸೂನು ಸಿತರೆಂಬೀಯಿರ್ವರುಂ ಕೇಂದ್ರಗೇ ॥
ಹದೊಳಿರ್ದಂದು ರಿಪುತ್ರಿಲಾಭಗೃಹದೊಳ್ ಮಿಕ್ಕನ್ಯರಿರ್ದಂದು ಪು ।
ಟ್ಟಿದ ಮರ್ತ್ಯಂಗೆ ಚಿರಾಯು ಸಂಭವಿಸುಗುಂ ಸಮ್ಯಕ್ತ್ವರತ್ನಾಕರಾ ॥ ೧೫ ॥

ಕಂ ॥ ಅಮಿತಾಯುಷ್ಯಂ ದೊರೆಕೊಂ ।
ಡ ಮನುಷ್ಯಂಗಖಿಳಮಂತ್ರ ದಿವ್ಯೌಷಧಿ ಸಿ ॥
ದ್ಧ ಮಹಾಬಿಲಪ್ರವೇಶಂ ।
ಸುಮನೋವರ್ಗಪ್ರಸಾದಮುಂ ದೊರೆಕೊಳ್ಗುಂ ॥ ೧೬ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ಆಯುರ್ದಾಯನಿರ್ಣಯಪ್ರಕರಣ ವರ್ಣನಂ
**ಅಷ್ಟಮಾಧಿಕಾರಂ**

# ನವಮಾಧಿಕಾರಂ

## ದಶಾಂತರ್ದಶಾಪ್ರಕರಣ ವರ್ಣನಂ

ಕಂ ॥ ದೊರಕೊಂಡಾಯುವಿನೊಳಗಂ ।
ತರಿಸಿಯುಮೊಡಗೂಡಿಯುಂ ವಿಶುದ್ಧಂ ತಾನಾ ॥
ಗಿರೆ ತದ್ಗ್ರಹದಾಯುಷ್ಯದ ।
ಪರಿಮಾಣಮೆ ತದ್ದಶಾಪ್ರಮಾಣಮೆನಿಕ್ಕುಂ ॥ ೧ ॥

ಮ॥ ಸ್ರ॥ ಉದಯಾದಿತ್ಯೇಂದುವೆಂದಿಂತಿವಱೊಳತಿಬಲಾಢ್ಯಂ ವಿಲಗ್ನೋದ್ಭವಂಗಾ ।
ದಿದಶಾನಾಥಗ್ರಹಂ ಮತ್ತೆರಡನೆಯದಱಾನಾಯಕಂ ಕೇಂದ್ರದೊಳ್ ನಿಂ ॥
ದುದು ಕೇಂದ್ರಸ್ಥಾನದೊಳ್ ನಿಲ್ಲದೊಡೆ ಪಣಪರಸ್ಥಾನದೊಳ್ ನಿಂದುದಂತ ।
ಲ್ಲದೊಡಾ [1]ಬೋಕ್ಲೀಬದೊಳ್ ನಿಂದುದು ತರತರದಿಂದಕ್ಕುಮಿಾ[2]
ಬಾಱ್ಕೆಯಿಂದಂ ॥ ೨ ॥

ಮ ॥ ಪಲವುಂ ಕೇಂದ್ರದೊಳಿರ್ದೊಡಲ್ಲಿ ಬಲಸಂಯುಕ್ತಗ್ರಹಂ ಮುಖ್ಯಮಾ ।
ಪಲವುಂ ಬಲ್ಲಿದರಾದೊಡಲ್ಲಿ ವಿಪುಳಾಯುರ್ದಾಯಕಂ ಮುಖ್ಯಮಾ ॥
ಪಲವೊಂದಂದದಿನಾಯುವಂ ಕುಡುವ[3]ರಿಂತಾದಲ್ಲಿ ಪೂರ್ವೋದಿತಂ ।
ಬಲಯುಕ್ತಗ್ರಹಮಧ್ಯದೊಳ್ದೆಸೆಗೆ ಮುಖ್ಯಂ ಪದ್ಯವಿದ್ಯಾಧರಾ ॥ ೩ ॥

ಕಂ ॥ ದಿನಪಾದಿಗ್ರಹಮಾತ್ಮೋ ।
ಚ್ಚನಿಳಯದಿಂ ದ್ವಾದಶಾಳಯುಂಗಳ್ ನವಸಂ ॥
ಖ್ಯೆ ನವಾಂಶಕದೊಳ್ ತಾಂ ನೆಲ ।
ಸಿ ನಿಂದಂದುಚ್ಚಾಭಿಲಾಷಿ ತದ್ದೆಸೆ ಶುಭದಂ ॥ ೪ ॥

ಸ್ವಗೃಹಾತ್ಮನವಾಂಶಕ ಮಿ ।
ತ್ರಗ್ರಹ ನಿಜೋಚ್ಚಂಗಳೊಳ್ ದಶಾಪತಿ ನಿಲೆ ಮಾ ॥
ಡುಗುಮೊಳ್ಪಂ ತದ್ವಿಪರೀ ।
ತಗನುಂ ನೀಚಾಭಿಲಾಷಿಯುಂ ಪೊಲ್ಲಮೆಯಂ ॥ ೫ ॥

ಮ ॥ ದಿನನಾಥಾದಿಗಳುಚ್ಚದಿಂದಿೞಿಯೆ ನೀ[4]ಚಾಂತಾಪಿನಂ ಕಷ್ಟಮಂ ।
ತನಿತುಂ ತಾನವರೋಹಿ ತದ್ದಶೆ ತದಾವಾಸಂಗಳೊಳ್ ತುಂಗಮಿ ।
ತ್ರನಿಜೋಚ್ಚಸ್ಥಿತರಾಗೆ ಮಧ್ಯಫಳದಂ ತನ್ನೀಚದಿಂದುಚ್ಚಮು ।
ಪ್ಪಿನಮಾರೋಹಿ ವಿಶಿಷ್ಟಮಲ್ಲಿರಿಪು ನೀಚಾಂಶಸ್ಥಿತಂ ನಿಂದಿತಂ ॥ ೬ ॥

ಕಂ ॥ ಅರಿಗೃಹ ನವಾಂಶಕದೊಳ್ಕು ।
ಡಿರೆಯುಂ ಮೇಣ್ ನಿಜಗೃಹ ನವಾಂಶಕದೊಳ್ ಕೂ ॥
ಡಿರೆಯುಂ ಲಗ್ನದಶಾಧೀ ।
ಶ್ವರನಾಥಂಗಕ್ಕುಮಲ್ಲಿ[5] ಸಾಮಾನ್ಯ ಫಳಂ ॥ ೭ ॥

---
1. ಪೋ 2. ಮಾ 3. ರಂ 4. ಚಂ 5. ಲ್ತೆ

ಮ ॥ ಕ್ರಮದಿಂ ಲಗ್ನದಶಾಧಿಪಂ ನಿಲೆ ಚರದ್ರೇಕ್ಕಾಣದೊಳ್ ಜೀವಿಗು ।
ತ್ತಮ ಸಾಮಾನ್ಯ ಜಘನ್ಯಮಪ್ಪ ಫಳಮಂತಾಮೂಱಱೊಳ್ ನಿಶ್ಚಿಭೋ ॥
ತ್ತಮ ಸಾಮಾನ್ಯಫಳಂ ಸ್ಥಿರೋದಯಗೃಹದ್ರೇಕ್ಕಾಣದೊಳ್ ಕಷ್ಟ ಮ ।
ಧ್ಯಮ ಸಂಪುಷ್ಟ ಫಳಂ ದ್ವಿದೇಹದುದಯದ್ರೇಕ್ಕಾಣದೊಳ್ ಕೂಡುಗುಂ ॥ ೮ ॥

ಗ್ರಹಯುಗ್ಮಂ ನೆಲಸಿರ್ದೊಡೊಂದೆ ಗೃಹದೊಳ್ ದಾಯಾರ್ಥಮಂ
ಮೇಣ್ ಗೃಹಂ ।
ಗ್ರಹದಿಂದಂ ನವಪಂಚಮಂಗಳೊಳಿರಲ್ ತ್ರ್ಯಂಶಂಶಮಂ ದ್ಯೂನದೊಳ್ ॥
ಗ್ರಹದಿಂದಂ ನಿಲೆ ಸಪ್ತಮಾಂಶಜನಿತಂ ತೂರ್ಯಾಷ್ಟಮ ಸ್ಥಾನದೊಳ್ ।
ಗ್ರಹದಿಂ ಕೂಡೆ ಪರಸ್ಪರಂ ಸ್ವಗುಣದಿಂದಾಳ್ಗುಂ ಚತುರ್ಥಾಂಶಮಂ ॥ ೯ ॥

ಕಂ ॥ ಪಲವೊಂದು ರಾಶಿಯೊಳ್ ನಿಲೆ ।
ಬಲಾಢ್ಯನಂತರ್ದಶಾಧಿನಾಯಕನಕ್ಕುಂ ॥
ನಿಲೆ ಲಗ್ನಕ್ಕಂ ಗ್ರಹಸಂ ।
ಕುಲಯುಕ್ತಕ್ರಮದಿನವು ಪರಸ್ಪರಮಾಳ್ಗುಂ ॥ ೧೦ ॥

ಮ ॥ ಕ್ರಮದಿಂ ಪೇೞ್ದ ತದಂಶಮಂ ನೆಱೆ ಸಮಾನಚ್ಛೇದಮಂ ಮಾಡಿ ಛೇ ।
ದಮನಲ್ಲಿಂ ಕಳೆದಂಶಮಂ ನಿಱಿಸಿ ನಿಂದಂಶಂಗಳಂ ಕೂಡೆ ಛೇ ॥
ದಮದಕ್ಕುಂ ಗುಣಕಾರರಾಶಿಯೆನಿಕುಂ ಪ್ರತ್ಯಂಶುಮಾಯುಃಪ್ರಮಾ ।
ಣಮನೊತ್ತಂಶದಿನೆತ್ತು ಛೇದಫಳಮಂ ಪ್ರವ್ಯಕ್ತಮಾರ್ಗಾದೊಡಂ ॥ ೧೧ ॥

ಕಂ॥ ಅಂತರ್ದಶಾಧಿಪಂ ಬಳ ।
ವಂತಂ ತಾನಾದೊಡಂ ದಶಾನಾಥಂ ಮು ॥
ನ್ನಂ ತನ್ನಂಶಮನಾಳ್ಗುಮ ।
ನಂತರಮಂತರ್ದಶಾಧಿನಾಯಕನಾಳ್ಗುಂ ॥ ೧೨ ॥

ಎಂತುಟು ದಶಾಧಿಪತಿಫಳ ।
ವಂತರ್ದಶೆಗಧಿಪನೀವ ಫಳಮಂ ನೋೞ್ಪಿಂ ॥
ದಂತುಟೆ ಜನ್ಮವಿಲಗ್ನಫ ।
ಳಂ ತಲ್ಲಗ್ನೇಶಫಳಸಮಾನಮೆನಿಕ್ಕುಂ ॥ ೧೩ ॥

ಮ ॥ ಧ್ರುವಮಬ್ಜಾಹಿತನೆಂಟು ಭೌಮನೆರಡಿಂದುಪ್ರೋದ್ಭವಂ ಹತ್ತು ಭಾ ।
ರ್ಗವನಿಪ್ಪತ್ತು ಸುರೇಂದ್ರಮಂತ್ರಿ ಪದಿನೆಂಟಾದಿತ್ಯನಿಪ್ಪತ್ತು ಭಾ ॥
ನವಿಯಯ್ವತ್ತು ನಿಸರ್ಗಭಾವದ ದಶಾಸಂವತ್ಸರಕ್ಕೀಶರ ।
ಪ್ಪವರಾತಮ್ಮ ಗುಣಾನಿರೂಪವಶದಿಂದಾಳ್ವರ್ದಶಾಕಾಲಮಂ ॥ ೧೪ ॥

ಚಂ ॥ ತ್ರಿದಶಷಡಾಯುರಾಶಿಗಳೊಳಕ್ಕೆ ವಿಲಗ್ನದೊಳಕ್ಕೆ ಮೇಣ್ ಸುಹೃ ।
ತ್ಸದನದೊಳಕ್ಕೆ ಸದ್ಗ್ರಹದ ವರ್ಗದೊಳಕ್ಕೆರೆ ಚಾಪನಾಥನ ॥
ಲ್ಲದೊಡೆ ದಶಾಧಿನಾಥನಸುಹೃದ್ಭವನೋಪಚಯ ತ್ರಿಕೋಣಗೇ ।
ಹದೊಳಿರೆ ಚಂದ್ರನಾದೊಡೆ ಶುಭಂ ನಿಲೆ ಬೇಱೆಡೆಯೊಳ್ ಶುಭೇತರಂ ॥ ೧೫ ॥



ಮ॥ ಸ್ರ॥ ಇರೆ ಚಂದ್ರಂ ಕರ್ಕಿ ಗೇಹಾಂತರದೊಳುಪಚಯಂ ತತ್ಸಮಂ ಜೀವ ಗೇಹಾಂ ।
ತರದೊಳ್ ದುರ್ಗಾಧ್ವಕರ್ಕ್ಶ್ಯಾಶಯ ಕೃಷಿಭೃಗುಜಕ್ಷೇತ್ರದೊಳ್
ತತ್ಸಮಂ ಕೇ ॥
ಸರಿಯೊಳ್ ಕುಸ್ತ್ರೀಯುಮಕ್ಷೇತ್ರದೊಳವನಿಸುತ ಕ್ಷೇತ್ರದೊಳ್ ಸ್ತ್ರೀವಿಶುದ್ಧಾ ।
ಚರಣಂ ವಿ[1]ದ್ಯಾರ್ಥಪುತ್ರಪ್ರತತಿ ಶಶಿಸುತಕ್ಷೇತ್ರದೊಳ್ ಕೂಡಿ ಬರ್ಕುಂ ॥ ೧೬ ॥

ಕಂ ॥ ಕನಕತ್ವಕ್‌ನಖದಂತದಿ ।
ನನುವರದಿಂ ನೃಪರಿನಧ್ವಗಮನದಿನಕ್ಕುಂ ॥
ಧನಮುದ್ಯಮರತ ವಿಖ್ಯಾ ।
ತನಚಳಿತಂ ಶಿಕ್ಷನೆನಿಕುಮರ್ಕನ ದೆಶೆಯೊಳ್ ॥ ೧೭ ॥

ಅರಿಪುತ್ರಕಳತ್ರಧನಾ ।
ಗ್ನಿರಾಜಬಾಧೋಪಹತನುದಾರಗುಣಂ ಪಾ ॥
ಪರತಂ ಸ್ವಭೃತ್ಯಕಲಹಂ ।
ಸರುಜಂ ಹೃದ್ರೋಗಿ ದಿನಪನವರೋಹಿಣಿಯೊಳ್ ॥ ೧೮ ॥

ಮ ॥ ತಿಳದಿಂ ವಸ್ತ್ರದಿನರ್ಥದಿಂ ಕುಸುಮದಿಂ ದಿವ್ಯಾನ್ನದಿಂ ವಿಪ್ರಸಂ ।
ಕುಳದಿಂ [2]ದಿಕ್ಷ್ವಪಯೋ[2]ವಿಕಾರದಿನಿಳಾ ಭೃನ್ಮಂತ್ರದಿಂ ಕ್ರೀಡೆಯಿಂ ॥
ಫಳಮಕ್ಕುಂ ಮೃದುವಿಪ್ರದೇವರತಿ ಮೇಧಾವಿತ್ವಮರ್ಥಾಪ್ತಿ ಮೊ ।
ಕ್ಕಳಮಕ್ಕುಂ ಮನುಜಂಗೆ ಚಂದ್ರದೆಶೆಯಪ್ಪಾರೋಹಿಗೇಹಂಗಳೊಳ್ ॥ ೧೯ ॥

ಕಂ ॥ ಸುತೆಯರ್ ಪುಟ್ಟುವರಂತಾ ।
ಶ್ರಿತರೊಳ್ ಬಲ್ಲಿದಱೊಳೊಂದುಗುಂ ವೈರಂ ನಿ ॥
ಶ್ಚಿತಕೀರ್ತಿಹಾನಿ ಬಹು ನಿ ।
ದ್ರತೆ ದೊರೆಕೊಳ್ಗುಂ ನಿಶೇಶನವರೋಹಿಣಿಯೊಳ್ ॥ ೨೦ ॥

ಜನಪತಿಸೇವೆಯಿನರಿಮ ।
ರ್ದನದಿಂದಜಮೇಷಸಮಿತಿಯಿಂ ನಿಜಸಹಜಾ ॥
ತನಿನುರ್ವರೆಯಿಂದಕ್ಕುಂ ।
ಕನಕಂ ಕನಕಾಭಿಧಾನನಾರೋಹಿಣಿಯೊಳ್ ॥ ೨೧ ॥

ಮ ॥ ಗುರು ವಿಪ್ರಪ್ರಕರಕ್ಕೆ ತಾನೆ ಮುನಿಗುಂ ಮಿತ್ರಸ್ವಕಾಂತಾಸಹೋ ।
ದರಪುತ್ರೋತ್ಕರಮಾನರಂಗೆ ಮುನಿಗುಂ ಪಿತ್ತೋತ್ಕಟಂ ಕ್ಷುತ್ತೃಷಾ ॥
ಜ್ವರಭಂಗಂಗಳಿನಾಮಯಂ ಸಮನಿಕುಂ ಪಾಣ್ಬಂ ಖಳಪ್ರೀತಿ ಪಾ ।
ಪರತಂ ತಾನವರೋಹಿಯಪ್ಪ ದಶೆಯೊಳ್ ವಿಶ್ವಂಭರಾಪುತ್ರನಾ ॥ ೨೨ ॥

ಕನಕಂ ವೇಸರಗಟ್ಟೆ ಭೂಮಿಸುಭಗತ್ವಂ ಯುಕ್ತಿಮಂತ್ರಜ್ಞಮೆಂ ।
ಬಿನಿತಕ್ಕುಂ ದ್ವಿಜಮಿತ್ರದೂತಗುರುಸಂದೋಹಂಗ[3]ಳಿಂದಕ್ಕುಮ ॥
ರ್ಥನಿಕಾಯಂ ನೃಪಸೇವನಾಪ್ರಹಸನಪ್ರಾವೀಣ್ಯಮುಂ ಬುದ್ಧಿವ ।
ರ್ಧನಮುಂ ಮಾಸರಮಕ್ಕುಮೈಂದವದಶೋಕ್ತಾರೋಹ
ಗೇಹಂಗಳೊಳ್ ॥ ೨೩ ॥

1. ದ್ಯ 2. ದೀಕ್ಷ್ವಿಪಯೋ 3. ಳಿಂ

ಕಂ ॥ ಶ್ರಮಬಂಧನ ವಾಕ್ಪಾರು ।
ಷ್ಯಮನೋದುಃಖಂ ತ್ರಿದೋಷಸಮುದಿತರೋಗಂ ॥
ಸಮನಿಸುಗುಂ ಮನುಜಂಗವ್ಯ ।
ತಘುಯುೂಖಾಪತ್ಯದಶೆಯೊಳವರೋಹಿಣಿಯೊಳ್ ॥ ೨೪ ॥

ಮ ॥ ಸುತಹೇ[1]ಮಾಂಬರಕುಂಜರಾಶ್ವಚಯಮುಂ ತತ್ಕಾಂತಿಯುಂ ವಿಕ್ರಮೋ ।
ನ್ನತಿಯುಂ ಮಂತ್ರಮಹೀಭುಜೋದ್ಯಮನಯ ಸ್ವಾಧ್ಯಾಯ
ಮಾಹಾತ್ಮ್ಯ ಸಂ ॥
ಹತಿಯಿಂದಂ ಧನಮುಂ ಗುಣೋದಯಮುಮುರ್ಬೀಶೋತ್ತಮ [2]ಪ್ರೀತಿಸಂ ।
ತತಿಯುಂ[2] ಪೆರ್ಚುಗುಮಿಂದ್ರಮಂತ್ರಿದಶೆಯಪ್ಪಾರೋಹಿ
ಸಂಸ್ಥಾನದೊಳ್ ॥ ೨೫ ॥

ಕಂ ॥ ಶ್ರವಣಾಮಯಮುಂ ನಿಜಭೃ ।
ತ್ಯವೈರಮುಂ ಪಾಪಕರ್ಮವಿರಸತೆಯುಂ ಲಾ ॥
ಘವಮುಂ ಕಷ್ಟಪ್ರಾಪ್ತಿಯು ।
ಮಿವು ಸಮನಿಸುಗುಂ ಸುರೇಜ್ಯನವರೋಹಿಣಿಯೊಳ್ ॥ ೨೬ ॥

ಮ ॥ ಯುವತೀಕಾಂಚನಮನ್ಮಥೋಪಕರಣ ಜ್ಞಾನಾನ್ನಪಾನೇಷ್ಟಬಾಂ ।
ಧವರಾತ್ಮದ್ಯುತಿ ಗೀತಿವಸ್ತ್ರಸುರಭಿಃ ದ್ರವ್ಯಪ್ರಯೋಗಂಗಳೆಂ ॥
ಬಿವು ಸಾರ್ಗುಂ ಕ್ರಯವಿಕ್ರಯಪ್ರವಿಣನಾರಂಭೋದ್ಯತಂ ತಾನೆನಿ ।
ಕ್ಕುವವಂ ದಾನವಮಂತ್ರಿಯೊಳ್ಪದೆಸೆಯಪ್ಪಾರೋಹಿಯೊಳ್ ನಿಶ್ಚಯಂ ॥ ೨೭ ॥

ಕಂ ॥ ಬಹುಜನದೊಳ್ ಧರ್ಮದಯಾ ।
ರಹಿತರೊಳವನಿಪರೊಳಳಿನಿಶಾಟರೊಳಕ್ಕುಂ ॥
ಬಹುವಿಧವೈರಂ ಶೋಕಂ।
ಸುಹೃದಯದಿಂದಕ್ಕುಮುಶನನವರೋಹಿಣಿಯೊಳ್ ॥ ೨೮ ॥

ಮ ॥ ಅನಿಲಂ ಶ್ಲೇಷ್ಮರುಜಾಪ್ರಕೋಪಮಸಹಿಷ್ಣುತ್ವಂ ಮಹಾಧ್ವಶ್ರಮಂ ।
ಮುನಿಸಾಪತ್ತು ನಿಜಾಂಗಹೀನತೆ ರುಜಾಲಸ್ಯಂ ಮಹಾಮೋಹಮೆಂ ॥
ಬಿನಿತುಂ ಪುತ್ರಕಲತ್ರಮಿತ್ರಜನದುದ್ವೇಗತ್ವಮುಂ ಕೂಡುಗುಂ ।
ಮನುಜಾತಂಗವರೋಹಿಯಪ್ಪ ದೆಸೆಯೊಳ್ ಪದ್ಮಪ್ರಿಯಾಪುತ್ರನಾ ॥ ೨೯ ॥

ಇದು

ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ದಶಾಂತರ್ದಶಾಪ್ರಕರಣ ವರ್ಣನಂ
**ನವಮಾಧಿಕಾರಂ**

1. ವೇ 2. ಯುಂ । ರತಿಯುಂ

## ದಶಮಾಧಿಕಾರಂ

### ಅಷ್ಟಕವರ್ಗಪ್ರಕರಣ ವರ್ಣನಂ

ಕಂ ॥ ದಿವಸಕರಾದಿಗಳೊಳಭೀ ।
ಷ್ಟವೆನಿಪ್ಪ ಗ್ರಹಮದೊಂದು ಶೇಷಗ್ರಹ [1]ಮೂ ॥
ಱು ವಿಲಗ್ನಭವನಮೆಂದಿಂ ।
ತಿವಱಿ ಶುಭಾಶುಭಮನಱಿವುದಷ್ಟಕವರ್ಗಂ ॥ ೧ ॥

ಅಕ್ಕರ—
ಬರೆದು ಕುಂಡಲಿಚಕ್ರಮಂ ಜನ್ಮಕಾಲದೊಳಿರ್ದ ಗ್ರಹಮುಮಂ
ಲಗ್ನಸಮೂಹಮುಮಂ ।
ತರದಿನಿಱಿಸಿ ನಿಜೇಷ್ಟಗ್ರಹದೆಡೆಗೆ ಪೇೞ್ದೆಡೆಗಳಂ ಬಿಂಬಿಸಿ ಪೇೞಿದೆಡೆಗೆ ತೆಗೆ ॥
ದ ರೇಖೆಯನಂಶವು ಸರಿಯಾಗೆ ಸರಿಗಳೆವುದು ಬಿಂದುವಧಿಕಮಾಗೆ ಬರೆ ಶು ।
ಭಂ ರೇಖೆ ಪೆರ್ಚಿದೊಡಮಶುಭಮಾಯೆರಡುಮಿಲ್ಲದೊಡೆ ಮಧ್ಯಫಳಂ ॥ ೨ ॥

ಮ॥ ಸ್ರ॥ ದಿವಸೇಂದ್ರಂ ಕೇಂದ್ರಲಾಭಾಷ್ಟಮನವಮಧನಸ್ಥಾನದೊಳ್ ಭೌಮನಿಂ ಭಾ ।
ನುವನಿಂ ತತ್ಕ್ಷೇತ್ರದೊಳ್ ಸೌಮ್ಯನಿನುಪಚಯಧರ್ಮವ್ಯಯಾಪತ್ಯ
ದೊಳ್ ಭಾ ॥
ರ್ಗವನಿಂದಂತ್ಯಾ[2]ದಿ ಜ್ಯಾಮಿತ್ರದೊಳುಪಚಯದೊಳ್ ಚಂದ್ರನಿಂ
ಲಾಭವಿಟ್ ಷ ।
ಣ್ಣವದೊಳ್ ಶಕ್ರೇಜ್ಯನಿಂ ಲಗ್ನದಿನುಪಚಯತೂರ್ಯಾಂತದೊಳ್
ಮಾಱ್ಕುಮೊಳ್ಪಂ ॥ ೩ ॥

ಹಿಮಧಾ[3]ಮದ್ಯೂನ[3] ಗೇಹೋಪಚಯದೊಳಸುರಾಮಾತ್ಯನಿಂದಂ
ಚತುಃಸ ।
ಪ್ತಮಕರ್ಮಾಯತ್ರಿಧರ್ಮಾತ್ಮಜನೊಳನಿಮಿಷಾಮಾತ್ಯನಿಂ ವಿತ್ತ
ಲಾಭಾ ॥
ಷ್ಟಮದೊಳ್ ಧಾತ್ರೀಜನಿಂ ಷಟ್ತ್ರಿದಶನವಸುತಾರ್ಥಾಯದೊಳ್
ಸೌಮ್ಯನಿಂ ಪಂ ।
ಚಮಕೇಂದ್ರಾಯತ್ರಿರಂಧ್ರಂಗಳೊಳತಿಶುಭದಂ ಶೇಷದೊಳ್
ಪೊಲ್ಲನಕ್ಕುಂ ॥ ೪ ॥

ಕಂ ॥ ಶನಿಯಿಂ ತ್ರಿಷಡೇಕಾದಶ ।
ತನೂಜರಿಂ ಲಗ್ನದಿಂದಮುಪಚಯದೊಳ್ ಸೂ ॥
ರ್ಯನಿನುಪಚಯಾಸ್ತಮಳನಿಧ ।
ನ ನಿವಾಸದೊಳಮೃತಕಿರಣನೊಳ್ಪಂ ಮಾಱ್ಕುಂ ॥ ೫ ॥

1. ವಾ 2. ರಿ 3. ಮಂ ದ್ಯೂತ

## ಅಷ್ಟಕವರ್ಗಪ್ರಕರಣ ವರ್ಣನಂ

ಚಂ ॥ ಜಲರುಹ ಬಂಧು ಚಂದ್ರಮನಿನಕ್ಕೆ ವಿಲಗ್ನದಿನಕ್ಕೆ ಪತ್ತುಜೊಳ್ ।
ನಿಲೆ ಪಿತೃವಿನಿಂ ಧನಂ ಸಮನಿಕುಂ ನಿಲೆ ಶಶಿ ಮಾತೃವಿಂ ಕುಜಂ ॥
ನಿಲೆ ರಿಪುವರ್ಗದಿಂ ಶಶಿಸುತಂ ನಿಲೆ ಮಿತ್ರರಿನಂಗಿರಾಸುತಂ ।
ನಿಲೆ ಸಹಜಾತರಿಂ ನಿಲೆ ಸಿತಂ ವಧುವಿಂ ನಿಲೆ ಸೌರಿ ಭೃತ್ಯರಿಂ ॥ ೧ ॥

### ಆದಿತ್ಯಾದಿ ಗ್ರಹಂಗಳ್ಗೆ ಅಷ್ಟಕವರ್ಗಂಗಳುಮಂ ಟೀಕಿಸಿ ಪೇಳ್ದಪಂ

ಆದಿತ್ಯಂಗೆ— ೧ - ೨ - ೪ - ೭ - ೮ - ೯ - ೧೦ - ೧೧ ಅಂತು ಆದಿತ್ಯನ ಬಿಂದು ೪೮.
ಲಗ್ನಕ್ಕೆ— ೩ - ೬ - ೧೦ - ೧೧ ಅಂತು ಚಂದ್ರನ ಬಿಂದು ೪೯.
ಚಂದ್ರಂಗೆ— ೩ - ೬ - ೧೦ - ೧೧ ಚಂದ್ರನ ವರ್ಗ.
ಚಂದ್ರ— ೧ - ೩ - ೬ - ೭ - ೧೦ - ೧೧.
ಮಂಗಳ— ೧ - ೨ - ೪ - ೭ - ೮ - ೧೦ - ೧೧.
ಕುಜ— ೧ - ೨ - ೪ - ೭ - ೮ - ೯ - ೧೦ - ೧೧.
ಮಂಗಳ— ೨ - ೩ - ೫ - ೬ - ೯ - ೧೦ - ೧೧.
ಬುಧ— ೩ - ೫ - ೬ - ೯ - ೧೦ - ೧೧ - ೧೨.
ಬುಧ— ೧ - ೩ - ೪ - ೫ - ೭ - ೮ - ೧೦ - ೧೧.
ಬುಧ— ೩ - ೫ - ೬ - ೧೧.
ಆದಿತ್ಯ— ೩ - ೫ - ೬ - ೧೦.
ಗುರು— ೫ - ೬ - ೯ - ೧೧.
ಗುರು— ೧ - ೨ - ೪ - ೭ - ೮ - ೧೦ - ೧೧.
ಗುರು— ೬ - ೧೦ - ೧೧ - ೧೨.
ಚಂದ್ರ— ೩ - ೬ - ೧೦.
ಶುಕ್ರ— ೬ - ೭ - ೧೨.
ಶುಕ್ರ— ೩ - ೪ - ೫ - ೭ - ೯ - ೧೦ - ೧೧.
ಶುಕ್ರ— ೬ - ೮ - ೧೧ - ೧೨.

---

ಕ. ಪ್ರತಿಯಲ್ಲಿ ಕೊಟ್ಟ ಅಷ್ಟಕವರ್ಗಂಗಳ ವಿವರ:—

**ಆದಿತ್ಯವರ್ಗ:—**

ಆದಿತ್ಯಂಗೆ ೧—೨—೪—೭—೮—೯—೧೦—೧೧.
ಚಂದ್ರಂಗೆ ೩—೬—೧೦—೧೧.
ಕುಜ ೧—೨—೪—೭—೮—೯—೧೦—೧೧.
ಬುಧ ೩—೫—೬—೯—೧೦—೧೧—೧೨.
ಗುರು ೫—೬—೯—೧೧.
ಶುಕ್ರ ೬—೭—೧೨.
ಶನಿ ೧—೨—೪—೭—೮—೯—೧೦—೧೧.
ಲಗ್ನ ೩—೪—೬ ೧೦—೧೧—೧೨.
ಅಂತು ಆದಿತ್ಯನ ಬಿಂದು ೪೮.

**ಚಂದ್ರನವರ್ಗ:—**

ಚಂದ್ರ ೧—೩—೬—೭—೧೦—೧೧.
ಮಂಗಳ ೨—೩—೫—೬—೯—೧೦—೧೧.
ಬುಧ ೧—೩—೪—೫—೭—೮—೧೦—೧೧.
ಗುರು ೧—೨—೪—೭—೮—೧೦—೧೧.
ಶುಕ್ರ ೩—೪—೫—೭—೯—೧೦—೧೧.
ಶನಿ ೩—೫—೬—೧೧.
ಆದಿತ್ಯ ೩—೬—೭—೮—೧೦—೧೧.
ಲಗ್ನ ೩—೬—೧೦—೧೧.
ಅಂತು ಚಂದ್ರನ ಬಿಂದು ೪೯.



ಲಗ್ನಕ್ಕೆ— ೧ - ೩ - ೬ - ೧೦ - ೧೧ ಅಂತು ಮಂಗಳವರ್ಗ ಬಿಂದು ೩೯.
ಶನಿ— ೧ - ೨ - ೪ - ೭ - ೮ - ೯ - ೧೦ - ೧೧.
ಶನಿ— ೩ - ೫ - ೬ - ೧೧.
ಶನಿ— ೧ - ೪ - ೭ - ೮ - ೯ - ೧೦ - ೧೧.
ಆದಿತ್ಯ— ೩ - ೬ - ೭ - ೮ - ೧೦ - ೧೧.
ಲಗ್ನ— ೩ - ೪ - ೬ - ೧೦ - ೧೧ - ೧೨.
ಬುಧವರ್ಗ—ಬುಧ—೧ - ೩ - ೫ - ೬ - ೯ - ೧೦ - ೧೧ - ೧೨.
ಗುರುವರ್ಗ—
ಗುರುವಿಂಗೆ— ೬ - ೯ - ೧೧ - ೧೨ ಅಂತು ಗುರುಬಿಂದು ೫೬.
ಗುರು— ೧ - ೨ - ೩ - ೪ - ೭ - ೮, ೧೦ - ೧೧.
ಶುಕ್ರವರ್ಗ—
ಲಗ್ನಕ್ಕೆ— ೧ - ೨ - ೩ - ೪ - ೫ - ೮ - ೯ - ೧೧ ಅಂತು ಶುಕ್ರ ಬಿಂದು ೫೨.
ಶುಕ್ರನಿಗೆ—೧ - ೨ - ೩ - ೪ - ೫ - ೮ - ೯ - ೧೧.
ಶುಕ್ರ— ೨ - ೫ - ೬ - ೯ - ೧೦ - ೧೧.
ಶನಿ— ೩ - ೪ - ೫ - ೮ - ೯ - ೧೦ - ೧೧.
ಶನಿಗೆ— ೧ - ೨ - ೪ - ೭ - ೮ - ೯ - ೧೦ - ೧೧.
ಶನಿ— ೩ - ೫ - ೬ - ೧೨.
ಆದಿತ್ಯಂಗೆ—೮ - ೧೦ - ೧೨.
ಆದಿತ್ಯಂಗೆ—೫ - ೬ - ೯ - ೧೧ - ೧೨.
ಆದಿತ್ಯ— ೧ - ೨ - ೩ - ೪ - ೭ - ೮ - ೯ - ೧೦ - ೧೧.
ಚಂದ್ರ— ೧ - ೨ - ೩ - ೪ - ೫ - ೮ - ೯ - ೧೧ - ೧೨.
ಚಂದ್ರಂಗೆ—೨ - ೪ - ೬ - ೮ - ೧೦ - ೧೧.
ಚಂದ್ರ— ೨ - ೫ - ೭ - ೯ - ೧೧.
ಮಂಗಳ— ೩ - ೫ - ೬ - ೧೦ - ೧೧ - ೧೨.
ಮಂಗಳಂಗೆ—೧ - ೨ - ೪ - ೭ - ೮ - ೯ - ೧೦ - ೧೧.
ಮಂಗಳ— ೧ - ೨ - ೪ - ೭ - ೮ - ೧೦ - ೧೧.
ಬುಧ— ೩ - ೫ - ೬ - ೯ - ೧೧.
ಲಗ್ನಕ್ಕೆ— ೧ - ೨ - ೪ - ೬ - ೮ - ೧೦ - ೧೧.

---

**ಮಂಗಳವರ್ಗ:—**

ಮಂಗಳ ೧—೨—೪—೭—೮—೧೦—೧೧.
ಬುಧ ೩—೫—೬—೧೧.
ಗುರು ೬—೧೦—೧೧—೧೨.
ಶುಕ್ರ ೬—೮—೧೧—೧೨.
ಶನಿ ೧—೪—೭—೮—೯—೧೦—೧೧.
ಆದಿತ್ಯ ೩—೫—೬—೧೦—೧೧.
ಚಂದ್ರ ೩—೬—೧೦.
ಲಗ್ನ ೧—೩—೬—೧೦—೧೧.
ಅಂತು ಮಂಗಳವರ್ಗ ಬಿಂದು ೩೯.

**ಬುಧವರ್ಗ:—**

ಬುಧ ೧—೩—೫—೬—೯—೧೦—೧೧—೧೨.
ಗುರು ೬—೯—೧೧—೧೨.
ಶುಕ್ರ ೧—೨—೩—೪—೫—೮—೯—೧೧.
ಶನಿ ೧—೨—೪—೭—೮—೯—೧೦—೧೧.
ಆದಿತ್ಯ ೫—೬—೯—೧೧—೧೨.
ಚಂದ್ರ ೨—೪—೬—೮—೧೦—೧೧.
ಮಂಗಳ ೧—೨—೪—೭—೮—೧೦—೧೧.
ಲಗ್ನ ೧—೨—೪—೬—೮—೧೦—೧೧.
ಅಂತು ಬುಧ ಬಿಂದು ೫೪.

ಬುಧ— ೧ – ೨ – ೪ – ೫ – ೬ – ೯ – ೧೦ – ೧೧.
ಗುರು— ೫ – ೮ – ೯ – ೧೦ – ೧೧.
ಲಗ್ನಕ್ಕೆ— ೧, ೨ – ೪ – ೫ – ೬ – ೭ – ೯ – ೧೦ – ೧೧ ಅಂತು ಬುಧ ಬಿಂದು ೫೪.
ಶನಿಯ ವರ್ಗ—
ಶನಿಗೆ— ೩ – ೫ – ೬ – ೧೧ ಅಂತು ಶನಿಯ ಬಿಂದು ೩೯.
ಆದಿತ್ಯ— ೧ – ೨ – ೪ – ೭ – ೮ – ೧೦ – ೧೧.
ಚಂದ್ರ— ೩ – ೬ – ೧೧.
ಕುಜಂಗೆ— ೩ – ೫ – ೬ – ೧೦ – ೧೧ – ೧೨.
ಬುಧ— ೬ – ೮ – ೯ – ೧೦ – ೧೧ – ೧೨.
ಗುರು— ೫ – ೬ – ೧೧ – ೧೨.
ಶುಕ್ರಂಗೆ— ೬ – ೧೧ – ೧೨.
ಲಗ್ನಕ್ಕೆ— ೧ – ೩ – ೪ – ೬ – ೧೦ – ೧೧.

ಈ ಮರ್ಯಾದೆಯಿಂ ಯೋಜಿಸಿ ಪೇಟ್ಟಿ ಸ್ಥಾನಂಗಳಲ್ಲಿ ಬಿಂದುಗಳಿಂಗೆಯೂ ಎಲ್ಲಾ ಗ್ರಹಂಗಳಿಂಗೆಯೂ ಲೆಕ್ಕ ಇಡುವುದು—

ಅಷ್ಟಕವರ್ಗದ ಕುಂಡಲಿಚಕ್ರ — ಇದಕ್ಕೆ ಲೆಕ್ಕ ಸಂಜ್ಞೆಯು
ಆದಿತ್ಯಂ ಚಂದ್ರಭೌಮಂ ಚ । ಸೌಮ್ಯಜೀವ ಸಿತಾರ್ಕಜ ॥
ಲಗ್ನಾದಿಮಿತಿ ಪ್ರೋಕ್ತಂ ಚ । ರಾಶಿಬಿಂದು ಫಲಾಫಲಂ ॥

ಇನ್ನೊಂದು ಪರಿ ಚಕ್ರ—
ತಿರ್ಯಗೂರ್ಧ್ವಂ ಲಿಖೇ ವಿಶ್ವಂ ನಂದನಂ ಅರ್ಧರೇಖಯಾ ॥
ಏತೇಕುಂಡಲಿ ಚಕ್ರಂಚ ಗ್ರಹೇಸ್ಥಾಪ್ಯಂ ಭವೇತತ್ ॥

---

**ಗುರುವರ್ಗ:—**
ಗುರು ೧–೨–೩–೪–೭–೮–೧೦–೧೧.
ಶುಕ್ರ ೨–೫–೬–೯–೧೦–೧೧.
ಶನಿ ೩–೫–೬–೧೨.
ಆದಿತ್ಯ ೧–೨–೩–೪–೭–೮–೯–೧೦–೧೧.
ಚಂದ್ರ ೨–೫–೭–೯–೧೧.
ಮಂಗಳ ೧–೨–೪–೭–೮–೧೦–೧೧.
ಬುಧ ೧–೨–೪–೫–೬–೯–೧೦–೧೧.
ಲಗ್ನ ೧–೨–೪–೫–೬–೭–೯–೧೦–೧೧.
ಅಂತು ಗುರು ಬಿಂದು ೫೬.

**ಶುಕ್ರವರ್ಗ:—**
ಶುಕ್ರ ೧–೨–೩–೪–೫–೮–೯–೧೦–೧೧
ಮೂಲಪ್ರತಿಯಲ್ಲಿ ಬಿಟ್ಟು ಹೋಗಿದೆ.
ಶನಿ ೩–೪–೫–೮–೯–೧೦–೧೧.
ಆದಿತ್ಯ ೮–೧೧–೧೨.
ಚಂದ್ರ ೧–೨–೩–೪–೫–೮–೯–
೧೧ ಮೂಲದಲ್ಲಿದೆ. –೧೨.
ಮಂಗಳ ೩–೫–೬–೧೦–೧೧–೧೨.
ಬುಧ ೩–೫–೬–೯–೧೧.
ಗುರು ೫–೮–೯–೧೦–೧೧.
ಲಗ್ನ ೧–೨–೩–೪–೫–೮–೯–೧೧.
ಅಂತು ಶುಕ್ರ ಬಿಂದು ೫೨.

**ಶನಿವರ್ಗ:—**
ಶನಿ ೩–೫–೬–೧೧.
ಆದಿತ್ಯ ೧–೨–೪–೭–೮–೧೦–೧೧.
ಚಂದ್ರ ೩–೬–೧೧.
(ಕುಜ) ಮಂಗಳ ೩–೫–೬–೧೦–೧೧–೧೨.
ಬುಧ ೬–೮–೯–೧೦–೧೧–೧೨.
ಗುರು ೫–೬–೧೧–೧೨.
ಶುಕ್ರ ೬–೧೧–೧೨.
ಲಗ್ನ ೧–೩–೪–೬–೧೦–೧೧.
ಅಂತು ಶನಿಯ ಬಿಂದು ೩೯.



ಲಗ್ನಾರ್ಕೇ ಜೀವವಕ್ರಾಶ್ಚ । ಸಿತಃ ಸೌಮ್ಯಾರ್ಕಚಂದ್ರಮಾ ॥
ಉಭಯೋರಿಂದು ರಾಶಿಂ ಚ । ಬಿಂದುಂ ಚ ಫಲಮೇವಚ ॥

ಈ ಪ್ರಕಾರಕ್ಕೆ ಕುಂಡಲಿ ಚಕ್ರಮಂ ಉದ್ಧರಿಸಿಹೆನು — ಮೂವತ್ತಱಿಂ ಮೇಲಾದ ರಾಶಿಯ ಬಿಂದು ಅತ್ಯಂತ ಶುಭಗಳು; ಇಪ್ಪತ್ತೈದಱಿಂ ಮೇಲಾದ ರಾಶಿಯ ಬಿಂದು ಮಧ್ಯಮ; ಇಪ್ಪತ್ತೈದರಿಂದೊಳಗಾದ ರಾಶಿಯ ಬಿಂದು ಕಷ್ಟಂಗಳು.

ತ್ರಿಂಶಾಧಿಕ ಫಲಾಯಸ್ಯು । ರಾಶಿಯಸ್ತು ಶುಭಪ್ರದಾ ॥
ಪಂಚವಿಂಶಾದಿ ತ್ರಿಂಶಾಂತ್ಯಂ । ರಾಶಯೋ ಮಧ್ಯಮಾ ಸ್ಮೃತಃ ॥
ಅತಿಕ್ಷೀಣಫಲಾಯಸ್ಯು । ರಾಶಯೋತ್ಯಂತ ವೈರಿಣಾಂ ॥
ಶ್ರೇಷ್ಠ ರಾಶ್ಯೇಷು ಸರ್ವಾಣಿ । ಶುಭಕಾರ್ಯಾಣಿ ಕಾರಯೇತ್ ॥
ಶ್ರೇಷ್ಠರಾಶ್ಯೇಷು ಮುಹೂರ್ತೇಷು । ಯೋಜಯಲ್ಮಾತಿಮಾನರಃ ॥
ಸರ್ವಕಾರ್ಯೈಶುಭೈಶ್ಚೈವ । ಭೋಗವಾನ್ ಅರ್ಥವಾನ್ ಪ್ರಭುಃ ॥
ಶುಭಾಶುಭ ಫಲಂ ಮಿಶ್ರಂ । ಮಧ್ಯಮಾರಾಶಿಯೇವಚ ॥
ಕ್ಷೀಣರಾಶಿ ಫಲಂ ಕ್ಷೀಣಂ । ಸರ್ವಕಾರ್ಯಾಣಿ ವರ್ಜಿತಂ ॥
ಚಂದ್ರರಾಶ್ಯಾದಿ ಚತುಃ ಚತುಃ । ಚತುಃ ಖಂಡ ಪ್ರಥಮದ್ವಿತ್ರಿಕೇಕ್ರಮಾತ್ ॥
ಖಂಡಬಿಂದುವಿಶೇಷೇಣ । ಗೋಷ್ಠಂ ಕ್ಷೇತ್ರಂ ಕೃಷಿಂ ಸರ್ವತಾ
ಶ್ರೇಷ್ಠರಾಶಿಸ್ಥಿತಂ ಶುಭಂ ॥
ಬಿಂದುವಿಶೇಷೇಣ ಗೋಷ್ಠಂ ಕ್ಷೇತ್ರಂ । ಕೃಷಿಂ ಸರ್ವತಾ
ಶ್ರೇಷ್ಠರಾಶಿಸ್ಥಿತಂ ಶುಭಂ ॥
ಕ್ಷೀಣರಾಶಿಸ್ಥಿತಂ ಗ್ರಹಾನ್ । ಸರ್ವಕಾರ್ಯೇಷು ನಾಶನಂ ॥
ಮಿತ್ರರಾಶಿಫಲಂ ಮಿಶ್ರಂ । ಇತಿ ಖಂಡತ್ರಿತೀಯಕಂ ॥

ಗ್ರಹಂಗಳೆಲ್ಲಾ ಬಿಂದುಗಳು ೩೩೭ — ಏಕೈಕಸ್ಯಾ ಗ್ರಹಸ್ಯಾ ಚಾರವಶಾತ್ ರಾಶೌ ರಾಶೌಪಿ ಚರತ ಭುಭಾಶುಭಫಲಂ ಅಷ್ಟಕವರ್ಗೈರ್ನಿರೂಪ್ಯತೇ—ತತ್ರ ರವೇರ್ಮೇಷಾದಿ ಬಿಂದವಃ — ಗ್ರಹಂಗಳೆಲ್ಲಕ್ಕುಂ ತತ್ರಯೆಂದು ಯೋಜಿಸಿಕೊಂಬುದು. ಬಿಂದು ಉಳ್ಳ ರಾಶಿಗಳಂ ಬಿಂದುಪ್ರದಯೆಂಬುದು. ಬಿಂದುವಿಲ್ಲದ ರಾಶಿಯಂ ರೇಖಾಯೆಂಬುದು.

616

ಆದಿತ್ಯಂಗೆ—
ಆತ್ಮಪ್ರಭಾವ ಶಕ್ತಿಂಚ ಪಿತೃ ಚಿಂತಾರವೇ ಫಲಃ ॥
ರಾಜಮಾನ್ಯೇ ಪ್ರಭುತ್ವಂಚ ಸರ್ವಕಾರ್ಯಾಣಿ ಸಿದ್ಧಿಚಃ ॥ ೧ ॥

ಚಂದ್ರಂಗೆ—
ಮನೋಬುದ್ಧಿಃ ಪ್ರಸಾದಂಚ ಮಾತೃ ಚಿಂತಾಚ ಚಂದ್ರಮಾಃ ॥
ವಸ್ತ್ರಾನ್ನಪಾನ ಭೋಗಂಚ ಮಾನ್ಯೇ ಬಹುಶುಭಪ್ರದಃ ॥ ೨ ॥

ಮಂಗಳಂಗೆ—
ಭ್ರಾತೃ ಸತ್ವಗುಣೋಭೂಮಿ ಸಂಗ್ರಾಮೇ ರಿಪುನಾಶನಂ ॥
ಧನಧಾನ್ಯತ್ಯಾಗ ಗ್ರಾಮೇಷು ಭೌಮೆಯೇ ನತ ಚಿಂತಯೇತ್ ॥ ೩ ॥

ಬುಧಂಗೆ—

ಪ್ರಜ್ಞಾವಾನ್ ಕರ್ಮವಿಜ್ಞಾನಂ ಬುದ್ಧಿಂ ಸುವಿದ್ಯವಾಕ್ ಪ್ರದಾತ್ ॥
ಶಾಂತಿಕಂ ಪೌಷ್ಟಿಕಂ ಚೈವಂ ಬುಧಂ ಸವಿಧಿ ನಿರ್ದಿಶೇತ್ ॥ ೪ ॥

ಗುರುವಿಂಗೆ—

ಗುರೂಣಾಂ ದೇಹಪುಷ್ಟಿಂಶ್ಚ ವೃದ್ಧಿ[1]ಪುತ್ರಾರ್ಥ ಸಂಪದಂ ॥
ಜಿತೇಂದ್ರಂ ಸರ್ವಮಾಶ್ರಿತ್ವಂ ಅಮರೇಜ್ಯಂ ಸಂಭವೇ ತಥಾ ॥ ೫ ॥

ಶುಕ್ರಂಗೆ—

ಶುಕ್ರದ್ವಿವಾಹಕರ್ಮಶ್ಚ ಸ್ತ್ಯದ್ಯೋಗಸ್ಥಾನಂಚವಾಹನಂ ॥
ಶರೀರಂ ಪುಷ್ಟಿಕಂ [2]ಶ್ರೈತಂ ಅಸುರೇಜ್ಯಂ ಫಲಮೇವಚಃ ॥ ೬ ॥

ಶನಿಗೆ—

ಆಯುಷಂ ಜೀವಿತೋವಾಶ್ಚ ಅರ್ಥಹಾನಿ ಭೂಪ್ರದಕ್ಷಿಣಂ ॥
ಪೀಡನಂ ಮಾರಣಂ ಚೈವ ಶನೈಶ್ಚರದರಾಹರಾತ್ ॥ ೭ ॥

ಕಂ ॥ ಶುಭಮಶುಭಗ್ರಹಮೆನ್ನದೆ ।
ಶುಭಸ್ಥಾನದೊಳಿರೆ ಸಕಳ ಸೌಖ್ಯಮನೀವರ ॥
ಶುಭಸ್ಥಾನದಿಗ್ರಹಮಿರಲ ।
ಶುಭಫಳಮನೀವರೆಂದು ಪೇಳ್ವುದಮೋಘಂ ॥ ೮ ॥

ಅಷ್ಟಕವರ್ಗಪ್ರಕರಣ ವರ್ಣನಂ

**ದಶಮಾಧಿಕಾರಂ**

1. ವಿ 2. ಶ್ವೇ

# ಏಕಾದಶಾಧಿಕಾರಂ

## ಕರ್ಮಜೀವನಪ್ರಕರಣ ವರ್ಣನಂ

ಕಂ ॥ ಉದಯದಿನೊಂದುಡುಪನಿನೊಂ ।
ದು ದಶಮದೊಳ್ ನೆಲಸಿದಂದು ಮೇಣ್ ಗ್ರಹಯುಗ್ಮಂ ॥
ಮೊದಲಾಗಿನಿತುಂ ನಿಲೆ ದಶ ।
ಮದೊಳಾತಂಗರ್ಥಮೆಯ್ದುಗುಂ ಬಳವಶದಿಂ ॥ ೧ ॥

ಇನಲಗ್ನೇಂದುಗಳ್ಗಳೇ ।
ಶನನಿಂದೆ ದಶಮಮೆಸೆದಿರ್ದನಾವಗ್ರಹದೊಂ ॥
ದು ನವಾಂಶದೊಳಾಳ್ದಂದಾ ।
ಸನಾಥಧೃತಿಯೊಳೆ ಬಾಳ್ವುಗುಮಾ ಪುಟ್ಟಿದವಂ ॥ ೨ ॥

ಚಂ ॥ ತರಣಿ ನವಾಂಶದೊಳ್ ತೃಣವಿಭೇಷಜಕಂಬಳಕಾಂಚನಾದಿಯಿಂ ।
ಹರಿಣಧರಾಂಶದೊಳ್ ಜಳಧಿಯಿಂ ಕೃಷಿಯಿಂ ಲಲನಾಶ್ರಯಾದಿಯಿಂ ॥
× × × × × ×
× × × × × × ॥ ೩ ॥

ಮ ॥ ಪುರುಹೂತಾರ್ಚಿತನಂಶದೊಳ್ ವಿಬುಧಧಾತ್ರೀನಾಥ ಧರ್ಮೋತ್ಕರೋ ।
ತ್ಕರದಿಂ ಭಾರ್ಗವನಂಶದೊಳ್ ಮಹಿಷಿ[2] ಗೋಮಾಣಿಕ್ಯರೂಪ್ಯಾದಿಯಿಂ ॥
ತರಣಿಪ್ರೋದ್ಭವನಂಶದೊಳ್ ಶ್ರಮರತವ್ಯಾಪಾರನೀಚಕ್ರಿಯಾ ।
ಚರ[3]ದಿಂ ಸಂತತಮಾವಿಲಗ್ನಜನಿತಂಗಾಜೀವನಂ ಕೂಡುಗುಂ ॥ ೪ ॥

ನಿಲೆ ಕರ್ಮಾಧಿಪತಿಗ್ರಹಂ ಸ್ವಗೃಹದೊಳ್ ತನ್ನಿಂ ಸುಹೃತ್ಕ್ಷೇತ್ರದೊಳ್ ।
ನಿಲೆ ಮಿತ್ರಾಳಿಯಿನನ್ಯಗೇಹದೊಳು ನಿಂದಂದನ್ಯರಿಂದೊಂದುಗುಂ ॥
ಫಲಮಕ್ಕುಂ ನಿಜಕರ್ಮನಾಥನೆನಿಸಿರ್ದಾತ್ಮೋಚ್ಚದೊಳ್ ಕೂಡೆ ಮೇಣ್ ।
ಬಲಸಂಪನ್ನತೆವೆತ್ತೊಡಾತ್ಮಬಳದಿಂದಾವರ್ಭಕಂ ವಿತ್ತಮಂ ॥ ೫ ॥

*ಉದಯದೊಳಕ್ಕೇಕಾದಶ ।
ಸದನಮದಕ್ಕೆ ಧನಗೃಹದೊಳಕ್ಕೆ ಬಳಂ ಕೂ ॥
ಡಿದ ಶೋಭನಗ್ರಹಂ ಕೂ ।
ಡಿದೊಡಾತನನೇಕವಿಧದಿನರ್ಥಂ ಬಡೆಗುಂ ॥ ೬ ॥

ಉದಯದಿನರ್ಕನಿನುಡುಪನಿ ।
ನಿದಿರ್ಚಿ [4]ನಿಂದೊಂದು ನೆಲಸಿ ಮೇಣ್ [5]ಗ್ರಹಯುಗ್ಮಂ ॥
ಮೊದಲಾಗನಿತುಂ ನಿಲೆ ದಶ ।
ಮದೊಳಾರಿಂದರ್ಥಮೆಯ್ದುಗುಂ ಬಳವಶದಿಂ ॥ ೭ ॥

1. ಷ 2. ರಿಂ *ಈ ಪದ್ಯ (ಕ) ಪ್ರತಿಯಲ್ಲಿ ಮಾತ್ರವಿದೆ. 3. ನಿಂದಂದು 4. ಗೃ

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ಕರ್ಮಜೀವನಪ್ರಕರಣ ವರ್ಣನಂ
ಏಕಾದಶಾಧಿಕಾರಂ

---

GOVERNMENT O... MADRAS
26 MAR 1957

# ದ್ವಾದಶಾಧಿಕಾರಂ

## ರಾಜಯೋಗಪ್ರಕರಣ ವರ್ಣನಂ

ಮ ॥ ಪದುಳಂ ತ್ರಿಪ್ರಭೃತಿಗ್ರಹಂಗಳಿರೆ ತಂತಮ್ಮುಚ್ಚದೊಳ್ ಭೂಪವಂ ।
ಶದವಂ ಭೂಪತಿಯಕ್ಕುಮಯ್ದು ಮೊದಲಾಗಿರ್ದಂದು ತದ್ವಂಶಸ ॥
ಲ್ಲದವಂ ಭೂಭುಜನೊಂದೆರಳ್ನೆಲಸೆ ವಿತ್ತಂ ಸ್ವಾಮಿ ಮೂಲತ್ರಿಕೋ ।
ಣದೊಳಂ ತತ್ಕ್ರಮದಿಂ ಗ್ರಹಂಗಳಿರೆಯುಂ ಸಾರ್ತರ್ಕುಮಂತಾಫಳಂ ॥ ೧ ॥

ಪಲವುಂ ಸ್ವೋಚ್ಚದೊಳಿರ್ಪೊಡಂ ನೆರೆವೊಡಂ ಮಿತ್ರಗೃಹಸ್ವೋಚ್ಚದೊಳ್ ।
ನಿಲೆ ಮಿತ್ರಗ್ರಹ[1]ವೀಕ್ಷಿಪಂದು ನೃಪನಕ್ಕುಂ ಮೂಱು ನಾಲ್ಕುಂ ಗ್ರಹಂ ॥
ಬಲಸಂಪನ್ನತೆವೆತ್ತು ಕೇಂದ್ರಗೃಹದೊಳ್ ಕೂಡಿರ್ದೊಡಂ ಧಾರಿಣೀ ।
ತಲನಾಥತ್ವಮನಾತನಲ್ತೆ ಪಡೆಗುಂ ಸಮ್ಯಕ್ತ್ವರತ್ನಾಕರಾ ॥ ೨ ॥

ಮ॥ ಸ್ರ॥ ಅಸುರೇಜ್ಯಂ ನಾಲ್ಕಱೊಳ್ ಕರ್ಕಟಕದುದಯದೊಳ್ ಚಂದ್ರಮಂ
ಷಷ್ಠದೊಳ್ ಭಾ ।
ನುಸುರೇಜ್ಯಂ ಪತ್ತಱೊಳ್ ಭೂಸುತದಿನಪಸುತಂ ಮೂಱಱೊಳ್
ದ್ಯೂನದೊಳ್ ಸೋ ॥
ಮಸುತಂ ಕೂಡಿರ್ದೊಡಂ ಮೇಣ್ ಮಕರದೊಳಸಿತಂ
ವಧೂಲಗ್ನದೊಳ್ ಚಂ ।
ದ್ರಸುತಂ ಜೀವೇಂದುಶುಕ್ರರ್ ಧನುವಿನೊಳಿರೆ ತಾಂ ಪುಟ್ಟಿದಂ
ಭೂಪನಕ್ಕುಂ ॥ ೩ ॥

ಕಂ ॥ ಗುರುಕರ್ಕಿಲಗ್ನದೊಳ್ ಭಾ ।
ಸ್ಕರನಜದೊಳ್ ಸೋಮಸೂನು ಭೃಗುಸೂನು ಸುಧಾ ॥
ಕರರೇಕಾದಶದೊಳ್ ನಿಲೆ ।
ಪರಾಕ್ರಮೋನ್ನತಿಯೆನಿಪ್ಪ ಭೂಪತಿಯಕ್ಕುಂ ॥ ೪ ॥

ಶನಿಮಕರಲಗ್ನದೊಳ್ ಭೌ ।
ಮನಜದೊಳಮೃತಾಂಶು ಕರ್ಕಿಯೊಳ್ ರವಿ ಹರಿಯೊಳ್ ॥
ಧನುಜೇಜ್ಯಂ ತೊಲೆಯೊಳ್ ಸೌ ।
ಮ್ಯನಿರಲ್ ನರಯುಗ್ಮದೊಳ್ ನರಾಧಿಪನಕ್ಕುಂ ॥ ೫ ॥

ಅಸಿತಾಂಗಾರರ್ಮಕರದೊ ।
ಳಸುರೇಜ್ಯಂ ಪತ್ತಱೊಳ್ ನಿಜೋಚ್ಚಸ್ಥಿತ ಸೋ ॥
ಮಸುತಂ ಕನ್ಯೆಯೊಳಿರಲೆಂ ।
ದು ಸುರಾಜಿತಗೃಹದೊಳಿರೆ ನರಾಧಿಪನಕ್ಕುಂ ॥ ೬ ॥

---

1. ವಿೂ

ಕಂ ॥ ಅರಿನೀಚಗೃಹಂ ಪೊಱಗಾ ।
ಗಿರೆ ಶೀರ್ಷೋದಯದೊಳಿರೆ ಸಮಸ್ತಗ್ರಹಮೊಂ ॥
ಡಿರೆ ಕರ್ಕಿಲಗ್ನದೊಳ್ ಶೀ ।
ತರೋಚಿ ಪರಿಪೂರ್ಣನಾಗೆ ನೃಪನಕ್ಕುಮವಂ ॥ ೭ ॥

ವನಜಾರಿಯಿನುಪಚಯದೊಳ್ ।
ಜನನಾಥಿಪನಿರೆ ಶುಭಗ್ರಹಂ ನೆಲಸಿರೆ ಕೇಂ ॥
ದ್ರನಿವಾಸ ಶುಭಾಂಶದೊಳಶು ।
ಭನಿಚಯಕರಂ ವಿಬಳರಾಗೆ ಭೂಪತಿಯಕ್ಕುಂ ॥ ೮ ॥

ಪರಮೋಚ್ಚದೊಳಿರ್ದುದಯಿಸೆ ।
ಪರಾಭವಂ ಬಡದ ಗಗನಚರನಂ ಮಿತ್ರಾಂ ॥
ಬರಚರರೀಕ್ಷಿಸಲೀಕ್ಷಿಸ ।
ದಿರೆ ಶತ್ರುನಭಶ್ಚರಂ ನರಂ ನೃಪನಕ್ಕುಂ ॥ ೯ ॥

ಹರಿಣಾಂಕಂ ಪರಮೋಚ್ಚದೊ ।
ಳಿರೆ ದನುಜಾಧೀಶಗುರು ನಿರೀಕ್ಷಿಸೆ ಸೌಮ್ಯೇ ॥
ತರರಾಬೋಕ್ಕೀಬದೊಳಿರೆ ।
ಧರಣೀಶ್ವರನಕ್ಕುಮಾ ವಿಲಗ್ನಪ್ರಭವಂ ॥ ೧೦ ॥

ಉದಯ ಜನನಾಧಿಪಂ ಸೋ ।
ಲದೆ ಬಳಯುತನಾಗಿ ಮಿತ್ರಸೌಮ್ಯ[1]ರಣಂ ಕೇಂ ॥
ದ್ರದೊಳಿರ್ದು ನಿರೀಕ್ಷಿಸೆ ಪು ।
ಟ್ಟಿದನರನರಸಕ್ಕುಮೆಂಬುದಾವುದು ಚೋದ್ಯಂ ॥ ೧೧ ॥

ದಿನಪತಿ ಸಿಂಹದೊಳುಡುಪತಿ ।
ತನಯಂ ಕನ್ನೆಯೊಳಿಳಾತನೂಭವನಜದೊಳ್ ॥
ದನುಜೇಜ್ಯಂ ತೊಲೆಯೊಳ್ ಕೋ ।
ಕನದಾಹಿತನಿರೆ ಕುಳೀರದೊಳ್ ನೃಪನಕ್ಕುಂ ॥ ೧೨ ॥

ಅಮರೇಜ್ಯಶಶಾಂಕರ್ ಪಂ ।
ಚಮದೊಳ್ ನಿಲೆ ಲಗ್ನಪತಿ ನಿರೀಕ್ಷಿಸೆ ನಿಲೆ ದೈ ॥
ತ್ಯಮಹತ್ತರ[ನ] ನಿಮಿಷದೊಳ್ ।
ಸಮಸ್ತಧರಣೀಶನಕ್ಕುಮಕುಟೋದ್ಭವನುಂ ॥ ೧೩ ॥

ಉದಯಿಸೆ ನಿಜವರ್ಗದೊಳೊಂ ।
ದಿದೊಡೆ ಗ್ರಹಂ ಪೂರ್ಣಚಂದ್ರನುಚ್ಚದೊಳಿರೆ ನೋ ॥
ಡದೊಡೆ ಸಬಳಾಶುಭರ್ ಕೇಂ ।
ದ್ರದೊಳಿರದೊಡೆ ಸೌಮ್ಯಮಿತ್ರರವನಿಪನಕ್ಕುಂ ॥ ೧೪ ॥

1. ಗ



ಕಂ ॥ ಉದಿತಸಕಳಗ್ರಹಂ ನಿಜ ।
ಸದನದೊಳಕ್ಕಾತ್ಮವರ್ಗದೊಳ್ ನಿಲೆ ಮೇಣ್ ಕೇಂ ॥
ದ್ರದೊಳುದಯಿಸೆ ಸದ್ಗ್ರಹದುದ ।
ಯದೊಳಿರಲುಂ ನೋಡೆ ಮಿತ್ರನವನಿಪನಕ್ಕುಂ ॥ ೧೫ ॥

ತೊಲೆಯೊಳ್ ದೈತ್ಯಾಮಾತ್ಯಂ ।
ನಿಲೆ ದಿವಿಜಾಮಾತ್ಯನಾತ್ಮತುಂಗೋದಯದೊಳ್ ॥
ನಿಲೆ ವೃಷಭದೊಳುಡುನಾಥಂ ।
ನಿಲೆ ಪುಟ್ಟಿದ ಮನುಜನವನಿಪಾಲಕನಕ್ಕುಂ ॥ ೧೬ ॥

ಸಿತನಿರೆ ಘಟಗೃಹದೊಳ್ ವಾ ।
ಕ್ಪತಿ ಕರ್ಕಿಯೊಳಿಂದು ಮೀನದೊಳ್ ಮೇಣ್ ಸಿತನೀ ॥
ಕ್ಷಿತಮಂದಂ ಘಟದೊಳ್ ದಿನ ।
ಪತಿ ಹರಿಯೊಳ್ ಚಂದ್ರನಜದೊಳಿರೆ ನೃಪನಕ್ಕುಂ ॥ ೧೭ ॥

ಚಂ ॥ ಖರಕರನಂದನಂ ಮಕರಲಗ್ನದೊಳಿಂದ್ರಪುರೋಹಿತಂ ಧನು ।
ರ್ಧರಗೃಹದೊಳ್ ಬುಧಂ ವಧುವಿನೊಳ್ ಶಶಿ ಮೀನದೊಳೊಂದಿ
ದಂದು ಮೇ ॥
ಣಿರೆ ಶನಿ ಕುಂಭದೊಳ್ ಝುಷವಿಲಗ್ನದೊಳಿಂದು ನಿಜೋಚ್ಚದೊಳ್
ಕುಜಂ ।
ಧರಣಿ ಮೃಗೇಂದ್ರದೊಳ್ ಸಕಳ ಭೂವಳಯಾಧಿಪನಕ್ಕುಮಾನರಂ ॥ ೧೮ ॥

ಮ ॥ ಹಿಮಧಾಮಂ ಸಕಳಂ ಝುಷಾಂತಿಮ ನವಾಂಶಪ್ರಾಂತದೊಳ್ ಕೂಡಿದಂ ।
ದಮರೇಜ್ಯೇಂ[1]ದುಜಶುಕ್ರರೀಕ್ಷಿಸೆ ವಿಲಗ್ನದ್ವ್ಯಂಗ್ಯ ವರ್ಗೋತ್ತಮಾಂ ॥
ಶಮೆ ತಾನಾಗೆ ಬಳಾಢ್ಯನಾಗಿರೆ ವಿಲಗ್ನಾಧೀಶನಾತಂ ಸಮ ।
ಸ್ತಮಹೀವಲ್ಲಭನುಂ ಯಶೋಧಿಕನುಮಕ್ಕುಂ ಪದ್ಯವಿದ್ಯಾಧರಾ ॥ ೧೯ ॥

ಮ॥ ಸ್ರ॥ ಉದಯಂ ವರ್ಗೋತ್ತಮಾಂಶಂಗಳೊಳೆಸೆವೊಡೆ ಮೇಣಲ್ಲಿ ದೋಷಾ
ಕರಂ ಕೂ ।
ಡಿದೊಡಾಲಗ್ನೇಂದುವಂ ವೀಕ್ಷಿಸುವೊಡೆ ಚತುರಾದಿಗ್ರಹಂ ಭೂಪನಾ ಪು ॥
ಟ್ಟಿದ ಮರ್ತ್ಯಂ ರಾಜಯೋಗಂ ಸಮನಿಸಿದೊಡಮುದ್ಯದ್ಬಳಾಢ್ಯ ಗ್ರಹಕ್ಕಾ ।
ದದಶಾಪ್ರಸ್ತಾವಕಾಲಕ್ಕುದಯಿಸಿದನರಂಗಕ್ಕುಮುರ್ವೀಶ್ವರತ್ವಂ ॥ ೨೦ ॥

ಕಂ ॥ ದಿನಪತಿ ಸಿಂಹದೊಳುರ್ವೀ । 616
ಜನುದಯದೊಳ್ ಶೀತರೋಚಿ ಮೇಷೋದಯದೊಳ್ ॥
ಶನಿಕುಂಭದೊಳಮರೇಜ್ಯಂ ।
ಧನುವಿನೊಳಿರೆ ಭೂಪಸೂನು ಭೂಪತಿಯಕ್ಕುಂ ॥ ೨೧ ॥

1. ದ್ರ

ಕಂ ॥ ಅಮೃತಕರಂ ಮೇಷದೊಳು ।
ಷ್ಣಮಯೂಖಂ ಸಿಂಹಲಗ್ನದೊಳ್ ಘಟಗೃಹದೊಳ್ ॥
ಯಮನವನಿಜರುಚ್ಚದೊಳಿಂ ।
ದ್ರಮಂತ್ರಿ ನಿಜಗೃಹದೊಳಿರೆ ನೃಪಾತ್ಮಜನೆ ನೃಪಂ ॥ ೨೨ ॥

ಸಿತನಿರೆ ನಿಜಗೃಹಮೆನಿಸಿದ ।
ಚತುರ್ಥದೊಳ್ ಹಿಮಗು ನವಮದೊಳ್ ಪೆಱರಾಯ ॥
ತ್ರಿತಯತನೂಜೋಪಚಯ ।
ಸ್ಥಿತನಾಗಿರೆ ನೃಪತಿಲಾಂಛಜಂ ನೃಪನಕ್ಕುಂ ॥ ೨೩ ॥

ಬಳವದ್ಬುಧನುದಯದೊಳತಿ ।
ಬಳ ಸೌಮ್ಯಂ ಕೇಂದ್ರದೊಳ್ ದ್ವಿನವಮೋಪಚಯಂ ॥
ಗಳೊಳನ್ಯಗ್ರಹಮೊಂದಿದೊ ।
ಡಿಳಾಧಿಪಪ್ರಭವನರನಿಳಾಧಿಪನಕ್ಕುಂ ॥ ೨೪ ॥

ಸಿತನುಂ ಭಾಸ್ಕರನುಂ ನಿಲೆ ।
ಚತುರ್ಥದೊಳ್ ಹಿಮಗು ಪತ್ತರೊಳ್ ಲಾಭದೊಳ ॥
ರ್ಕತನೂಜಂ ಬುಧಭೌಮ ।
ದ್ವಿತಯದೊಳಿರೆ ಜನಪಸೂನು ಜನಪತಿಯಕ್ಕುಂ ॥ ೨೫ ॥

ಶಶಿಸುತಕುಜಸಿತರೇಕಾ ।
ದಶದೊಳ್ ಗುರು ನಾಲ್ಕಱೊಳ್ ಶಶಾಂಕಾದಿತ್ಯರ್ ॥
ದಶಮದೊಳೊಡಗೂಡೆ ಶನೈ ।
ಶ್ಚರನವನೀಶಾತ್ಮಜಂ ನೃಪಂ ತಾನಕ್ಕುಂ ॥ ೨೬ ॥

ತಾರಾಪತಿ ವೃಷಲಗ್ನಾ ।
ಗಾರದೊಳಮರೇಜ್ಯನೆರಡಱೊಳ್ ಬುಧಸಿತರಂ ॥
ಗಾರರಿರೆ ಷಷ್ಠಭವನದೊ ।
ಳಾರಾಜಕುಳಪ್ರಸೂತನವನಿಪನಕ್ಕುಂ ॥ ೨೭ ॥

ರವಿದಶಮದೊಳಮರೇಜ್ಯಂ ।
ನವಮದೊಳವನಿಸುತಸೂರ್ಯಸುತರುದಯದೊಳೈಂ ॥
ದವನಾಯದೊಳುಡುಪತಿ ಸುಖ ।
ಭವನದೊಳಿರೆ ರಾಜಸೂನು ರಾಜನೆನಿಕ್ಕುಂ ॥ ೨೮ ॥

ಜನನಾಥ ಕುಲೋದ್ಭೂತಂ ।
ಜನಾಧಿಪತಿಯಕ್ಕುಮೆಂಬ ಲಗ್ನಂಗಳೊಳ ॥
ನ್ಯನರಂ ಪುಟ್ಟಿದೊಡಾತಂ ।
ಜನಪತಿಸಮಧನ್ಯನೆನಿಸುಗುಂ ಬುಧಮಿತ್ರಾ ॥ ೨೯ ॥



ಕಂ ॥ ಕ್ರೂರಾಹ್ವಯರಾಶಿಗಳೊಳ್ ।
ಕ್ರೂರಂ ನಿಲೆ ಸಬಳ ಸದ್ಗ್ರಹಂ ನಿಲೆ ಕೇಂದ್ರಾ ॥
ಗಾರಂಗಳೊಳವನೀಶ್ವರ ।
ಭಾರವ್ರಜದಿಂದಮರ್ಥಪತಿಯಕ್ಕುಮವಂ ॥ ೩೦ ॥

ಸುರಗುರುಭೃಗುಸುತಶಶಿಸುತ ।
ರಿರೆ ಲಗ್ನದೊಳಸಿತನೇೞಱೊಳ್ ಪತ್ತಱೊಳಂ ॥
ಬುರುಹಸಖಂ ನಿಲೆ ಪುಟ್ಟಿದ ।
ನರನತಿವಿತ್ತಾಢ್ಯನೆನಿಸುಗುಂ ಬುಧಮಿತ್ರಾ ॥ ೩೧ ॥

ರಾತ್ರಿಂದಿವಲಗ್ನದೊಳರಿ ।
ಮಿತ್ರಾಂಶದೊಳಕ್ಕೆ ನಿಜನಿವಾಸಂಗಳೊಳಂ ॥
ರಾತ್ರಿಪತಿ ನೆಲಸಿರೆ ಭೃಗು ।
ಪುತ್ರರಭೀಕ್ಷಿಸೆ ಧನಾಢ್ಯನುಂ ಶುಚಿಯುಮವಂ ॥ ೩೨ ॥

ಚಂ ॥ ಉದಯಿಸಿದಾಲಯಕ್ಕುಪಚಯಾಲಯದಲ್ಲಿ ಸಮಸ್ತಸಾಮ್ಯರೊಂ ।
ದಿದೊಡತಿಧನ್ಯನೆಂಗುಮವರಾಯೆಡೆಯೊಳ್ ನೆಲಸಲ್ ಧನಾಢ್ಯನೊಂ ॥
ದಿದೊಡೆರಡಿಂದುಗಕ್ಕುದಯರಾಶಿಗೆ ಮೇಣ್ ಸವಿತ್ರನೊಂದು ಕೂ ।
ಡಿದೊಡವನಲ್ಪವಿತ್ತನಿದು ಮುಖ್ಯಮೆನಿಪ್ಪುದು ರಾಜಯೋಗದೊಳ್ ॥ ೩೩ ॥

ಇದು

ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್

ರಾಜಯೋಗಪ್ರಕರಣ ವರ್ಣನಂ

**ದ್ವಾದಶಾಧಿಕಾರಂ**

# ತ್ರಯೋದಶಾಧಿಕಾರಂ

## ನಾಭಸಯೋಗಪ್ರಕರಣ ವರ್ಣನಂ

ಕಂ ॥ ಚರರಾಶಿಯೊಳೇೞುಗ್ರಹ ।
ಮಿರೆ ಯೋಗಂ ರಜ್ಜುವೆನಿಸುಗುಂ ಸ್ಥಿರದೊಳ್ ಕೂ ॥
ಡಿರೆ ತಾನದು ಮುಶಲಂದ್ವ್ಯಂ ।
ಗರಾಶಿಯೊಳ್ ಕೂಡಿ ನಿಂದೊಡದು ನಳಯೋಗಂ ॥ ೧ ॥

ಇರೆ ಕೇಂದ್ರ[1]ದೆರೞ್ಕಿಲದೊಳ್[1] ।
ಮೆರಡುಂ ಗ್ರಹಮದುಗದಾಖ್ಯಮುದಯಾಸ್ತದೊಳೊಂ ॥
ದಿರೆ ಶಕಟಮುದಯಸುತನವ ।
ಮರಾಶಿಯೊಳ್ ನಿಂದೊಡೇೞುಮದು ಶೃಂಗಾಟಂ ॥ ೨ ॥

ಗ್ರಹಮೇೞುಂ ನಿಂದೊಡೆ ದಶ ।
ಮಹಿಬುಕದೊಳ್ ವಿಹಗಯೋಗಮೆನಿಕುಂ ಮತ್ತಾ ॥
ಗ್ರಹಮೇೞುಂ ಲಗ್ನದ್ವಯ ।
ಗೃಹದೊಳ್ ನೆಲಸಿದೊಡೆ ಹಲಮೆನಿಕ್ಕುಂ ಯೋಗಂ ॥ ೩ ॥

ಉದಯಸ್ಯೇಕಗೃಹಾಂತರಿ ।
ತದೊಳೇೞುಂ ನಿಂದೊಡದುವೆ ಚಕ್ರಂ ವಿತ್ತಂ ॥
ಮೊದಲಾಗೇಕಾಂತರಮೊಂ ।
ದಿದೊಡಾಗ್ರಹಮೇೞ್ ಸಮುದ್ರದಿಂದೀಯೋಗಂ ॥ ೪ ॥

ಮ ॥ ನಿಲೆ ಸಪ್ತಗ್ರಹಮೊಂದೆ ರಾಶಿಯೊಳೆ ಯೋಗಂ ಗೋಳನಾಮಂ ಯುಗಂ ।
ನಿಲೆ ಗೇಹದ್ವಯದೊಳ್ ತ್ರಿಗೇಹದೊಳಿರಲ್ ಶೂಲಂ ಚತುರ್ಗೇಹದೊಳ್ ॥
ನಿಲೆ ಕೇದಾರಮುವಯ್ದುಗೇಹದೊಳಿರಲ್ [2]ಪಾಶಂ ಷಡಾವಾಸದೊಳ್ ।
ನಿಲೆ ದಾಮಂ ನಿಲೆ ಸಪ್ತಮಾಲಯದೊಳಕ್ಕುಂ ವಲ್ಲಕೀಸಂಜ್ಞಿಕಂ ॥ ೫ ॥

ಚ ॥ ಉದಯದೊಳಸ್ತದೊಳ್ ನಿಲೆ ಶುಭಗ್ರಹಮುಗ್ರಗಣಂ ಚತುರ್ಥಕ ।
ರ್ಮದೊಳಿರೆ ವಜ್ರಯೋಗಮದು ತದ್ವಿಪರೀತತೆಯಿಂ ಯು[3]ವಂ ವಿಲ ॥
ಗ್ನದೊಳಶುಭಗ್ರಹಂ ನೆಲಸೆ ಸಪ್ತಮದೊಳ್ ಕಮಳಂ ಗ್ರಹಂಗಳಿ ।
ಲ್ಲದೆ ಬೞಿದಾಗೆ ಕೇಂದ್ರಮಿನಿತುಂ ದೊರೆಕೊಂಡೊಡೆ ವಾಪಿನಾಮದಿಂ ॥ ೬ ॥

ಉದಯದಿನೆಯ್ದೆ ತೂರ್ಯಭವನಂ ಬರೆಗಂ ಬರೆಯೂಪವಾ ಚತು ।
ರ್ಥದಿ ನಿಲೆ[4] ಸಪ್ತಮಂಬರೆಗಮೋಳಿಯೆ ತಾಂ ರಿಪುನಾಮಯೋಗ ಸ ॥
ಪ್ತದಿನಿರೆ ಕರ್ಮರಾಶಿವರೆಗಂ ತರದಿಂದದಶಕ್ತಿ ಕರ್ಮದಿಂ ।
ದುದಯಗೃಹಂಬರಂ ಗ್ರಹಮನಂತರಮೊಂದಿರೆ ದಂಡ ಸಂಜ್ಞಿಕಂ ॥ ೭ ॥

1. ದೊಳೆರಟ್ಕಿಲದೊಳ 2. ವಾ 3. ಮ 4. ರೆ



ಮ ॥ ಉದಯಾದ್ಯಸ್ತ ಗೃಹಂಬರಂ ನೆಲಸೆ ವೇಲಾಯೋಗಮಕ್ಕುಂ ಚತು ।
ರ್ಥದಿನತ್ತಲ್ ದಶಮಂಬರಂ ನೆಲಸೆ ಕೂಟಂ ಯೋಗಮಸ್ತಾದಿಯಿಂ ॥
ದುದಯಂ ತಾ[1]ಪಿನ ಮೋಳಿಯಿಂ ನೆಲಸೆ ಛತ್ರಂ ಯೋಗಮುದ್ಯೋಗಗೇ ।
ಹದಿನಾತೂರ್ಯಗ್ರಹಂಬರಂ ನೆಲಸೆ ಚಾಪಂ ಯೋಗಮಕ್ಕುಂ ಗ್ರಹಂ ॥ ೮ ॥

ಕಂ ॥ ಕೂರತ್ರಯಮಿರೆ ಕೇಂದ್ರಾ ।
ಗಾರತ್ರಿತಯದೊಳ್ ಸರ್ಪಯೋಗಂ ಕೇಂದ್ರಾ ॥
ಗಾರತ್ರಿತಯಂಗಳೊಳ ।
ಕ್ರೂರತ್ರಯಮೊಂದಿದಂದು ಮಾಳಾಯೋಗಂ ॥ ೯ ॥

ಉದಯದ ಪಣಪರದಿಂದ ।
ಸ್ತದೆಡೆವರಂ ನಿಂದೊಡಂ ವಿಲಗ್ನಾಬೋಕ್ಲೀ ॥
ಬದಿನಸ್ತದೆಡೆವರಂ ನೆಲ ।
ಸಿದೊಡಂ ಗ್ರಹಮೇೞುಮರ್ಧಚಂದ್ರಂ ಯೋಗಂ ॥ ೧೦ ॥

ಅಸಹಿಷ್ಣು ವಧ್ವಗಮನಂ ।
ವ್ಯಸನಂ ಪರದೇಶಕಾಂಕ್ಷೆ ರಜ್ಜುಪ್ರಭವಂ ॥
ಮುಸಳಭವಂ ಧನ್ಯಂ ಮಾ ।
ನಸಮೇತಂ ಬಹುವಿಧಕ್ರಿಯಾಶಕ್ತನವಂ ॥ ೧೧ ॥

ಧನಪತಿ ಪದುಳಿದನೂನಾಂ ।
ಗಿ ನಿಪುಣಮತಿ ನಳಸಮುದ್ಭವಂ ಯಜಮಾನಂ ॥
ಧನಭಾಗಿ ವಿತ್ತಕಾಂಕ್ಷಿತ ।
ನೆನೆ ವರ್ತಿಸುಗುಂ ಗದಾಸಮುದ್ಭೂತನರಂ ॥ ೧೨ ॥

ಶಕಟಭವಂ ತರುರ್ಷಿ ಭೋ ।
ಕ್ತೃಕುತ್ಸಿತಂ ಸ್ತ್ರೀಯುತಂ ಸರೋಗಂ ಶೃಂಗಾ ॥
ಟಕಸಂಭವನನವರತಂ ।
ಸುಖಮಿರ್ಪಂ ಹಲಸಮುದ್ಭವಂ ಕೃಷಿಗೆಯ್ವಂ ॥ ೧೩ ॥

ವಸುಧಾಪತಿವಿನುತಂ ಚ ।
ಕ್ರಸಂಭವಂ ನೃಪಸಮಂ ರುಜಾರ್ಥಂ ವಾರ್ಧಿ ॥
ಪ್ರಸವಂ ಚರನಟನಂ ಕಲ ।
ಹಸಮೇತಂ ವಿಹಗಯೋಗದೊಳ್ ಪುಟ್ಟಿದವಂ ॥ ೧೪ ॥

ಮ ॥ ಧನಹೀನಂ ಮಲಿನಂ ಕುಶಿಲ್ಪಿ ವಿಗತಜ್ಞಾನಾತ್ಮಕಂ ಗೋಳಜಾ ।
ತನೆನಿಕ್ಕುಂ ಯುಗಯೋಗಜಾತನಧನಂ ಪಾಷಂಡಿ ಶೂಲೋದ್ಭವಂ ॥
ಧನದೂರಂ ವರಶೀಳಶೌರ್ಯನಿಧಿ ಕೇದಾರಪ್ರಸೂತಂ ಪ್ರಯೋ ।
ಜನಭೂತಂ ಫಲವರ್ಗಕಂ ಕೃಷಿಕ್ಷಮಂ ಸಮ್ಯಕ್ತ್ವರತ್ನಾಕರಾ ॥ ೧೫ ॥

1. ಸಿ

ಮ ॥ ಧನಸಂವರ್ಧನಶೀಳಭೃತ್ಯಸುಹೃದಾಢ್ಯಂ ಪಾಶಜಂ ದಾಮಸಂ ।
ಜನಿತಂ ದಾನಿ ಪರೋಪಕಾರಿ ಪಶುಪಾಲಂ ವಲ್ಲಕೀಯೋಗಜಾ ॥
ತನರಂ ನಾಯ್ಕಕನರ್ಥಕಪ್ರಿಯತಮಂ ಸೀಷಾತನಿಂತೀಫಳಂ ।
ಜನಿಯಿಕ್ಕುಂ ಸತತಂ ವರೇಣ್ಯಫಲಮೆಯ್ತುರ್ಕುಂ ದಶಾಕಾಲದೊಳ್ ॥ ೧೬ ॥

ಮನುಜಂ ವಜ್ರಸಮುದ್ಭವಂ ಶಿಶುತೆಯೊಳ್ ವೃದ್ಧತ್ವದೊಳ್ ಸೌಖ್ಯಭಾ ।
ಜನನಕ್ಕುಂ ಯುವಯೋಗಜಂ ಶಿಶುತೆಯೊಳ್ ವೃದ್ಧತ್ವದೊಳ್
ದುಃಖಭಾ ॥
ಜನನಕ್ಕುಂ ಕಮಳೋದ್ಭವಂ ಸಧನನಕ್ಕುಂ ಸ್ವಲ್ಪ ಸೌಖ್ಯಕ್ಕೆ ಭಾ ।
ಜನನಕ್ಕುಂ ಬಹುಯೋಗದೊಳ್ ನೆಗಟ್ದಿ ವಾಪೀಯೋಗದೊಳ್
ಪುಟ್ಟಿದಂ ॥ ೧೭ ॥

ಚಂ ॥ ಅತಿಶಯದಾನಿ ಯೂಪಜನಿತಂ ವರಶೀಳವಿಷೋದ್ಭವಂ ಸಮು ।
ನ್ನತಧನರಾಶಿ ಶಕ್ತಜನಿತಂ ಯುವತೀಪ್ರಿಯಬಂಧುದಂಡಜಂ ॥
ವಿತತಯಶೋತ್ಥಿ ನೋಭವನಸತ್ಯವಚೋನ್ವಿತಕೂಟಸಂಭವಂ ।
ಹಿತಕರನಾತ್ಮಬಾಂಧವರ್ಗೇಜ್ಯಶಭವಂ ಕಲಿ ಕಾರ್ಮುಕೋದ್ಭವಂ ॥ ೧೮ ॥

ಕಂ ॥ ಅಶುಚಿಯೆನಿಕ್ಕುಂ ಸರ್ಪ ।
ಪ್ರಸವನರಂ ಸುಖಸಮೇತನೆನಿಕುಂ [1]ಕಮಳಾ ॥
ಪ್ರಸವನರನರ್ಥಚಂದ್ರ ।
ಪ್ರಸವನರಂ ಸುಭಗನೆನಿಸುಗುಂ ಬುಧಮಿತ್ರಾ ॥ ೧೯ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ನಾಭಸಯೋಗಪ್ರಕರಣ ವರ್ಣನಂ
**ತ್ರಯೋದಶಾಧಿಕಾರಂ**

1. ವಾಳಾ

## ಚತುರ್ದಶಾಧಿಕಾರಂ

### ಚಂದ್ರಯೋಗಕರಣಪ್ರಕರಣ ವರ್ಣನಂ

ಮ ॥ ಇನವ[1]ರ್ಜೋಕ್ಷಿತಿಜಾದಿಗಳ್ ಹಿಮಮಯೂಖಂಗಂತ್ಯದೊಳ್ ಕೂಡಿದಂ
ದನಪಾಯೋಗಮದಕ್ಕುಮೊಂದಿ ನಿಲೆ ಮತ್ತಂ ತದ್ವಿತೀಯರ್ಕ್ಷದೊಳ್ ॥
ಸುನಪಾಯೋಗಮನಂತರಂ ದುರುಧುರಾಯೋಗಂ ದ್ವಿಪಾರ್ಶ್ವಸ್ಥಮ ।
ನ್ಯ ನಿವಾಸಸ್ಥಿತಮಾದ ಯೋಗಮದುದಲ್ಕೇಮದ್ರುಮಂ ನಾಮದಿಂ ॥ ೧ ॥

ಅನಪಾಸಂಭವನಿಂದ್ರಿಯಾರ್ಥಸುಖಿ ವಿಖ್ಯಾತಂ ಪ್ರಧಾನಂ ಸುಶೀ ।
ಳನೆನಿಕ್ಕುಂ ಸುನಪಾಪ್ರಸೂತನರನಾತ್ಮೋಪಾರ್ಜಿತೈಶ್ವರ್ಯಧೀ ॥
ರನೆ ಕೀರ್ತ್ಯಾನ್ವಿತನಕ್ಕುಮಾ[2]ದುರುಧುರಾಜಂ ಸಂತತೋದ್ವೇಗವಿ ।
ತ್ತನೆನಿಕ್ಕುಂ ಬಹುಭೃತ್ಯಪೋಷಣಕುಟುಂಬಾರಂಭದಿಂದೊಂದುಗುಂ ॥ ೨ ॥

ಕಂ ॥ ಸಮನಿಸಿ ಬರ್ಕುಂ ಕೇಮ ।
ದ್ರುಮಯೋಗಸಮುದ್ಭವಂಗೆ ಪರಜನಭೃಷಕ ॥
ತ್ವಮುಮಧನತ್ವಮುಮಸುಖ ।
ತ್ವಮುಂ ಧರಾಧೀಶವಂಶದೊಳ್ ಪುಟ್ಟಿದೊಡಂ ॥ ೩ ॥

ಉಡುರಾಜಂ ಗ್ರಹಯುತನಾ ।
ದೊಡೆ ಮೇಣಲ್ಲದೊಡೆ ಕೇಂದ್ರಗೃಹದೊಳ್ ಗ್ರಹಮಿ ॥
ರ್ದೊಡೆಕೇಮದ್ರುಮದಶುಭಂ ।
ಕಿಡುಗುಂ ರುಜೆ ಕಿಡುವ ತೆಱದೆ ದಿವ್ಯೌಷಧಿಯಿಂ ॥ ೪ ॥

ಮ ॥ ಅನಪಾದಿತ್ರಯದಲ್ಲಿ ನಿಂದ ಕುಜನಿಂ ಚೋರಪ್ರಚಂಡಂ ಸುರೇ ।
ಜ್ಯನಿನುರ್ವೀಪತಿಪೂಜ್ಯನುತ್ತಮಗುಣಂ ದೈತ್ಯಾಧಿಪಾಮಾತ್ಯನಿಂ ॥
ಧನವಂತಂ ಸುಖಿ ಸೌಮ್ಯನಿಂ ನಿಪುಣನಾಢ್ಯಂ ಜ್ಞಾನಿ ಮಾರ್ತಾಂಡನಂ ।
ದನನಿಂದಂ ಬಹುಪೋಷಕಂ ಬಹುಗುಣಾರಂಭಾಢ್ಯನಕ್ಕುಂ ನರಂ ॥ ೫ ॥

ಕಂ ॥ ಅನಪಾದಿಗಳೊಳ್ ಕೂಡಿದ ।
ಕನಕಾದಿಗಳಿಂದುತ್ಸಾಹಾಕೃತಿ ಸಾರ್ಗುಂ ॥
ಜನಿತಂಗಾಪೇಟ್ದಿ ಗ್ರಹ ।
ಮನಿತುಂ ಕೂಡಿದೊಡೆ ಸಬಳನಾಕೃತಿ ಸಾರ್ಗುಂ ॥ ೬ ॥

ಮ ॥ ಚರದೊಳ್ ಕೂಡಿರೆ ಚಂದ್ರನರ್ಥಚಯಮುಂ ಮಿತ್ರತ್ವಮುಂ ನಿಲ್ಲದ ।
ಸ್ಥಿರನಕ್ಕುಂ ನಿಯಮಸ್ಥನಾಗೆಯುಮದಂ ಮಾಣ್ಗುಂ ತೊಳಲ್ಗುಂ ನರಂ ॥
ಸ್ಥಿರದೊಳ್ ತದ್ವಿಪರೀತಮಪ್ಪಗುಣಮಂ ಕೆಯ್ಕೊಳ್ಗುಮೇತರ್ಕಮಾ ।
ತುರನಲ್ಲಂ ಸ್ಥಿರನುಂ ಕ್ಷಮಾಪರನೆನಿಕ್ಕುಂ ಪದ್ಯವಿದ್ಯಾಧರಾ ॥ ೭ ॥

1. ಜರ್ 2. ಧುರದರಾಜಂ

ಕಂ ॥ ಕೃತಮತಿವಂಶಾರ್ಥವನಾ ।
ವತೆಱದೊಳಂ ತೀರ್ಚಿಕೊಳುವನುತ್ಸಾಹಪರಂ ॥
ವಿತರಣಯುತನೆನಿಸುಗುಮುಡು ।
ಪತಿಯುಗ್ಮೋದಯದೊಳೊಂದಿ ನಿಲೆ ಪುಟ್ಟಿದವಂ ॥ ೮ ॥

ಮ ॥ ಉಡುಪಂ ನಿಂದೆಡೆಯಿಂದಮೇೞೆಡೆಯೊಳ್ ಸೌಮ್ಯಗ್ರಹಂ ಕೂಡಿ ನಿಂ ।
ದೊಡೆ ಸೇನಾಪತಿಯಕ್ಕುಮಾಹಿಮಗುವಿಂದಾಱೇೞಱೊಳ್ ಸೌಮ್ಯರಿ ॥
ರ್ದೊಡವಂ ಪೆರ್ಗಡೆಯಕ್ಕುಮಾಶಶಿಯಿನಾಱೇೞೆಂಟಱೊಳ್ ಸೌಮ್ಯರಿ ।
ರ್ದೊಡೆ ಧಾತ್ರೀಪತಿಯಕ್ಕುಮಿಂತವಧಿಯೋಗಂ ಪದ್ಯವಿದ್ಯಾಧರಾ ॥ ೯ ॥

ಕಂ ॥ ದೊರೆಕೊಂಡಂದಧಿಯೋಗಂ ।
ನರಪತಿ ದೀರ್ಘಾಯು ವಿಭವಯುತನಭಧೀಯಂ ॥
ನಿರುಜಂ ಸುಖಾನ್ವಿತಂ ಜಿತ ।
ವಿರೋಧಿ ತಾನೆನಿಸಿ ವರ್ತಿಕುಂ ಬುಧಮಿತ್ರಾ ॥ ೧೦ ॥

ಮ ॥ ರವಿಯಿಂ ಕೇಂದ್ರದೊಳಿಂದು ಕೂಡೆ ವಿನಯ ಜ್ಞಾನಾರ್ಥ ನೈಪುಣ್ಯ ಬು ।
ದ್ಧಿವಿಹೀನಂ ನರನಿಂದು ತತ್ಪರಪಣಕ್ಷೇತ್ರಂಗಳೊಳ್ ನಿಂದೊಡಂ ॥
ತವಱೊಳ್ ಮಧ್ಯಮನಿಂದು ನಿಂದೊಡವರಾಬೋಕ್ಲೀಬದೊಳ್
ಭಾವಿ ಬಾಂ ।
ಧವಱೊಳ್ ತನ್ಮನುಜಂ ಸಮಗ್ರನೆನಿಕುಂ ಸಮ್ಯಕ್ತ್ವರತ್ನಾಕರಾ ॥ ೧೧ ॥

ತರದಿಂ ಭಾವಿಸುವಂದು ಕ[1]ಳ್ವನುಣಲುಳ್ಳಂ ಬುದ್ಧಿವಂತಂ ಧನೇ ।
ಶ್ವರನುರ್ವೀಪತಿ ಪೇಡಿ ಮೆಯ್ಗಲಿ ದರಿದ್ರಂ ದುರ್ಜನಂ ಪಾಪಿ ನಿ ॥
ಷ್ಕುರನುತ್ಕೃಷ್ಟಗುಣಾತಿ[2]ರಿಕ್ತನೆನಿಕುಂ ಮೇಷಾದಿ ಲಗ್ನಾಂಶಕಂ ।
ಬರೆ ಚಂದ್ರೋಪಗತಾಂಶುವಂ ಬರ ಬಳೋಪೇಕಾಂಶದೊಳ್ ಪುಟ್ಟಿದಂ ॥ ೧೨ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ಚಂದ್ರಯೋಗಕರಣಪ್ರಕರಣ ವರ್ಣನಂ
**ಚತುರ್ದಶಾಧಿಕಾರಂ**

1. ಳ್ವ 2. ರ

# ಪಂಚದಶಾಧಿಕಾರಂ

## ದ್ವಿತ್ರಿಯೋಗಪ್ರಕರಣ ವರ್ಣನಂ

ಮ ॥ ದಿವಸಾಧೀಶನೊಳೊಂದಿನಿಂದ ಶಶಿಯಿಂ ಯಂತ್ರಂಗಳಂ ಬಲ್ಲನೈಂ ।
ದವನಿಂದಂ ನಿಪುಣಂ ದಿನೇಶಸುತನಿಂದಂ ಧಾತುವಾದಪ್ರಿಯಂ ॥
ಕವಿಯಿಂದಾಯುಧಜೀವಿ ದೇವಗುರುವಿಂ ಕ್ರೂರಾತ್ಮನುರ್ವೀತನೂ ।
ಭವನಿಂದಂ ಪರದಾರಶೀಲನೆನಿಕುಂ ತದ್ಯೋಗದೊಳ್ ಪುಟ್ಟಿದಂ ॥ ೧ ॥

ರಜನೀನಾಥನೊಳೊಂದಿನಿಂದ ಸಿತನಿಂ ವಸ್ತ್ರಂಗಳಂ ಮಾಱುವಂ ।
ಕುಜನಿಂ ಕೂಟವಿಧಾನವೇದಿ ಗುರುವಿಂ ವರ್ಗೋತ್ತಮಂ ಭಾಸ್ಕರಾ ।
ತ್ಮಜನಿಂದಂ ಮಱುವಾಳ ತಾಯ ಬಸಿಱೊಳ್ ಬಂದಂ ವಿನೀತಂ ಶಶಾಂ ।
ಕಜನಿಂದೀಗ್ರಹಯೋಗಸಂಭವನೆನಿಕ್ಕುಂ ಪದ್ಯವಿದ್ಯಾಧರಾ ॥ ೨ ॥

ಕಂ ॥ ಕ್ಷಿತಿಜನೊಳೊಂದಿದ ಗುರುವಿಂ ।
ದೆಳ್ತಱಿಂ ಮಿತ್ರಪುತ್ರನಿಂದುರ್ವಿದಿಶಾ ॥
ಪತಿಸುತನಿಂ ಮಲ್ಲಂ ಭೃಗು ।
ಸುತನಿಂ ಪರದಾರಶೀಳನೆನಿಕುಂ ಮನುಜಂ ॥ ೩ ॥

ಚಾಂದ್ರಿಯೊಳೊಡಗೂಡಿದ ದಿವ ।
ಸೇಂದ್ರಾತ್ಮಜನಿಂ ಮಹೇಂದ್ರಜಾಳಜ್ಞಂ ದೈ ॥
ತ್ಯೇಂದ್ರಗುರುವಿಂದೆ ವಾಗ್ಮಿ ಸು ।
ರೇಂದ್ರಾರ್ಚಿತನಿಂದೆ ನೀತಿವಿದನಕ್ಕುಮವಂ ॥ ೪ ॥

ಅನಿಮಿಷಮಂತ್ರಿಯೊಳೊಂದಿದ ।
ಶನಿಯಿಂದಂ ಮಡಕೆ ಮಾಟ್ಪನೂಡಲ್ ಬಲ್ಲಂ ॥
ದನುಜೇಜ್ಯನಿಂ ಗುಣಾಧಿಕ ।
ನೆನಿಕುಂ ಮದಿಯೋಗಸಂಭವಂ ಬುಧಮಿತ್ರಾ ॥ ೫ ॥

ತ್ರಿದಶಾಹಿತಮಂತ್ರಿಯೊಳೊಂ ।
ದಿದ ಶನಿಯಿಂ ಸ್ತ್ರೀಧನಾನ್ವಿತಂ ದ್ವಿಗ್ರಹಯೋ ॥
ಗದೊಳಂ ಧಾತ್ರೀಗ್ರಹಯೋ ।
ಗದೊಳಂ ತಂತಮ್ಮ ಫಳಮನಾಗ್ರಹಮಿಗುಂ ॥ ೬ ॥

ಮ ॥ ಕುಲಸೌಮ್ಯಗ್ರಹಮೊಂದು ಕೂಡೆ ಕುಲಸಂಭೂತಾಧಿಕಂ ದ್ವಿಗ್ರಹಂ ।
ನಿಲೆ ಮೂಱುಗ್ರಹಮೊಂದೆ ಬಂಧುರತನರ್ಥಸ್ವಾಮಿ ನಾಲ್ಕುಂ ಗ್ರಹಂ ॥
ನಿಲೆ ಪಂಚಗ್ರಹಮೊಂದೆ ಭೋಗನಿ[1]ರತಂ ಭೂಭೃತ್ತ್ವಮಂ ಷ[2]ಡ್ಗ್ರಹಂ ।
ನಿಲೆ ಸಪ್ತಗ್ರಹಮೊಂದೆ ಭೂಪನೆನಿಕುಂ ತಂತಮ್ಮ ಗೇಹಂಗಳೊಳ್ ॥ ೭ ॥

1. ರು 2. ಡ್ಗ್ರ

ಕಂ ॥ ಗ್ರಹಸಪ್ತಕಮುಂ ನಿಲೆಸ ।
ದ್ಗ್ರಹೋಚ್ಚದೊಳ್ ತತ್ಫಲಕ್ಕೆ ಕಿಂಚಿತ್‌ನ್ಯೂನಂ ॥
ಸುಹೃದಾಲಯೋಚ್ಚದೊಳ್ ತ ।
ದ್ಗ್ರಹಮೇೞುಂ ನಿಂದೊಡಾಫಲಂ ದೊರೆಕೊಳ್ಗುಂ ॥ ೮ ॥

ಮ ॥ ಅರಿ ನೀಚರ್ಕ್ಷದೊಳೊಂದಿ ನಿಂದೊಡೆ ದರಿದ್ರಂ ದ್ವಿಗ್ರಹಂ ಕೂಡಿಕೊಂ ।
ಡಿರೆ ದುಃಖಾನ್ವಿತನಲ್ಲಿ ಮೂಱು ನಿಲೆ ಮೂಢಂ ನಾಲ್ಕು ನಿಂದಂದು ಘೋ ॥
ರ ರುಜಾಪೀಡಿತದೇಹನಯ್ದು ನಿಲೆ ನಾನಾಬಂಧನಪ್ರಾಪ್ತನಾ ।
ಱಿರೆ ಸಂತಪ್ತಮನಸ್ಕನೇೞು ನಿಲೆ ಸಪ್ತಾಘಾತದಿಂ ಪೊಂದುಗುಂ ॥ ೯ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ದ್ವಿತ್ರಿಯೋಗಪ್ರಕರಣ ವರ್ಣನಂ
**ಪಂಚದಶಾಧಿಕಾರಂ**

# ಷೋಡಶಾಧಿಕಾರಂ

## ಪ್ರವ್ರಾಜ್ಯಯೋಗಪ್ರಕರಣ ವರ್ಣನಂ

ಮ ॥ ಚತುರಾದಿಗ್ರಹಮಿರ್ದೊಡೊಂದೆ ಗೃಹದೊಳ್ ತನ್ಮಧ್ಯದೊಳ್ ವೀರ್ಯಸಂ ।
ಯುತನಪ್ಪ ಗ್ರಹದೊಂದು ದೀಕ್ಷೆ ದೊರೆಕೊಳ್ಗುಂ ನೋೞ್ಪೊಡೆಲ್ಲಂ ಬಳಾ ॥
ನ್ವಿತರಾದಂದನಿತುಂ ತಪಂ ಸಮನಿಕುಂ ಮುಂ ಕೂ[1]ಡೆ ಬರ್ಕುಂ ಬಳಾ ।
ಢ್ಯತಮುಂಗಪ್ಪ ತಪಂ ಪಲರ್ ವಿಬಳರಾದಂದಾಗದೊಂದುಂ ತಪಂ ॥ ೧ ॥

ಇನನಿಂದಂ ಗೊರವಂ ತುಷಾರಕರನಿಂ ಕಾಪಾಲಿಕಂ ಭೂಮಿನಂ ।
ದನನಿಂ ಬೌದ್ಧತಪಸ್ವಿ ಸೋಮಸುತನಿಂದಂ ಜೀವನೋಪಾಯಿ ಜೀ ॥
ವನಿನಾರಣ್ಯನಿವಾಸಿ ದೈತ್ಯಗುರುವಿಂದಂ ಗೌಳದೀಕ್ಷಾನ್ವಿತಂ ।
ಶನಿಯಿಂದಂ ಜಿನಯೋಗಿಯಪ್ಪ ತಪಮಂ ಕೈಕೊಳ್ಗುಮಾಮಾನವಂ ॥ ೨ ॥

ಚಂ ॥ ದೊರೆಕೊಳೆ ಸೋಲದಾಬಲಯುತಗ್ರಹಪಕ್ಷದೆ ದೀಕ್ಷೆ ಕೂಡಿಯುಂ ।
ನರನದುವಂ ಬಿಸುೞ್ಗುಮಿನಬಿಂಬದೊಳಸ್ತಮಯಗ್ರಹಂಗಳಾ ॥
ಗಿರೆ ತಪಮೊಂದುಮಾಗದವಱೊಳ್ ಬಳವದ್ಗ್ರಹಧರ್ಮಮಾರ್ಗತ ।
ತ್ಪರನೆನಿಕುಂ ವಿಹೀನಬಳರೆಲ್ಲರುಮಾಗಿರೆ ಶೂನ್ಯ ದೈವತಂ ॥ ೩ ॥

ಮ ॥ ಇನಜನ್ಮಂ ಬಳಹೀನ ಜನ್ಮಪತಿಯಂ ನೋೞ್ಪಂದು ಮೇಣ್ ಜನ್ಮನಾ ।
ಥನಸನ್ಯರ್ ನಡೆ ನೋಡದಿರ್ದೊಡಿನಜಂ ನೋೞ್ಪಂದು ಮೇಣ್ ಭಾನು ಭೌ ॥
ಮನವಾಂಶಂಗಳೊಳೊಂದಿ ನಿಂದೊಡಿನಜದ್ರೇಕ್ಕಾಣನಂತಲ್ಲಿ ಚಂ ।
ದ್ರನನೊಂದಿರ್ದೊಡೆ ನೋಡದಂದುಶ[2]ನ ದೀಕ್ಷಾಮಾತ್ರಮಂ
[3]ಪೊರ್ದುಗುಂ ॥ ೪ ॥

ಕಂ ॥ ಅತಿಶಯಬಳನೆನಿಸಿ ಪರಾ ।
ಜಿತನಾಗಿರ್ದಾ[4] ಗ್ರಹಂ ಪರಗ್ರಹಬಳವೀ ॥
ಕ್ಷಿತನಾಗಿರೆ ತದ್ಗ್ರಹದೊಂ ।
ದು ತಪಮನೋರಂತೆ ಬುದ್ಧಿಯಿಂ ಪಡೆಯನವಂ ॥ ೫ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ಪ್ರವ್ರಾಜ್ಯಯೋಗಪ್ರಕರಣ ವರ್ಣನಂ
**ಷೋಡಶಾಧಿಕಾರಂ**

---

1. ಡ 2. ನಿ 3. ಪೊಂದುಗುಂ 4. ರ್ದ

# ಸಪ್ತದಶಾಧಿಕಾರಂ

## ರಾಶಿಪ್ರಕರಣ ವರ್ಣನಂ

ಮ ॥ ಚಲಚಿತ್ತಂ ಬಲಹೀನಜಾನುಚಪಳಂ ಕಾಂತಾಪ್ರಿಯಂ ಕಾಮುಕಂ ।
ಕಲಿವೃತ್ತಾರುಣನೇತ್ರನುಷ್ಣಲಘುಶಾಖಾಹಾರಿ ಸೇವಾವಿದಂ ॥
ಜಲಭೀತಂ ಸಹಜಾಗ್ರಹಂ ಕುನಖಿ ಗೀತಜ್ಞಂ ಶಿರೋಭಾಗದೊಳ್ ।
ಕಲೆಯುಳ್ಳಂ ಭ್ರಮಣಾರ್ಥಿ ಬೇಗವೊಸೆವಂ ಮಾನಾನ್ವಿತಂ ಮೇಷಜಂ ॥ ೧ ॥

ಕಮನೀಯಂ ಪ್ರಭುಕೇಳಿಗಾಮಿ ಸುಭಗಂ ಪೀನೋರುವಕ್ತ್ರಂ ಕೃಷಿ ।
ಕ್ರಮನಾಧ್ಯಾತ್ಮಿಕಬಂಧು ವಿತ್ತರಹಿತಂ ಪಾರ್ಶ್ವಾನ್ಯಪೃಷ್ಠಾಂಕಿತಂ ॥
ಪ್ರಮದಾವಲ್ಲಭನಂತೆ ಮಧ್ಯಸುಖಿ ಪುಷ್ಟಂ ತ್ಯಾಗಿ ಕನ್ಯಾವ್ರಜಂ ।
ಸಮರೇತಂ ಸ್ಥಿರಮಿತ್ರನುಚ್ಚಕಕುದಂ ಶ್ಲೇಷ್ಮಾಢ್ಯನುಕ್ಷೋದ್ಭವಂ ॥ ೨ ॥

ಮತಿವಂತಂ ಪರವಿತ್ತಕಾಂಕ್ಷಿ ಬಳಮಿತ್ರಂ ಗೀತನೃತ್ತ[1]ಜ್ಞನು ।
ನ್ನತನಾಶಂ ರತವೇದಿ ಶಾಸ್ತ್ರಕುಶಲಂ ಜೂದಾಳಿ ಚೆಲ್ವಂ ನಿಕುಂ ॥
ಚಿತಕೇಶಂ ಪ್ರಿಯವಾದಿ ಕುಬ್ಜತನು ರಾಜದ್ವಾರಯೋಗ್ಯಂ ಮುಖಾಂ ।
ಕಿತನಾತಾಮ್ರವಿಳೋಳನೇತ್ರನಬಳೋಪೇತಂ ನೃಯುಗ್ಮೋದ್ಭವಂ ॥ ೩ ॥

ಚ ॥ ವನಜಳಕೇಳಿಯರ್ಥಿಯೊಡೆಯಂ ನಯಸಾಧ್ಯನಧೋವಳೋಕನಂ ।
ವನಿತೆಗೆ ಭೀರು ದೈವವಿದನಂಗನೆಯೊಳ್ ಕೆಳೆಗೊಳ್ವವಂ ಸುಹೃ ॥
ಜ್ಜನದಯಿತಂ ಬೃಹಂ ನಿಗರಣಂ ಕ್ಷಯವೃದ್ಧಿಧನಾನ್ವಿತಂ ನಿಕೇ ।
ತನಚಯನಾಥನುಚ್ಚಕಟಿ ಕುಬ್ಜಶರೀರಿ ಕುಳೀರಸಂಭವಂ ॥ ೪ ॥

ಶಾ ॥ ಕ್ರೂರಂ ಸ್ಥೂಳಹನುದ್ವಯಂ ಕಲಿಮನಂ ಕುಕ್ಷೀಕ್ಷುಧಾದಂತ ಕೃ ।
ಷ್ಣೋರು[2]ತ್ವೀಡಿತ ದೇಹನಾತ್ಮಜನನೀಭಕ್ತಂ ಸಪಿಂಗೇಕ್ಷಣಂ ॥
ನಾರೀದ್ವೇಷಿ ಸುಬುದ್ಧಿ ಭೋಗವಿಪುಳಾಸ್ಯಂ ಗರ್ಜಿತಂ ಮಾಂಸಶೈ ।
ಳಾರಣ್ಯಪ್ರಿಯನಲ್ಪಸೂನುವನಿಮಿತ್ತಕ್ರೋಧಿ ಸಿಂಹೋದ್ಭವಂ ॥ ೫ ॥

ಮ ॥ ಸುರತಜ್ಞಂ ಪರದೇಶಗಾಮಿ ಪರದೇಹೋಪಾರ್ಜಿತಾರ್ಥಂ ಘನೇ ।
ತರಬಾಹುದ್ವಯನಲ್ಪಸುಖಿ ಧರ್ಮಿಷ್ಟಂ ಕಳಾವೇದಿ ಸ ॥
ತ್ಯರತಂ ಶಾಸ್ತ್ರವಿದಂ ಪ್ರಿಯಂವದನಲೋಮಂ ಸೂತಿಕನ್ಯಾಪ್ರಜಂ ।
ಸ್ಥಿರಲಜ್ಜಾನ್ವಿತಚಾರುದೃಷ್ಟಿಗಮನಂ ಕನ್ಯಾನಿವಾಸೋದ್ಭವಂ ॥ ೬ ॥

ಧನವಂತಂ ಸುಖಿ ಕೈಂಕರಕ್ಕೆ ಕುಶಲಂ ಮೇಧಾವಿ ರಾಗಾನ್ವಿತಂ ।
ವನಿತಾವರ್ಜಿತಕಾರ್ಯವಾದಿ ನಟನಂ ಸದ್ವಿಪ್ರಶಿಷ್ಟಾಮರಾ ॥
ರ್ಚನಶೀಳಂ ನಿಡಿಯಂ ಚಳತ್ಕೃಶಶರೀರಂ ತುಂಗನಾ[3]ಶಂ ಸ್ವಬಂ ।
ಧುನಿಕಾಯಕ್ಕುಪಕಾರಿ ತೆತ್ತಿಗನೆನಿಕ್ಕುಂ ತೌಳಿಗೇಹೋದ್ಭವಂ ॥ ೭ ॥

1. ತ್ಯ 2. ಕ್ಷೀ 3. ಸಂ



ಚಂ ॥ ಪಿತೃಗುರು ವಿಪ್ರಯೋಗ ನಿಯತಸ್ಥಿತಿ ಶೈಶವಕಾಲರೋಗಪೀ ।
ಡಿತತನು ಗುಪ್ತಪಾಪಿ ಝಷಚಕ್ರ ಖಗಾಂಕಿತ ಪಾಣಿ ಪಿಂಗಳ ॥
ದ್ಯುತಿ ಪೃಥುಳಾನನಂ ಬೃಹದುರಸ್ಥಳ ವೃತ್ತಕರೋರು ಜಂಘನ ।
ಗ್ರತಮನಿಳಾಧಿಪ ಪ್ರಣುತನೆಂಬುದು ವೃಶ್ಚಿಕಗೇಹ ಜಾತನಂ ॥ ೮ ॥

ಮ ॥ ಬಸಿವಾಯಂ ಕವಿವಾಗ್ಮಿ ದೀರ್ಘಮುಖಕಂಠಂ ಧಾರ್ಮಿಕಂ ತ್ಯಾಗಿವೀ ।
ರ್ಯಸಮೇತಂ ಬಹುಶಿಲ್ಪಿ ಪೀನಭುಜದಂತಂ ಬಂಧುವರ್ಗಾಹಿತಂ ॥
ಬಸಿಮೂಗಂ ಪಿತೃವಿತ್ತಭೋಗಿ ಕುನಖಂ ಮೆಲ್ಪಿಂದೆ ಬಲ್ಪಿಂದೆ ಸಾ ।
ಧಿಸೆ ಸಾಧ್ಯಂ ನಿಪುಣಂ ಮಹೋದ್ಯಮಿ ಸುಗೂಢಾಂಶಂ ಧನುರ್ಗೇಹಜಂ ॥ ೯ ॥

ವನಿತಾಪುತ್ರರತಂ ವಿಲಜ್ಜನಲಸಂ ಧರ್ಮಧ್ವಜಂ ಶೀತಭೀ ।
ತನಧೋಭಾಗಕೃಶಂ ವಿಹೀನಕಟಿ ವಿಸ್ಪಷ್ಟೇಂದ್ರಿಯಂ ಲೋಭಿಸ ॥
ಜ್ಜನಮಾನ್ಯಂ ಸುಭಗಂ ಮಹಾಕವಿ ತೊಳಲ್ವಂ[1] ನಿರ್ದಯಂ ಮಾತುಗೇ ।
ಳ್ವನುವಲ್ಲಂಗನೆ ವೃದ್ಧೆಯೆಂಬಿವರೊಳೊತ್ತಿರ್ಪಂ ಮೃಗಪ್ರೋದ್ಭವಂ ॥ ೧೦ ॥

ತೊಡೆ ಬೆನ್ ಕಾಲ್ ಕಟಿ ವಕ್ತ್ರಮೆಂಬಿವಿನಿತುಂ ದೊಡ್ಡಂಗಳಕ್ಕುಂ ಧನಂ ।
ಕಿಡುಗುಂ ಪೊರ್ದುಗುಮೊಂದುಗುಂ ಕೆಳಸುಗಂಧಿಸ್ರಗ್ವಿಲೇಪಾರ್ಥಿ
ಯೊಳ್ ॥
ನಿಡಿಯಂ ಕರ್ಕಶಸೌಮ್ಯನಧ್ವಸಹನನ್ಯಸ್ತ್ರೀಧನಾಹೋರತಂ ।
ನಿಡುಗೋಣಂ ಶಠನಂಗನಿರ್ಗತ ಶಿರೋಜಾಳಂ ಘಟಪ್ರೋದ್ಭವಂ ॥ ೧೧ ॥

ಜಳದೊಳ್ ಪುಟ್ಟಿದ ವಸ್ತುವಿಂ ಪೆಱರ ಪೊನ್ನಿಂ ಭೋಗಿ ಸಾಪತ್ನರಂ ।
ಗೆಲಲಾರ್ಪಂ ಸಮಸುಂದರಾಂಗನಬಳಾಪುತ್ರಪ್ರಿಯಂ ಪಂಡಿತಂ ॥
ಅಲಸದ್ದೃಷ್ಟಿ ಸುವಾಕ್ಯಪೀನಶಿರನುಚ್ಚಘ್ರಾಣನುದ್ಯತ್ಪ್ರಭಾ ।
ನಿಲಯಂ ವಿತ್ತನಿಧಾನಭಾಗಿಯೆನಿಕುಂ ಮೀನಾಲಯಪ್ರೋದ್ಭವಂ ॥ ೧೨ ॥

ನಿಳಯಂ ತನ್ನಿಳಯೇಶನಿಂದೆ ವಿನುತಂ ವೀರ್ಯಾಢ್ಯಮಾದಂದು ತ ।
ತ್ಫಳಮೆಲ್ಲಂ ದೊರೆಕೊಳ್ಗುಮೊಂದೆರಡು ಮೇಣ್ ವೀರ್ಯಾಢ್ಯ
ನಾಗಿರ್ದೊಡಾ ॥
ಫಳದೊಳ್ ಕುಂದನುಪಾತದಿಂ ಸಮನಿಕುಂ ಪದ್ಮಪ್ರಿಯಾದಿಗ್ರಹಾ ।
ವಳಿಗಂ ಪೇೞ್ದ ಫಳಂಗಳಾವತೆಱದಿಂ ವೀರ್ಯಾಢ್ಯದಿಂ ಕೂಡುಗುಂ ॥ ೧೩ ॥

ಚದುರಂ ಸ್ವಲ್ಪಧನಂ ಪ್ರಸಿದ್ಧನದಟಂ ಶಸ್ತ್ರಕ್ರಿಯಾವೇದಿ ಮೇ ।
ಷದೊಳರ್ಕಂ ನಿಲೆ ಧನ್ಯನಲ್ಲಿ ಪರಮೋಚ್ಚಸ್ಥಾನದೊಳ್ ನಿಂದೊಡ ॥
ರ್ಕ್ಷದೊಳಿರ್ದಂದು ಸುಗಂಧವಸ್ತುಚಯದಿಂದಂ ಜೀವನೋಪಾಯಗೀ ।
ತದೊಳಂ ವಾದ್ಯದೊಳಂ ಕರಂ ಪರಿಣತಂ ಸ್ತ್ರೀಶತ್ರುವಕ್ಕುಂ ನರಂ ॥ ೧೪ ॥

1. ಲ್ಪಂ

ಮ ॥ ದಿನನಾಥಂ ಮಿಥುನರ್ಕ್ಷದೊಳ್ ನೆಲಸೆ ವಿದ್ಯಾಪಾರಗಂ ಜ್ಞಾನಿ ಧ ।
ನ್ಯನೆನಿಕ್ಕುಂ ನಿಲೆ ಕರ್ಕಿಯೊಳ್ ಪರಜನಪ್ರೇಷ್ಯಂ ಖಳದ್ರವ್ಯಹೀ ॥
ನನತಿಕ್ಲೇಶಪಥಂ ಶ್ರಮಾಕುಳನೆನಿಕ್ಕುಂ ಸಿಂಹದೊಳ್ ಕೂಡೆ ಗೋ ।
ಧನಶೈಲಾಗ್ರಕರಂ ಪ್ರಭಾವನತಿಮೇಧಾಯುಕ್ತನಕ್ಕುಂ ನರಂ ॥ ೧೫ ॥

ಮ॥ ಸ್ರ॥ ದಿವಸೇಂದ್ರಂ ಕನ್ಯೆಯೊಳ್ ಕೂಡಿರೆ ಲಿಪಿಗಣಿತಾಲೇಖ್ಯಕಾವ್ಯಪ್ರವೀಣಂ ।
ಯುವತೀರೂಪೋಪಮಂ ತೌಳಿಯೊಳಿರೆ ಗಮನಾಸಕ್ತಚಿತ್ತಂ ಸುವರ್ಣ ॥
ವ್ಯವಹಾರಂ ವಾದ್ಯಕಾರಂ ಖಳಕೃಷಿನಿರತಂ ವೃಶ್ಚಿಕ ಕ್ಷೇತ್ರದೊಳ್ ಕೂ ।
ಡೆ ವಿಷಾರ್ಥಾಜೀವನಂ ಸಾಹಸಿಗನಖಿಳಶಾಸ್ತ್ರಜ್ಞನವ್ಯಗ್ರನಕ್ಕುಂ ॥ ೧೬ ॥

ರವಿಚಾಪಕ್ಷೇತ್ರದೊಳ್ ನಿಂದೊಡೆ ಜನಪತಿ ತತ್ಪೂಜಿತಂ ದಾರುಣಂ ವೈ ।
ದ್ಯವಿದಂ ಕಷ್ಟೋಪಜೀವ್ಯಂ ಮಕರದೊಳಿರೆ ಮೂರ್ಖಂ ಖಳಂ ಲೋಭಿ ನೀಚ ॥
ವ್ಯವಹಾರಂ ಸ್ವಲ್ಪವಿತ್ತಂ ಪರಿವಿಭವಯುತಂ ಕುಂಭದೊಳ್ ಕೂಡೆ [1]ದೇಹೋ ।
ದ್ಭವಭಾಗ್ಯಂ ನಿಸ್ವನುಗ್ರಂ ಝುಷದೊಳಿರೆ ವಧೂಪ್ರೀತನಾದ್ರವ್ಯ ಪುಣ್ಯಂ ॥ ೧೭ ॥

ಮ ॥ ಕನಕಂ ವೃಶ್ಚಿಕ ಮೇಷದೊಳ್ ನಿಲೆ ಚಮೂನಾಥಂ ಸುಕರ್ಮಾಟನಂ ।
ಧನಿ ಭೂಪಂ ವ್ಯಸನಾಧಿಕಂ ಪರದುಗೆಯ್ವಂ ತಸ್ಕರಂ ಕ್ಷೀಣಗೇ ॥
ಹನೆನಿಕ್ಕುಂ ವೃಷತೌಳಿಯೊಳ್ ನಿಲೆ ಸುಕೇಶಂ ಸ್ತ್ರೀಜಿತಂ ಮಿತ್ರವಂ ।
ಚನಶೀಳಂ ಕುಹಕಪ್ರಿಯಂ ಪರುಷವಾಕ್ಯಂ ಪಂದೆ ಪಾಣ್ಬಂ ನರಂ ॥ ೧೮ ॥

ಚಂ ॥ ನಿಲೆ ಕುಜನಂಗನಾಮಿಥುನದೊಳ್ ರಣಗೀತವಿದಂ ಸುಖಾನ್ವಿತಂ ।
ಕಲಿಯಸಹಿಷ್ಣು ಮಿತ್ರರಹಿತಂ ಕೃಪಣಂ ಕೃತವೇದಿ ಯಾಚಕಂ ॥
ನೆಲಸೆ ಕುಳೀರಮಂದಿರದೊಳರ್ಥಯುತಂ ವಿಕಳೇಕ್ಷಣಂ ಬುಧಂ ।
ಜಲನಿಧಿಯಾನಲಬ್ಧಧನನಕ್ಕುಮವಂ ಕವಿರಾಜಬಾಂಧವಾ ॥ ೧೯ ॥

ಮ ॥ ಇರೆ ಧಾತ್ರೀತನಯಂ ದಿನೇಶಗೃಹದೊಳ್ ಸ್ವಲ್ಪಾಂಗನಾಸೂನು ದು ।
ರ್ಗರತಂ ಕ್ಲೇಶಸಹಿಷ್ಣು ನಿಸ್ವನೆನಿಕುಂ ಚಾಪಾನಿಮೇಷಸ್ಥನಾ ॥
ಗಿರೆ ವಿಖ್ಯಾತನಜಾತಶತ್ರು ಸಚಿವಂ ಸ್ವಲ್ಪಾತ್ಮಜಂ ಶೂರನೊಂ ।
ದಿರೆ ಕುಂಭೋದಯದೊಳ್ ತೊಳಲ್ವ ನರನುಂ ದುಃಖಾರ್ತನುಗ್ರಂ ಶಠಂ ॥ ೨೦ ॥

ಕಂ ॥ ಬಹುತನಯಂ ಬಹುವಿತ್ತಂ ।
ಮಹೇಶ್ವರಂ ಮೇಣ್ ಮಹೀಶ್ವರಾಧೀಶಸಮಂ ॥
ಮಹಿತನಯಂ ನೆಲಸಿರೆ ಮೃಗ ।
ಗೃಹದೊಳ್ ತನ್ಮನುಜನೆನಿಸುಗುಂ ಬುಧಮಿತ್ರಾ ॥ ೨೧ ॥

ಮ ॥ ಧರಣೀಪುತ್ರನಿವಾಸದೊಳ್ ನಿಲೆ ಬುಧಂ ಕೂಟಕ್ರಿಯಾವೇದಿ ತ ।
ಸ್ಕರನದ್ರವ್ಯನಸತ್ಯವಾದಿ ಕುವಧೂಪಂ ದ್ಯೂತನಾನಾನ್ನಪಾ ॥
ನರತಂ ನಾಸ್ತಿಕನುಕ್ಷತೌಳಿಗಳೊಳಾಚಾರ್ಯಂ ಬಹುಸ್ತ್ರೀಸುತಂ ।
ಗುರುಭಕ್ತಂ ಧನಿ ಸತ್ಯವಾಕ್ಯನೆನಿಕುಂ ಸಮ್ಯಕ್ಸ್ವರತ್ನಾಕರಾ ॥ ೨೨ ॥

1. ಧನೋರ್



ಮ ॥ ನರಯುಗ್ಮೋದಯದೊಳ್ ಬುಧಂ ನೆಲಸೆ ವಾಚಾಳಂ ಕಳಾವೇದಿ ಶೌ ।
ರ್ಯರತಂ ಶಾಸ್ತ್ರವಿದಂ ಪ್ರಿಯಂವದನೆನಿಕ್ಕುಂ ಕನ್ನೆಯೊಳ್ ಬಂದು ಕೂ ॥
ಡಿರೆ ಮೇಧಾವಿ ಮಹಾಗುಣಾಂಬುನಿಧಿಯುಕ್ತ ದ್ರವ್ಯಯುಕ್ತಂ ಕ್ಷಮಾ ।
ಪರನನ್ಯೋನ್ಯ ಸುಖಾನ್ವಿತಂ ವಿತರಣ ವ್ಯಾಪಾರಶೂರಂ ನರಂ ॥ ೨೩ ॥

ದಿವಸೇಂದ್ರಾಲಯದೊಳ್ ಬುಧಂ ನೆಲಸೆ ವಿಶ್ವಂ ಸೌಮ್ಯಯುಕ್ತೋದ್ಭವಂ ।
ಯುವತೀಲೋಲುಪನಂಗನಾರಿಪು ತೊಳಲ್ವಂ ಜ್ಞಾನಹೀನಂ ಪರಾ ॥
ಭವಯುಕ್ತಂ [1]ಶಶಿಗೇಹದೊಳ್ ನೆಲಸೆ ಬಂಧುದ್ವೇಷಿ ತೋಯೋದ್ಭವ ।
ದ್ರವಿಣಂ ಚಾಪದೊಳಿರ್ದೊಡಾತ್ಮವಚನಗ್ರಾಹಂ ಸುಹೃದ್ವಲ್ಲಭಂ ॥ ೨೪ ॥

ಕಂ ॥ ಶನಿಗೃಹದೊಳ್ ಬುಧನಿರೆ ಋಣ ।
ಧನಹೀನಂ ಶಿಲ್ಪಿ ಪೂಜನಾರ್ಥ ಪರಪ್ರೇ ॥
ಷ್ಯನೆನಿಕ್ಕುಂ ಝುಷದೊಳ್ ಧನು ।
ವಿನೊಳಿರೆ ತಾಂತ್ಯಜನ ಶಿಲ್ಪಿ ಸೇವಕನೆನಿಕುಂ ॥ ೨೫ ॥

ಮ ॥ ಅಮರೇಜ್ಯಂ ಕುಜಗೇಹದೊಳ್ ನಿಲೆ ಬಹುಸ್ತ್ರೀಪುತ್ರವಿತ್ತಾನ್ವಿತಂ ।
ಕ್ಷಮಿತೇಜೋನಿಲಯಂ ಸುಭೃತ್ಯಪತಿ ಸೇನಾನಾಯಕಂ ತ್ಯಾಗಶೀ ॥
ಳಮಹೌದಾರ್ಯಗುಣಂ ಗುಣಾಢ್ಯನೆನಿಕುಂ ಸ್ವಕ್ಷೇತ್ರದೊಳ್ ಕೂಡಿದಂ ।
ದು ಮಹೀಭೃತ್ಸಚಿವಂ ಚಮೂಪತಿ ಧನಾಢ್ಯಂ ಮಂಡಳಾಧೀಶ್ವರಂ ॥ ೨೬ ॥

ಸುರವಂದ್ಯಂ ವೃಷತೌಳಿಯೊಳ್ ನಿಲೆ ಸುಹೃತ್ಪುತ್ರಾಧಿಕಂ ತ್ಯಾಗಿ ಸುಂ ।
ದರರೂಪಂ ಸಕಳಪ್ರಿಯಂ ಸುಖಿ ಧನಾಢ್ಯಂ ಕೂಡೆ ಶಸ್ತ್ರಾಂಕಿಮಂ ॥
ದಿರದೊಳ್ ಪೂರ್ಣ ಸುಹೃತ್ತನೂಜಪರಿವಾರಂ ಸೌಖ್ಯಯುಕ್ತಂ ಮಹ ।
ತ್ತರನಿರ್ದಂದು ಮೃಗರ್ಕ್ಷದೊಳ್ ಸುಖನಿಕೃಷ್ಟಂ ಸ್ವಲ್ಪವಿತ್ತಂ ನರಂ ॥ ೨೭ ॥

ಪೃಥ್ವೀವೃತ್ತ ॥ ಹಿಮಾಂಶು ಗೃಹದೊಳ್ ಸುರೇಜ್ಯನಿರೆ ಪುತ್ರ[2]ಮಿತ್ರಾಂಗನಾ ।
ಸಮುತ್ಥವಿಭವಂ ಸುಬುದ್ಧಿ ಸುಖಿ ಕುಂಭದೊಳ್ ಕೂಡೆ ತ ॥
ತ್ಸಮಾನ ಫಳಭಾಗಿ ಕೂಡಿರೆ ದಿನಾಧಿಪ ಕ್ಷೇತ್ರದೊಳ್ ।
ಚಮೂಪತಿ ಕುಳೀರ ಸಂಸ್ಥಪನನಾಗಿಯುಂ [ತಾಂ] ನರಂ ॥ ೨೮ ॥

ಮ ॥ ದನುಜೇಜ್ಯಂ ಕುಜಗೇಹದೊಳ್ ನಿಲೆ ಪರಸ್ತ್ರೀಲೋಲನಾಳಾಪದಿಂ ।
ಧನನಾಶಂ ಕುಲದೂಷಣಂ ಸ್ವಗೃಹದೊಳ್ ಸ್ವೋಪಾರ್ಜಿತಾರ್ಥಂ ಪ್ರಸಿ ॥
ದ್ಧನಿಳಾನಾಥನುತಂ ಸ್ವಬಂಧು ಪತಿಶೂರಂ ದಂಪತಿಕ್ಷೇತ್ರದೊಳ್ ।
ಧನವಂತಂ ಧರಣೀಶಕಾರ್ಯಭರಧುರ್ಯಂ ಸತ್ಕಳಾಕೋವಿದಂ ॥ ೨೯ ॥

ಕವಿಕನ್ಯಾನಿಳಯಸ್ಥನಾಗೆ ಖ[3]ಳಕರ್ಮೋಪಾರ್ಜಿತಂ ರೋಹಿಣೀ ।
ಧವಗೇಹ[4]ಸ್ಥನುಮಾಗೆ ಭೀರು ಪೆಜಿರಂ ಬೇಟ್ಪಿಂ ಮದಪ್ರೋದ್ಧೃತಂ ॥
ಯುವತೀಯುಗ್ಮವರಂ ಪಯೋಜಸಖಗೇಹಸ್ಥಾಯಿಯಾದಂದು ಸ ।
ದ್ಯುವತೀನಾಯಕನಂಗನಾರ್ಜಿತ ಧನಂ ಮಂದಾತ್ಮಜಂ ತನ್ನರಂ ॥ ೩೦ ॥

1. ಸತಿ 2. ನಿತ್ತಾಂ 3. ರ 4. ಸ್ಥಿತನಾಗೆ

ಮ ॥ ಮೃಗಕುಂಭಂಗಳೊಳೊಂದಿದಂದು ಭೃಗುಜಂ ಕುಸ್ತ್ರೀನತಂ ತನ್ನ ಕಾಂ ।
ತೆಗೆ ಭೀತಂ ಸುಭಗಂ ಧನುರ್ಭವನದೊಳ್ ನಿಂದಂದು ವಾಡ್ಯಂ[1] ಸ್ವಬಂ ॥
ಧು ಗಣಭ್ಯರ್ಜಿತನೊಂದಿದಂದು [2]ಝುಷದೊಳ್ ಮೇಧಾವಿ ವಿತ್ತಾಧಿಕಂ ।
ಜಗತೀಭೃತ್ಕುಳವೈಭವಂ ಸುಭಗಸುರ್ವೀಪೂಜ್ಯನಕ್ಕುಂ ನರಂ ॥ ೩೧ ॥

ಇನಜಂ ಮೇಷದೊಳೊಂದಿದಂದು ಕಪಟಾಯೋಕಂ ತೊಳಲ್ವಂ ಸುಹೃ ।
ಜ್ಜನದೂರಂ ವೃಷರಾಶಿಯೊಳ್ ನೆಲಸೆ ವರ್ಜಂ ಸ್ವಲ್ಪವಿತ್ತಂ ವಧೂ ॥
ಜನಮಿತ್ರಂ ಬಹುಭಾರ್ಯನೊಂದಿನಿಲೆ ಸೌಮ್ಯಕ್ಷೇತ್ರದೊಳ್ ದುಃಖಿತಂ ।
ಧನಹೀನಂ ಸ್ಖಲಿತಾಂತರಂಗನಸುತಂ ನಿರ್ಲಜ್ಜಕಂ ರಕ್ಷಕಂ ॥ ೩೨ ॥

ಇನಜಂ ವೃಶ್ಚಿಕಸಂಸ್ಥನಾಗೆ ಚಪಳಾಂಗಂ ನಿರ್ದಯಂ ಪ್ರಾಪ್ತ ಬಂ ।
ಧುವಧಂ ತೌಲಿಯೊಳಿರ್ದೊಡರ್ಥಪತಿ ವಿಖ್ಯಾತಂ ಬಳಗ್ರಾಮ ಬಂ ॥
ಧು[3]ವಿನೂತಂ ನಿಲೆ ಕರ್ಕಿಯೊಳ್ ವಿಕಳದತ್ತಂ ಮಾತೃವಿತ್ತಾತ್ಮಜಾ ।
ತವಿಹೀನಂ ಶನಿಗೇಹದೊಳ್ ನಿಲೆ ಮಳೀಷ್ಟಂ ಭೋಕ್ತೃಸ[4]ಸ್ವಂಧನಂ ॥ ೩೩ ॥

ಶನಿಶಕ್ರೇಜ್ಯ ಗೃಹಸ್ಥನಾಗೆ ನೃಪರಿಂ ಶುದ್ಧಾತ್ಮಕಂ ಮಂದದೃ ।
ಷ್ಟಿನಿಜಸ್ತ್ರೀಸುತವೈಭವಂ ಸುಖಯುತಃಪ್ರಾಪ್ತಂ ಪುರಗ್ರಾಮ ಪ ॥
ತ್ತನಸೇನಾಶ್ರಿತನಲ್ಲಿ ಮತ್ತಧಿಕನಕ್ಕುಂ ಸಿಂಹದೊಳ್ ಕೂಡಿದಂ ।
ದನಪತ್ಯಂ ಬಹುವಿದ್ಯನೂರ್ಜಿತಸುಖಂ ಕಷ್ಟಾತ್ಮನಕ್ಕುಂ ನರಂ ॥ ೩೪ ॥

ಚಂ ॥ ಹಿಮಕರನಿರ್ದರಾಶಿಯ ಫಳಂ ಜನನೋದಯರಾಶಿಗಕ್ಕುಮಾ ।
ಹಿಮಕರನಂ ನಿರೀಕ್ಷಿಸೆ ಕುಜಾದಿಗಳಾಫಳಮಕ್ಕುಮಾವಿಲ ॥
ಗ್ನಮನವರೀಕ್ಷಿಪಂದುದಯಮುಂ ತದಧೀಶ್ವರನುಂ ಸಮಸ್ತ ಗೇ ।
ಹಮುಮಿನಿತುಂ ಬಳಾಢ್ಯಮೆನೆ ಭಾವಫಳಂ ದೊರೆಕೊಳ್ಗುಮಾವಗಂ ॥ ೩೫ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ರಾಶಿಪ್ರಕರಣ ವರ್ಣನಂ
**ಸಪ್ತದಶಾಧಿಕಾರಂ**

1. ದ್ಯಂ 2. ತಪದೊಳ್ 3. ನೀತಂ 4. ಸ್ಪಂದನಂ

## ಅಷ್ಟಾದಶಾಧಿಕಾರಂ

### ಲಗ್ನಭಾವಪ್ರಕರಣ ವರ್ಣನಂ

ಮ ॥ ಉದಯಸ್ಥಂ ದಿನನಾಥಗೇಹಿ ವಿಕಳಾಕ್ಷಂ ನಿರ್ಭಯಂ ನಿರ್ದಯಂ ।
ಸದನಂ ಸಿಂಹವಿಲಗ್ನದೊಳ್ ನಿಲೆ [1]ನಿಶಾಂಧಂ ಮೇಷಲಗ್ನಕ್ಕೆ ಪೊ ॥
ರ್ದಿದೊಡಾಢ್ಯಂ ತಿಮಿರಾಕ್ಷನಿಂದುಗೃಹಲಗ್ನಸ್ಥಾಯಿಯಾದಂದು ಬು ।
ದ್ಬುದನೇತ್ರಂ ವಣಿಜೋದಯಸ್ಥನೆನೆ ನಿರ್ದ್ರವ್ಯಂ ವಿ[2]ನಷ್ಟೇಕ್ಷಣಂ ॥ ೧ ॥

ದಿನನಾಥಂ ಜನನೋದಯಕ್ಕೆರಡಱೊಳ್ ನಿಂದಂದು ತನ್ಮಾನವಂ ।
ಧನವಂತಂ ನೃಪರಿಂ ಕವರ್ತೆವ[3]ಡುಗುಂ ವಕ್ರಾಮಯಾರ್ಥ ತೃತೀ ॥
ಯ ನಿವಾಸಸ್ಥಿತನಾಗೆ ಶೌರ್ಯಮತಿಯುಕ್ತಂ ನಾಲ್ಕಱೊಳ್ ನಿಂದೊಡಾ ।
ಜನಪಾಣ್ಮಂ ಸುಖಹೀನನಯ್ದಱೊಳಿರಲ್ಕೂನಂಧನಂ ನಿರ್ಧನಂ ॥ ೨ ॥

ಕವಿ ಲಗ್ನಾವಸಥಕ್ಕೆ ಷಷ್ಠಗೃಹದೊಳ್ ನಿಂದಂದಖಿಲ್ಯಂ ಪರಾ ।
ಭವ ಭಾಗಂ ನೆಲಸಿರ್ದೊಡಸ್ತಗೃಹದೊಳ್ ಸ್ತ್ರೀದೋಷದಿಂದಂ ಪರಾ ॥
ಭವ ಭಾರಂ ನಿಧನಸ್ಥನಾಗೆ ವಿಕಟಾಕ್ಷಂ ಸ್ವಲ್ಪ ಪುತ್ರಾನ್ವಿತಂ ।
ನವವರ್ಕ್ಷಸ್ಥಿತನಾಗೆ ಪುತ್ರಸುಖವಿತ್ತೋಪೇತನಕ್ಕುಂ ನರಂ ॥ ೩ ॥

ಕಂ ॥ ದಿನಪನುದಯಕ್ಕೆ ನಿಲೆ ಪ ।
ತ್ತನೆಯೆಡೆಯೊಳ್ ಸುಖಸಮನ್ವಿತಂ ರವಿ ಪನ್ನೊಂ ॥
ದನೆಯೆಡೆಯೊಳ್ ಧನಿ ಪನ್ನೆರ ।
ಡನೆಯೆಡೆಯೊಳ್ ದಕ್ಷಿಣಾಕ್ಷಿರಹಿತಂ ಪತಿತಂ ॥ ೪ ॥

ಅಮೃತಕರಂ ಗ್ರಾಮಾರ ।
ಣ್ಯಮಿತ್ರ[4]ಬಳಚರ ವಿಲಗ್ನದೊಳ್ ನೆಲಸಿರೆ ಜಾ ॥
ತಮನುಷ್ಯಂ ತತ್ಪ್ರಿಯನ ।
ಕ್ಕುಮನ್ಯಗೇಹಾಶ್ರಯಕ್ಕೆ ಭೀರುವೆನಿಕ್ಕುಂ ॥ ೫ ॥

ಮ ॥ ಉಡುರಾಜಂ ನಿಲೆ ಲಗ್ನದೊಳ್ ಕಿವು[5]ಡನುನ್ಮತ್ತಂ ಪರಪ್ರೇಷಿತಂ ।
ಜಡನಂಧಂ ವಿಕಟಾಂಗಿ ಮೂಗಜನಿತಾಂಗಾತ್ಮೋದಯಂ ಸ್ಥಾಯಿಯಾ ॥
ದೊಡೆ ಧನ್ಯಂ ಬಹುನಂದನಂ ನೆಲಸೆ ವಿತ್ತಸ್ಥಾನದೊಳ್ ವಿತ್ತಮಂ ।
ಪಡೆಗುಂ ಬ್ರಂದಿಗನಕ್ಕುಮೊಂದಿರೆ ತೃತೀಯ ಸ್ಥಾನದೊಳ್ ವಂಚಕಂ ॥ ೬ ॥

ಇರೆ ಲಗ್ನಕ್ಕೆ ಚತುರ್ಥದೊಳ್ ಹಿಮಕರಂ ಸತ್ಪುತ್ರವಿತ್ತಾಢ್ಯನೊಂ ।
ದಿರೆ ತತ್ಪಂಚಮದೊಳ್ ಬಹುಪ್ರಜನರಾತಿಸ್ಥಾನದೊಳ್ ಕೂಡೆ ನಿ ॥
ಷ್ಠುರನಾಲಸ್ಯಸಮನ್ವಿತಂ ಮೃದುವಪುಃಕಾಯಾಗ್ನಿ ಭಾನಾರಿ ಕೂ ।
ಡಿರೆ ತತ್ಸಪ್ತಮದೊಳ್ ಮದಾದ್ರಿತನಸಹ್ಯಂ ತದ್ವಿಲಗ್ನೋದ್ಭವಂ ॥ ೭ ॥

1. ವಿಷಾದಂ 2. ನಿ 3. ಡೆ 4. ಜಳ 5. ಡನುಂನತಂ

ಮ ॥ ಉದಯಕ್ಕೆಂಟಱೊಳಿಂದು ಕೂಡೆ ಸರುಜಂ ಕಾಮಾಧಿಕಂ [1]ತ್ರಿತ್ರಿಕೋ।
ಣದೊಳಾಢ್ಯಂ ಸುಭಗಂ ಸುಹೃತ್ತನಯಬಂಧೂಪೇತನುದ್ಯೋಗಗೇ ॥
ಹದೊಳೊಳ್ಪಂ ನೆಱೆ ತೀರ್ಚುವಂ ಸುಮತಿಶೂರಂ ಲಾಭಸಂಸ್ಥಾನದೊಳ್ ।
ವಿದಿತಾತ್ಮಂ ಪಡೆಪಾ[2]ಳಿ ರಿಪ್ಪದೊಳಸತ್ಯಂ[2] ವಾಮನೇತ್ರಾಂಧಕಂ ॥ ೮ ॥

ಕಂ ॥ ಕನಕನಿರೆ ಲಗ್ನದೊಳ್ ಕ್ಷತ ।
ತನುವಿತ್ತಸ್ಥಾನದೊಳ್ ಕದನ್ನಭುಜಂ ಧ ॥
ರ್ಮನಿವಾಸದೊಳಘುಕರನ ।
ನ್ಯನಿಲಯದೊಳ್ ರವಿಗೆ ಪೇೞ್ದ ಫಳಮಂ ಪಡೆಗುಂ ॥ ೯ ॥

ಮ ॥ ವನಜದ್ವಿಟ್ಸುತನೊಂದಿದಂದುದಯದೊಳ್ ಪ್ರಾಜ್ಞಂ ಧನಸ್ಥಾನದೊಳ್ ।
ಧನಿ ಲಗ್ನಕ್ಕೆ ತೃತೀಯದೊಳ್ ಖಳನವಂ ತೂರ್ಯರ್ಕ್ಷದೊಳ್ ಪಂಡಿತಂ ॥
ತನಯಸ್ಥಾನದೊಳಾತ್ಮಮಂತ್ರಿರಿಪುವೊಳ್ ನಿಶ್ಶತ್ರುಜಾಮಿತ್ರ ಕೇ ।
ತನದೊಳ್ ಧರ್ಮಗುಣಾನ್ವಿತಂ ಪೆಱವಱೊಳ್ ಸೂರ್ಯೋಕ್ತ
ಭಾವಾನ್ವಿತಂ ॥ ೧೦ ॥

ದಿವಿಜೇಜ್ಯಂ ನಿಲೆ ಜನ್ಮಲಗ್ನಗೃಹದೊಳ್ ಪ್ರಾಜ್ಞಂ ದ್ವಿತೀಯರ್ಕ್ಷದೊಳ್ ।
ಸುವ[3]ಚಂ ಮೂಱಱೊಳರ್ಥಲಾಭಿಸು[4]ಖದೊಳ್ ಸೌಖ್ಯಾನು
ರಕ್ತಂ ತನೂ ॥
ಭವದೊಳ್ ನಿಶ್ಚಯಬುದ್ಧನಾಱಱೆಡೆಯೊಳ್ ನಿಶ್ಶ[5]ತ್ರುಜಾಮಿತ್ರದೊಳ್
ವಿನುತಂ ತಂದೆಯಿನೆಂಟಱೊಳ್ ಖಳನೆನಿಕ್ಕುಂ ಧರ್ಮದೊಳ್
ದೀಕ್ಷಿತಂ ॥ ೧೧ ॥

ಕಂ ॥ ಸುರಗುರು ಹೋರೆಗೆ ಹತ್ತಱೊ ।
ಳಿರೆ ವಿತ್ತಸಮೃದ್ಧನೆಂಗೆ ಪನ್ನೊಂದಱೊಳೊಂ ॥
ದಿರೆ ಪಡೆಯಲಱಿವನೆಂಗ ।
ನ್ಯರಾಶಿಯೊಳ್ ನೆಲಸೆ ನೀಚನೆಂಗಾ ನರನಂ ॥ ೧೨ ॥

ಮ ॥ ದನುಜೇಜ್ಯಂ ನಿಲೆ ಲಗ್ನದೊಳ್ ಸುರತನಿಷ್ಣಾತಂ ಸುಖಾನ್ವೀತನ ।
ಸ್ತನಿಕೇತಸ್ಥಿತನಾಗೆ ಕಾಮಿಕಲಹೋದ್ಯುಕ್ತಂ ಧನಕ್ಷೇತ್ರದೊಳ್ ॥
ಧನವಂತಂ ಸುತಗೇಹದೊಳ್ ಸುಖಿಯೆನಿಕ್ಕುಂ ಭಾವಿಪಂದಂಗಿರ ।
ಸ್ಕನ ಜಾತೋಕ್ತಫಳಂಗಳನ್ಯ ಗೃಹದೊಳ್ ತಲ್ಲಗ್ನಜಂಗೊಂದುಗುಂ ॥ ೧೩ ॥

ಖರರುಗ್ನಂ ಧನನೊಂದಿದಂದುದಯದೊಳ್ ರಾಗಾನ್ವಿತಂ ಬಾಲಕಾ ।
ಲರುಜಾರ್ತಂ ಮಳಿನಂ ಸಕಾಮನಲಸಂ ಪಾತತ್ರಿಕದ್ಯಾಪ್ತಿ ತ ॥
ತ್ಪರನಕ್ಕುಂ ಧನಸಂಸ್ಥನಾಗೆ ಬುಧನಕ್ಕುಂ ತ್ರಿತ್ರಿ ಕೋಣಸ್ಥನಾ ।
ಗಿರೆ ಪಾಪಾಪಹನಕ್ಕುಮರ್ಥಫಳವನ್ಯಕ್ಷೇತ್ರದೊಳ್ ಕೂಡುಗುಂ ॥ ೧೪ ॥

1. ತ 2. ಳಿ ಲಿಪ್ಪದೊಳಸತ್ಯಂ 3. ಜರಿ 4. ಭ 5. ಸ್ತ್ರ



ಕಂ ॥ ಅಮರೇಜ್ಯಗೃಹಂ ಮೇಣಾ ।
ತ್ಮಮಂದಿರಂ ಸೋಚ್ಚಮುದಯಮಾಗಿರೆ ಶನಿ ಸಂ ॥
ಕ್ರಮಿಸಿದೊಡೆ ನರಂ ನರಪತಿ ।
ಸಮನಕ್ಕುಂ ಗ್ರಾಮಪುರಜನಾಧಿಪನಕ್ಕುಂ ॥ ೧೫ ॥

ಮಿತ್ರಾಧಿಪರುಚ್ಚಂ ಸ್ವ ।
ಕ್ಷೇತ್ರಸ್ಥಿತರಾಗೆ ಶುಭಶುಭಾನ್ಯರ್ ಲಗ್ನ ॥
ಕ್ಷೇತ್ರಾದಿಭಾವಫಲಮಂ ।
ಸೂತ್ರಾರ್ಥೋಕ್ತಿಯೊಳೆ ಮುಂದನಱಿವುದು ಪ್ರಾಜ್ಞಂ ॥ ೧೬ ॥

ಮ ॥ ತನುವಿತ್ತಾಧಿಪಲಗ್ನಭಾವಫಳದೊಳ್ ಸೌಮ್ಯಗ್ರಹಂ ನಿಂದೊಡಂ ।
ತನಿತುಂ ಭಾವಫಳಕ್ಕೆ [1]ಪುಟ್ಟಿ ಫಳದಂ ಪಾಪಗ್ರಹಂ ಕೂಡೆ ಕೇ ॥
ಡನೆ ಮಾೞ್ಕುಂ ನಿಲೆ ಷಷ್ಠರಾಶಿಯೆಡೆಯೊಳ್ ಪಾಪಗ್ರಹಂ ಶತ್ರುನಾ ।
ಶನಮಂತ್ಯಾಲಯದೊಳ್ ಶುಭಾಶುಭದೊಳಾರುಂ ನಿಂದೊಡಂ
ನಿಂದಿತಂ ॥ ೧೭ ॥

ಫಳದೊಳ್ ಪಾದಮನಾತ್ಮಮಿತ್ರಗೃಹದೊಳ್ ಸ್ವಕ್ಷೇತ್ರದೊಳ್ ನಿಂದೊಡಾ ।
ಫಳಪಾದದ್ವಯಮಂ ತ್ರಿಪಾದಫಳಮಂ ಮೂಲತ್ರಿಕೋಣಂಗಳೊಳ್ ॥
ಫಳಸಾ[2]ಮಾನ್ಯಮನುಚ್ಚದೊಳ್ ಕೊಡುಗುಮನ್ಯಕ್ಷೇತ್ರದೊಳ್ ಸ್ವಲ್ಪಮಂ ॥
ಫಳಮಂ ನೀಚದೊಳಸ್ತದೊಳ್ ವಿಫಳಮಂ ಲಗ್ನಾದಿಭಾವೋತ್ತಮಂ ॥ ೧೮ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ಲಗ್ನಭಾವಪ್ರಕರಣ ವರ್ಣನಂ
**ಅಷ್ಟಾದಶಾಧಿಕಾರಂ**

1. ಪುಟ್ಟೆ 2. ಮ್ಯಸ್ಥ

# ಏಕೋನವಿಂಶತ್ಯಧಿಕಾರಂ

## ದ್ರೇಕ್ಕಾಣಪ್ರಕರಣ ವರ್ಣನಂ

ಕಂ ॥ ಧೃತಪರಶುರಕ್ತನೇತ್ರ ।
ದ್ವಿತಯಂ ಕೃಷ್ಣಾಂಗರಾಜಿ ಕಾಯಲ್ ನೆಜೀವಂ ॥
ಸಿತವಸ್ತ್ರಾವೃತಕಟಿ ರೌ ।
ದ್ರತರಂ ಭಾವಿಪೊಡಜಾದಿಮದ್ರೇಕ್ಕಾಣಂ ॥ ೧ ॥

ನಿಡುವೊಗದವಳ್ ತೃಷಾತುರೆ ।
ತುಡಲುಣಲಾಟಿಸುವಳೊಂದೆ ಕಾಲೊಳ್ ನಿಲುವಳ್ ॥
ಕೊಡದನ್ನಮರುಣವಸ್ತ್ರಮ ।
ನುಡುವಳ್ ತನ್ಮೇಷಮಧ್ಯಮದ್ರೇಕ್ಕಾಣಂ ॥ ೨ ॥

ಆರಕ್ತಪೀವರವ್ಯಾ ।
ಪಾರಾರ್ಥಕಳಾಪ್ರವೀಣನು[1]ದ್ಯತ ದಂಡಂ ॥
ಕ್ರೂರಾತ್ಮಂ ವ್ಯಕ್ತವ್ರತ ।
ನಾರಭಟೀಪ್ರಿಯನಜತೃತೀಯತ್ರ್ಯಂಶಂ ॥ ೩ ॥

ಪಸಿವು ತೃಷೆ ಕೊಯ್ದತಲೆ ಬೆಂ ।
ದಸೀರೆ ತೊಡುಗೆಗಳ ಬಯಕೆಯೆಂಬಿನಿತುಂ ಸಂ ॥
ಧಿಸುಗುಂ ತಾನಾಘುಟದವೊ ।
ಲೆಸೆವಳ್ ವೃಷಗೇಹದಾದಿಮದ್ರೇಕ್ಕಾಣಂ ॥ ೪ ॥

ಪಸಿವೊಡೆಯಂ ಹಲಶಕಟದ ।
ಬೆಸನಱಿವಂ ಕ್ಷೇತ್ರಧಾನ್ಯಗೃಹಧೇನುಕಳಾ ॥
ಪ್ರಸರಜ್ಞನಜಮುಖಂ ಮಲ ।
ವಸನಂ ಸ್ಥೂಳಾಂಗನುಕ್ಷಮಧ್ಯತ್ರಿಂಶಂ ॥ ೫ ॥

ಸಿತವಸ್ತ್ರಂ ಬೃಹದಂತ ।
ದ್ವಿತಯಂ ಸ್ಥೂಳಾಂಗನಧಿಕರೋಮಂ ಪಿಂಗ ॥
ದ್ವಿತಯುಕ್ತನಾಕುಳಾಂತ ।
ರ್ಗತನೆನಿಕುಂ ವೃಷಭದಂತಿಮದ್ರೇಕ್ಕಾಣಂ ॥ ೬ ॥

ಅನಪತ್ಯೆ ಪತಿವ್ರತೆ ಕೆ ।
ಯ್ಯನೆತ್ತಿದಳ್ ತೊಡುಗೆಗಳಿಗೆ ಕರಮರ್ಥಿಪ ರೂ ॥
ಪಿನ ಕಣಿ ಶುಚಿಕರ್ಮಾಯಿತೆ ।
ಯೆನಿಪುಣೆ ಮಿಥುನಾಲಯಾದಿಮದ್ರೇಕ್ಕಾಣಂ ॥ ೭ ॥

1. ಥಿ



ಕಂ ॥ ಕವಚಧರಂ ಶೂರಂ ಬಿ ।
ಲ್ಲುಮನಂಬುಮನಡವಿಯೊಳಗೆ ಪಿಡಿದಿರ್ಪಂ ಮಿ ॥
ತ್ರವಿಹಾರಿ ಭೂಷಣಾಕಾಂ ।
ಕ್ಷಿ ವಿಹಗಪಾಸ್ಯಂ ನೃಯುಗ್ಮಮಧ್ಯತ್ರ್ಯಂಶಂ ॥ ೮ ॥

ಕವಿ ಬಹುರತ್ನಾಢ್ಯಂ ನೃ ।
ತ್ಯವಾದ್ಯಶಿಲ್ಪಪ್ರವೀಣಮತಿ ಶರಧಿಧನುಃ ॥
ಕವಚಧರಂ ಕೆಯ್ಗೆರ್ದಿ ।
ರ್ಪವನೆನಿಕುಂ ಮಿಥುನದಂತಿಮದ್ರೇಕ್ಕಾಣಂ ॥ ೯ ॥

ತುರಗಗಳಂ ಕಾನನ ಮಳ ।
ಯರುಹಗತಂ ಪತ್ರಮೂಲಫಳಧಾರಿ[1] ಬೃಹ ॥
ಚ್ಚರಣಂ ಸ್ಥೂಳಾಂಗಂ ಸೂ ।
ಕರವದನಂ ಕರ್ಕಟಾದಿಮದ್ರೇಕ್ಕಾಣಂ ॥ ೧೦ ॥

ಜಳರುಹಮನಿಟ್ಟು ತಲೆಯೊಳ್ ।
ಪಳಾಶವಿಟಪಸ್ಥೆ ಕರ್ಕಶಾಂಗಿ ಭುಜಂಗಾ ॥
ವಿಳ ಬಿಲದೊಳಾಡುತಿರ್ಪಳ್ ।
ಲಳನೆಯೆನಿಕ್ಕುಂ ಕುಳೀರಮಧ್ಯತ್ರ್ಯಂಶಂ ॥ ೧೧ ॥

ಉರಗಾವೃತಂ ಸುವರ್ಣಾ ।
ಭರಣಂ ಜಲಯಾನವಾಸಿ ಪೀತಶ್ಯಾಮಂ ॥
ತರುಣಿಯ ವಿಭೂಷಣಾರ್ಥದೆ ।
ಶರಧಿಗೆ ಪೋಪಂ ಕುಳೀರದಂತ್ಯತ್ರ್ಯಂಶಂ ॥ ೧೨ ॥

ನರಿನಾಯಿಪರ್ದೆಂಬಿವಱಿ ।
ಸ್ವರೂಪದಿಂದೆ ಶಾಲ್ಮಲಿ ಮಹೀರುಹದೊಳ್ ಮಾ ॥
ತರಪಿತರರಂ ಬಿಸುಟ್ಟತಿ ।
ಭರದಿಂದೂಳ್ವಂ ಮೃಗಾಧಿಪಾದಿತ್ರ್ಯಂಶಂ ॥ ೧೩ ॥

616

ತುರಗಾಕೃತಿ ಕೃಷ್ಣಾಜಿನ ।
ಪರಿವೃತಂ ಕಾಳಮೂಗನಿಷುಸಹಿತ ಧನು ॥
ರ್ಧರನುಜ್ಜ್ವಳ ಕುಸುಮಧರಂ ।
ದುರಾಸದಂ ಸಿಂಹಮಧ್ಯಮದ್ರೇಕ್ಕಾಣಂ ॥ ೧೪ ॥

ಧೃತದಂಡಫಳಾಮಿಷ [2]ಸಂ ।
ತತಿರುಕ್ಷಮುಖಂ ಕಪಿಸ್ವಭಾವಂ ಬಹುಕುಂ ॥
ಚಿತಕೇಶಪಾಶನಾಲಂ ।
ಬಿತಕೂರ್ಚಂ ಸಿಂಹದಂತಿಮದ್ರೇಕ್ಕಾಣಂ ॥ ೧೫ ॥

1. ಧಿ 2. ನಿಂ

ಕಂ ॥ ಕುಸುಮಘಟಾನ್ವಿತೆ ಕೊಳೆಗೊಂ ।
ಡಸೀರೆಯಂ ಪೊದೆವವಸ್ತ್ರಮಂಡನಮನಪೇ ॥
ಕ್ಷಿಸಿ ಗುರುಕುಳಕ್ಕೆ ಮನಸಂ ।
ತಸದಿಂ ಪೋಪಳ್ ವಧೂಗೃಹಾದಿತ್ರ್ಯಂಶಂ ॥ ೧೬ ॥

ಪ್ರವಿಪುಳಧನುರ್ಧರಂ ಶ್ಯಾ ।
ಮವರ್ಣನಾಯವ್ಯಯಕ್ರಿಯಾರುಚಿ ನಿಲೆ ಸು ॥
ತ್ತುವನತಿರೋಮಂ ಲೆಕ್ಕಣಿ ।
ಕೆವಿಡಿದವಂ ಯುವತಿಮಧ್ಯಮದ್ರೇಕ್ಕಾಣಂ ॥ ೧೭ ॥

ಮಳರಹಿತೆ ದುಕೂಳಾಂಬರ ।
ವಿಳಸಿತೆ ನಿಡಿಯಳ್ ಸಗೌರರುಚಿ ಘಟಮಂ ಚ ॥
ಕ್ಕಳಮಂ ಪಿಡಿದಿರ್ಪಳ್ ಸುರ ।
ಕುಳಗಮನಾಸಕ್ತೆ ಕನ್ಯಕಾಂತ್ಯತ್ರ್ಯಂಶಂ ॥ ೧೮ ॥

ಅಳೆಯಲ್ ತೂಗಲ್ ಪರಿಣತ ।
ನಳತೆಯಕೈಮಧ್ಯವಿಪಣಿಗಮನಂ ಭಾಂಡಂ ॥
ಗಳ ಬೆಲೆಯಂ ಚಿಂತಿಸುವಂ ।
ತುಳಾಧರಂ ತೌಳಿನಿಳಯದಾದಿತ್ರ್ಯಂಶಂ ॥ ೧೯ ॥

ಅತಿತೃಷಿತನುಂ ಬುಭುಕ್ಷಾ ।
ನ್ವಿತತನುವೆನಲ್ ಬೀೞ್ವ ಕುಂಭಂ ಪಿಡಿದಂತ ॥
ರ್ಗತದೊಳ್ ಬಗೆವಂ ವಿನತಾ ।
ಸುತ ಗರುಡಾಸ್ಯಂ ತುಳಾರ್ಕ್ಷಮಧ್ಯತ್ರ್ಯಂಶಂ ॥ ೨೦ ॥

ವನದೊಳಗೆ ರತ್ನಮೃಗಮಾ ।
ಗಿ ನಲಿವುತುಂ ಪೊಂಗೆ ತನುತನುತ್ರಂ ಚಾಪಂ ॥
ತನಗಮರೆ ಕಿನ್ನರಾಕೃತಿ ।
ಯಿನೆಸೆದು ತೋರ್ಪಂ ತುಳಾಂತಿಮದ್ರೇಕ್ಕಾಣಂ ॥ ೨೧ ॥

ವಸನಾಭರಣವ್ಯತಿರಿ ।
ಕ್ತೆ ಸಮುದ್ರದ ತಡಿಯೊಳಿರ್ದು ನಿಜಪದದೊಳ್ ಬಂ ॥
ಧಿಸುವಳ್ ಪಾವಂ ನೆಲೆಯಂ ।
ಬಿಸುಟತಿ ರಮಣೀಯೆ ವೃಶ್ಚಿಕಾದಿತ್ರ್ಯಂಶಂ ॥ ೨೨ ॥

ಉರಗಾನ್ವಿತೆ ಕಚ್ಛಪಕುಂ ।
ಭರೂಪೆ ನಿಜಪತಿನಿಮಿತ್ತಮೇಕಸ್ಥಾನಾಂ ॥
ತರಸುಖಕಾಂಕ್ಷಿಣಿಯಕ್ಕುಂ ।
ವರವೃಶ್ಚಿಕಗೃಹದ ಮಧ್ಯಮದ್ರೇಕ್ಕಾಣಂ ॥ ೨೩ ॥



ಕಂ ॥ ಹರಿಣಕ್ರೋಷ್ಟುಕ ಶರಭಂ ।
ವರಾಹಭಯದಾಯಿ ಕೂರ್ಮವದನಂ ಕಮಳಾ ॥
ಕರಮಂ ರಕ್ಷಿಸು[1]ವಂ ಕೇ ।
ಸರಿರೂಪಂ ವೃಶ್ಚಿಕಾಂತಿಮದ್ರೇಕ್ಕಾಣಂ ॥ ೨೪ ॥

ನರಮುಖಿಯತ್ವತನು ಧನು ।
ರ್ಧರನಾತ್ಮಾಶ್ರಮನಿವಾಸಿ ಯಜ್ಞದ್ರವ್ಯೋ ॥
ತ್ಕರಮಂ ಮುನಿವರರಂ ಕೂ ।
ಡೆ ರಕ್ಷಿಪಂ ಧನುವಿನಾದಿಮದ್ರೇಕ್ಕಾಣಂ ॥ ೨೫ ॥

ಸುರನದಿಯ ರತ್ನಮಂ ಸಂ ।
ವರಿಪಳ್ ಪೊಂಬಣ್ಣ ಚಂಪಕಚ್ಛಾಯೆ ಮನೋ ॥
ಹರಮಧ್ಯಮರೂಪೆ ಸುವಿ ।
ಸ್ತರೆಯೆನಿಕುಂ [2]ಚಾಪಮಧ್ಯಮದ್ರೇಕ್ಕಾಣಂ ॥ ೨೬ ॥

ಅತಿರುಚಿರಾನನನತ್ವಂ ।
ಧೃತದಂಡಂ ಚಾರುಚಂಪಕಚ್ಛಾಯಂ ಲಂ ॥
ಬಿತಕೂರ್ಚಂ ವೇತ್ರಾಜಿನ ।
ಯುತನೆನಿಕುಂ ಚಾಪದಂತಿಮದ್ರೇಕ್ಕಾಣಂ ॥ ೨೭ ॥

ಧೃತ ಜಾಳನಿಗಳಹಳದು ।
ನ್ನತಿ [3]ಮುಖಭಾವಂ ವರಾಹದೇಹಂ ಬಹುರೋ ॥
ಮತನುಃ ಕರಾಭದಂಷ್ಟ್ರ ।
ದ್ವಿತಯಂ ಮಕರಾಳಯಾದಿಮದ್ರೇಕ್ಕಾಣಂ ॥ ೨೮ ॥

ವಿವಿಧಾಭರಣಾಢ್ಯೆ ವಿಚಿ ।
ತ್ರವಸ್ತುಗಳನಱಿಸುವಳ್ ಕಳಾವಿದೆ ಲೋಹ ॥
ಶ್ರವಣೆ ಕಮಳಾಕ್ಷಿ ದಂಭಾ ।
ಭವರ್ಣೆ ಮೃಗನಿಳಯಮಧ್ಯಮದ್ರೇಕ್ಕಾಣಂ ॥ ೨೯ ॥

× × × × ×

ದಸರಿಯ ಸೀರೆಗಳಂ ಸ್ನೇ ।
ಹಸುಧಾಜಳ ಭಾಜನಂಗಳಂ ಪಾರ್ವಂ ಗೃ ॥
ಧ್ರಸಮಾಸ್ಯಕಂ ಬಳಂ ಚ ।
ರ್ಮಸಮೇತಂ ಘಟಗೃಹಾದಿಮದ್ರೇಕ್ಕಾಣಂ ॥ ೩೦ ॥

ಮಳಿನಾಂಬರವೇಷ್ಟಿತೆ ಶಾ ।
ಲ್ಮಲಿಕುಜಂ ಬೆರಸು ಭಂಡಿಯಂದದೆ ವಿವರ್ನ ॥
ಸ್ಥಳದೊಳ್ ಲೋಹಂಗೊಳುವಳ್ ।
ತಳೆವಳ್ ಘಟಮಂ ಘಟದ್ವಿತೀಯತ್ರ್ಯಂಶಂ ॥ ೩೧ ॥

1. ವಂತೆಸ 2. ಭಾವ 3. ಮುಖಿ

ಕಂ ॥ ಫಳಪತ್ರತ್ವಕ್‌ನಿರ್ಯಾ ।
ಸಲೋಹಮಿಶ್ರಿತ ಘುಟಂಗಳಂ ತಳೆದಂ ಶ್ಯಾ ॥
ವ್ಮಳದೇಹಂ ಮಕುಟಧರಂ ।
ಸಲೋಹಕರ್ಣಂ ಘುಟಾಂತಿಮದ್ರೇಕ್ಕಾಣಂ ॥ ೩೨ ॥

ವನಿತಾವಿಭೂಷಣಾರ್ಥದೆ ।
ವನಧಿಗೆ ಪೋಪಂ ವಿಭೂಷಣಾಢ್ಯಂ ಸೃಗ್ವಾ ॥
ಜನಮಣಿ ಪೌಕ್ತಿಕತಂಖಾ ।
ದಿನೀಳಕಂಠಂ ಝುಷಾದಿಮದ್ರೇಕ್ಕಾಣಂ ॥ ೩೩ ॥

ಧೃತಚಂಪಕತನುರುಚಿ ಸೂ ।
ನೃತ ಧ್ವಜಾಶ್ರಿತಪತಾಕಪೋತಗತಂ ವಾ ॥
ರ್ಧಿತಟಕ್ಕೆ ಪಾರವಾರಾ ।
ಸ್ಥಿತನೆನೆ ಪೋಪಂ ಝುಷದ್ವಿತೀಯತ್ರ್ಯಂಶಂ ॥ ೩೪ ॥

ವಸನವಿಹೀನಂ ಕುಳಿಯೊಳ ।
ಗೆ ಸರ್ಪನಿಂ ಕಟ್ಟುಪಟ್ಟವಂ ಚೋರ ವಿಭಾ ॥
ವಸುಗಳ ಭಯದಿಂದಾಕ್ರಂ ।
ದಿಸುವಂ ಕಾನನದೊಳನಿಮಿಷಾಂತ್ಯತ್ರ್ಯಂಶಂ ॥ ೩೫ ॥

ಇದು

ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ದ್ರೇಕ್ಕಾಣಪ್ರಕರಣ ವರ್ಣನಂ
**ಏಕೋನವಿಂಶತ್ಯಧಿಕಾರಂ**

# ವಿಂಶತ್ಯಧಿಕಾರಂ

## ದೃಷ್ಟಿಪ್ರಕರಣ ವರ್ಣನಂ

ಕಂ ॥ ತಾರೇಶಂ ನಿಲೆ ಮೇಷದೊ ।
ಳಾರಂ ಮೊದಲಾಗೆ[1] ಷಡ್ಗ್ರಹಂ ನೋಟ್ಪೊಡವಂ ॥
ಶೂರ ನೃಪಪ್ರತಿಮಗುಣಂ ।
ಚೋರಂ ನಿರ್ಧನನೆನಿಕ್ಕುಮಾತಂ ಕ್ರಮದಿಂ ॥ ೧ ॥

ಕುವಳಯಸಖನಿರೆ ವೃಷಭದೊ ।
ಳವನಿಸುತಾದಿ ಗ್ರಹಂಗಳೀಕ್ಷಿಪೊಡವನ ॥
ರ್ಥವಿಹೀನಂ ಚೋರಂ ಪಾ ।
ರ್ಥಿವಧನಪತಿ [ನೃಪಂ] ಧನ್ಯನನ್ಯಪ್ರೇಷ್ಯಂ ॥ ೨ ॥

ತುಹಿನಕರಂ ಮಿಥುನದೊಳಿರೆ ।
ಮಹಿಜಾದಿಗಳೀಕ್ಷಿಪಂದು ಲೋಹಾಜೀವ್ಯಂ ॥
ಮಹಿನಾಥಂ ವಿಬುಧಂ ಮಂ ।
ದಹಿತಮನಂ ನೆಯ್ಗೆ ಕಾಜಿನಧಮನೆನಿಕ್ಕುಂ ॥ ೩ ॥

ಹಿಮರುಚಿ ಕರ್ಕಿಯೊಳಿರೆ ನೋ ।
ಡೆ ಮಹೀಜಾದಿಗ್ರಹಂ ಸುಯೋಧಂ ಕವಿಸೂ ॥
ರಿಮಹೀತಳನಾಥಂ ಲೋ ।
ಹಮನುಷ್ಯಂ ಜನಿತನಕ್ಷಿರೋಗಿಯೆನಿಕ್ಕುಂ ॥ ೪ ॥

ವಿಸಜಾರಿ ಹರಿಯೊಳಿರೆ ವೀ ।
ಕ್ಷಿಸೆ ಕನಕಾದಿ ಗ್ರಹಂ ಮಹೀನಾಥಂ ಜೋ ॥
ಯಿಸಿಗಂ ವಿತ್ತಾಧೀಶಂ ।
ವಸುಧೇಶಂ ನಯವಿದಂ ನರೇಶ್ವರನಕ್ಕುಂ ॥ ೫ ॥

ಶಶಿ ಕನ್ನೆಯೊಳಿರೆ ವೀಕ್ಷಿಸೆ ।
ಶಶಾಂಕಜಾದಿತ್ರಯಂ ನೃಪಂ ಸೇನಾಪಂ ॥
ಕುಶಳನೆನಿಕ್ಕುಂ ಲಗ್ನಮ ।
ನಶುಭಗ್ರಹದೃಷ್ಟಿಕೂಡೆ ದುಷ್ಟನೆನಿಕ್ಕುಂ ॥ ೬ ॥

ಇರೆ ಚಂದ್ರಂ ತೊಲೆಯೊಳ್ ಹಿಮ ।
ಕಿರಣಸುತಾದಿ ಗ್ರಹತ್ರಯಂ ನೋಡೆ ಧರಾ ॥
ಮರಪತಿ ಪೊಂಬೆಸಕೆಯ್ವಂ[3] ।
ಪರಿಣತಮತಿಯಕ್ಕುಮನ್ಯದೃಷ್ಟಿಯಿನದಯಂ ॥ ೭ ॥

1. ಗಿ 2. ಧೀ 3. ಯ್ಯಂ

ಕಂ ॥ ಕನಕಾದಿಗಳೀಕ್ಷಿಸೆ ಚಂ ।
ದ್ರನನಳಿಯೊಳ್ ನಿಂದನಂ ಧರಾಧಿಪನಮಳ್ಳ್ವ ॥
[1]ಟ್ಟ್ವನರಂ ವಿನೇಯನಿಧಿ ರಜ ।
ಕ್ಯನಂಗಹೀನಂ ದರಿದ್ರನಕ್ಕುಂ ತರದಿಂ ॥ ೮ ॥

ಧನುವಿನೊಳಿರೆ ಚಂದ್ರಂ ಶಶಿ ।
ತನಯಾದಿತ್ರಿತಯ ದೃಷ್ಟಿಯೆಂಬುದನಧಿಕಾ ॥
ವನಿಪತಿ ಜನಾಶ್ರಯಂ ಕ್ರೂ ।
ರನಿರೀಕ್ಷಣದಿಂದೆ ಕುಟಿಳನುಂ ಶಠನುಮವಂ ॥ ೯ ॥

ಶತಪತ್ರಶತ್ರು ಮಕರ ।
ಸ್ಥಿತನಾಗೆ ಕುಜಾದಿಗಳ್ ನಿರೀಕ್ಷಿಸೆ ಧಾತ್ರೀ ॥
ಪತಿಸಕಳ ಮಹೀಪತಿ ಭೂ ।
ಪತಿ ಬುಧನರ್ಥೇಶನಲ್ಪವಿತ್ತನೆನಿಕ್ಕುಂ ॥ ೧೦ ॥

ಹರಿಣಾಂಕಂ ಕುಂಭದೊಳಿರೆ ।
ಹರಿಣಾಂಕಜ ಗುರುಸಿತರ್ ನಿರೀಕ್ಷಿಸೆ ಜನಪಂ ॥
ನರಪಸಮಂ ಪಾರ್ವಂ ಕ್ರೂ ।
ರರಭೀಕ್ಷಿಸೆ ತರದಿ ತತ್ಸಮಂ ಫಳಮಕ್ಕುಂ ॥ ೧೧ ॥

ತುಹಿನಾಂಶಂ ಕೂಡಿರೆ ಝಷ ।
ಗೃಹದೊಳ್ ಬುಧಜೀವ ಶುಕ್ರರೀಕ್ಷಿಸುವೊಡವಂ ॥
ಪ್ರಹಸನಶೀಲಂ ಮಹಿಪಂ ।
ಮಹಾಸ್ಪದಂ ಪಾಪದೃಷ್ಟಿಯಿಂ ಪಾಪಾತ್ಮಂ ॥ ೧೨ ॥

ಮ ॥ ದೊರೆಕೊಂಡಿರ್ದ ವಿಲಗ್ನಹೋರೆಗಿನನಕ್ಕಬ್ಜಾರಿಯಕ್ಕೀಶನಾ ।
ಗಿರೆ ತದ್ರಾಶಿಗಳಾಶ್ರಿತಗ್ರಹಸಮಾಜಂ ನೋಟ್ಪೊಡಾ ಹೋರೆಯೊಳ್ ॥
ಹರಿಣಾಂಕಂ ನಿಲೆ ಮೇಣ್ ವಿಲಗ್ನಭವನತ್ರ್ಯಂಶಾಧಿಪಂ ತತ್ಸುಧಾ ।
ಕರನಂ ನೋಟ್ಪೊಡೆ ತತ್ತ್ರಿಯಾಂಶಗತನಂ ತಜ್ಜಾತಕಂ ಶೋಭನಂ ॥ ೧೩ ॥

ಕಂ ॥ ಮಿತ್ರಕ್ಷೇತ್ರದೊಳುತ್ಪಲ ।
ಮಿತ್ರಂ ನಿಲೆ ತತ್ತುಷಾರರುಚಿಯಂ ಮಿತ್ರ ॥
ಕ್ಷೇತ್ರದೊಳೊಡಗೂಡಿದ ಶತ ।
ಪತ್ರಸಖಾದಿಗ್ರಹಂಗಳೀಕ್ಷಿಸೆ ಶುಭದಂ ॥ ೧೪ ॥

ಶಿಶಿರಕರನೆಲ್ಲಿ ನಿಂದೊಡ ।
ಮತಿಶಿರ ಕಿರಣಾದಿಗಳ್ ನಿರೀಕ್ಷಿಪೊಡೆ ಫಳಂ ॥
ಶತಲಕ್ಷ್ಮನಿರೆ ನಿಜದ್ವಾ ।
ದಶಭಾಗದೊಳಾವಗ್ರಹದೊಳುಂ ದೊರೆಕೊಳ್ಗುಂ ॥ ೧೫ ॥

1. ಟ್ಟಿ



ಕಂ ॥ ದಿನಪಾಂಶದೊಳಿರೆ ಹಿಮಕರ ।
ನಿನಾದಿಗಳ್ ನೋಡೆ ಪುಟ್ಟಿದಂ ತರದಿಂ ಗೋ ॥
ಪನನವನಿಪಪ್ರಿಯಂ ಬಹು ।
ಧನಾನ್ವಿತಂ ಪ್ರಭು ನಿರಾತ್ಮಜಂ ವಧಶೀಲಂ ॥ ೧೬ ॥

ಇರೆ ಶಶಿ ನಿಜಾಂಶದೊಳ್ ನೋ ।
ಡೆ ರವಿಪ್ರಭೃತಿಗ್ರಹಂ ಕೃಶಂ ಲೋಭಿ ಮುನೀ ॥
ಶ್ವರಮುಖ್ಯಂ ಸ್ತ್ರೀಪ್ರೇಷ್ಯಂ ।
ಪರವಂಚನಶೀಲನೆನಿಸುಗುಂ ಪುಟ್ಟಿದವಂ ॥ ೧೭ ॥

ಧರಣಿಸುತಾಂಶಕದೊಳ್ ಹಿಮ ।
ಕರನಿರೆ ಸೂರ್ಯಾದಿಗಳ್ ನಿರೀಕ್ಷಿಸೆ ರಕ್ತಾ ॥
ನಿರತಂ ಮಧುರುಚಿಮಲ್ಲಂ ।
ನರೇಂದ್ರನರ್ಥಪತಿ ಕಲಹಕಾರಿಯೆನಿಕ್ಕುಂ ॥ ೧೮ ॥

ಕುವಲಯಸಖನೊಂದಿದೊಡ್ಯೆಂ ।
ದವಾಂಶದೊಳಿನಾದಿಗಳ್ ನಿರೀಕ್ಷಿಸೆ ನೃತ್ಯ ॥
ಪ್ರವೀಣಂ ಚೋರಕವಿಮಂ ।
ತ್ರವೇದಿ ಗೀತವಿದನಖಿಳಶಿಲ್ಪಿಯೆನಿಕ್ಕುಂ ॥ ೧೯ ॥

ಅಮರೇಜ್ಯಾಂಶದೊಳಿರೆ ಚಂ ।
ದ್ರಮನರ್ಕಾದಿಗಳ್ ವೀಕ್ಷಿಪಂದಧಿಕಬಳಂ ॥
ಸಮರಕರಂ ಪ್ರಹಸನಶೀ ।
ಲಂ ಮಂತ್ರಿ ಪಡಪಾಳಿಯಧಿಕಕಾಮಿಯೆನಿಕ್ಕುಂ ॥ ೨೦ ॥

ಕವಿಯಂಶದೊಳುಡುಪತಿ ನಿಲೆ ।
ದಿವಾಕರಾದಿಗ್ರಹಂಗಳೀಕ್ಷಿಸೆ ಜಡನ ॥
ನ್ಯವಧೂಲೋಲಂ ನುತ ಸ ।
ತ್ಕವಿಸುಖಿ ಪರದಾರಶೀಲನೆನಿಕುಂ ಮನುಜಂ ॥ ೨೧ ॥

ಪೃಥ್ವೀ ॥ ಕ್ಷಪಾಕರನಿನಾತ್ಮಜಾಂಶಗತನಾಗೆ ನೋಡಲ್ದಿನಾ ।
ಧಿಪಪ್ರಭೃತಿ ಸದ್ಗ್ರಹಂಗಳವನಲ್ಪ ಪುತ್ರಂ ಸುಖಂ ॥
ವ್ಯಪೇತಧನಭಾಗಿ ದಾನರತನಾತ್ಮಕರ್ಮಾನುರಾ ।
ಗಿ ಪಾರದರಿಗಂ ಮಹಾಕೃಪಣನಕ್ಕುಮಾಲಗ್ನಜಂ ॥ ೨೨ ॥

ಕಂ ॥ ತುಹಿನಪ್ರದ್ಯೋತಾದಿ ।
ಗ್ರಹಾಂಶದೊಳ್ ಪಂಕಜಪ್ರಿಯಂ ನೆಲಸಿರೆ ತ ॥
ದ್ಗ್ರಹಗಣಮೀಕ್ಷಿಸಿದ ಫಳಂ ।
ತುಹಿನಾಂಶುಗೆ ಮುನ್ನೆ ಪೇಳ್ದ ಫಲದವೊಲಕ್ಕುಂ ॥ ೨೩ ॥

ಕಂ ॥ ವಿಧುವಿರ್ದ ನವಾಂಶವರ್ಗ ।
ದಧಿಪತಿ ಬಳವಂತನಾದೊಡಂತಕಫಳಮು ॥
ಪ್ಪಧಿಕಂ ಗೃಹಪತಿ ವೀರ್ಯಾ ।
ಭ್ಯಧಿಕನೆನಿಪಂದು ರಾಶಿಫಳಮುಪ್ಪಧಿಕಂ ॥ ೨೪ ॥

ಕ್ರಮದಿಂ ಬರ್ಕುಂ ವರ್ಗೋ ।
ತ್ತಮಾಂಶನಿಜಪರಗೃಹಂಗಳೊಳ್ ಪುಷ್ಟಂ ಮ ॥
ಧ್ಯಮನಲ್ಪಂ ಶುಭಫಲಮು ।
ತ್ಕ್ರಮದಿಂದಂ ಬರ್ಕುಮಶುಭಫಲಮಂತ[1]ವಱೊಳ್ ॥ ೨೫ ॥

ಮ ॥ ಹರಿಣಾಂಕಾಶ್ರಿತಮಂದಿರಾಧಿಪತಿ ನೋೞ್ಪಂದಿಂದುವಂ ಭೂಪನಾ ।
ನರನಾಳೋಕಿಸೆ ತದ್ಗೃಹಾಧಿಪತಿ ಮಿತ್ರಂ ಚಂದ್ರನಂ ಮೇಣ್ ಸುಧಾ ॥
ಕರನಿರ್ದಂಶಮನಕ್ಕೆ ತದ್ವಿಧುಗೆ ತದ್ದ್ರೇಕ್ಕಾಣಮಂ ಮೇಣ್ ತದೀ ।
ಶ್ವರ ಸೌಮ್ಯರ್ ನಡೆ ನೋಡೆ ವೀಕ್ಷಿಸಿದೊಡನ್ಯರ್ಧನ್ಯನಾಮಾನವಂ ॥ ೨೬ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ದೃಷ್ಟಿಪ್ರಕರಣ ವರ್ಣನಂ
**ವಿಂಶತ್ಯಧಿಕಾರಂ**

1. ದ

# ಏಕವಿಂಶತ್ಯಧಿಕಾರಂ

## ಅರಿಷ್ಟಯೋಗಪ್ರಕರಣ ವರ್ಣನಂ

ಚಂ ॥ ತುಹಿನಕರಂಗೆ ಮೇಣುದಯರಾಶಿಗೆ ಸಪ್ತಮಮಂದಿರಂ ಶುಭ ।
ಗ್ರಹಗೃಹಮಾಗೆ ತತ್ಪತಿ ನಿರೀಕ್ಷಿಸೆ ಕೂಡಿರೆ ಮೇಣ್ ಕುಲಾಂಗನಾ ॥
ಸಹಿತವನಕ್ಕೆ ಪಂಚಮದೊಳಾತೆಱನಾಗಿರೆ ಪುತ್ರಭಾಗಿ ತ ।
ದ್ಗೃಹಿತನೆನಿಪ್ಪೊಡಾತ್ಮಜಕುಳಪ್ರಮದಾರಹಿತಂ ವಿಲಗ್ನಜಂ ॥ ೧ ॥

ಕಂ ॥ ಬರೆ ಕನ್ಯಾಲಗ್ನಂ ಭಾ ।
ಸ್ಕರನಲ್ಲಿರೆ ಮೀನದೊಳ್ ಶನೈಶ್ಚರನಿರೆ ಸುಂ ॥
ದರಿ ಸಾಯ್ಗುಮುದಯದಯ್ದನೆ ।
ಯ ರಾಶಿಯೊಳ್ ಭೂಸುತನಿರೆ ತನುಜಂ ಸಾಯ್ಗುಂ ॥ ೨ ॥

ಮ ॥ ಅಸುರೇಂದ್ರಾರ್ಚಿತನಿಂದಮಷ್ಟಮಚತುರ್ಥಕ್ಷೇತ್ರದೊಳ್ ಕೂಡಿದಂ ।
ದು ಸದನ್ಯಗ್ರಹಮಲ್ಲದಂದು ಭೃಗುಜಂಗಿರ್ಬಕ್ಕದೊಳ್ ಕೂಡಿದಂ ॥
ದು ಸದನ್ಯಗ್ರಹಮಲ್ಲಿ ಸದ್ಗ್ರಹಸಮಾಜಂ ಕೂಡದಿರ್ದಂದು ವೀ ।
ಕ್ಷಿಸದಂದಾತನ ಕಾಂತೆ ಪಾಶಪತನಾಗ್ನಿಪ್ರಾಪ್ತಿಯಿಂ ಪೊಂದುಗುಂ ॥ ೩ ॥

ಕಂ ॥ ಖರಕರನುದಯಕ್ಕಾಱನೆ ।
ಯ ರಾಶಿಯೊಳ್ ಶೀತಕಿರಣನಾಹೋರೆಗೆ ಪ ॥
ನ್ನೆರಡನೆಯೊಳಿರ್ದೊಡಂ ಕ ।
ಣ್ಗುರುಡರ್ ಸ್ತ್ರೀಪುರುಷರಪ್ಪರೆಂಬುದು ತಜ್ಞಂ ॥ ೪ ॥

ಮ ॥ ಭೃಗುಸೂರ್ಯರ್ ನಿಲೆ ಸಪ್ತಮಾವಸಥದೊಳ್ ಮೇಣ್ ತ್ರಿತ್ರಿ
ಕೋಣರ್ಕ್ಷದೊಳ್ ।
ಭೃಗುಜಂ ಪಂಚಮದೊಳ್ ಖರಾಂಶು ವಿಕಳಸ್ತ್ರೀನಾಥನಾಲಗ್ನಮಂ ॥
ಭೃಗುಜಾಮಿತ್ರ ಗೃಹಾಂತ್ಯದೊಳ್ ರವಿ ವಿಲಗ್ನಸ್ಥಾನದೊಳ್ ಕೂಡೆ ಸೌ ।
ಮ್ಯಗಣಂ ಪಂಚಮಸಂಸ್ಥರಾದರಿರೆ ವಂಧ್ಯಾ ಸ್ತ್ರೀವರಂ ತನ್ನರಂ ॥ ೫ ॥

ಶಾ ॥ ಕ್ರೂರದ್ವಾದಶ ಸಪ್ತಮೋದಯದೊಳೊಂದಿರ್ದಂದತಿಕ್ಷೀಣನಾ ।
ತಾರೇಶಂ ಸುತಲಾಭಲಗ್ನಗೃಹದೊಳ್ ಬಂದೊಂದದಿರ್ದಂದು ಮೇಣ್ ॥
ಸೌರ್ಯಂಗಾರಕವರ್ಗಸಂಸ್ಥಿತಸಿತಂ ಧಾತ್ರೀತನೂಜಾತನಂ ।
ಸೂರ್ಯಾಪತ್ಯನನಕ್ಕೆ ವೀಕ್ಷಿಸೆ ಪರಸ್ತ್ರೀಲೋಲನಾಮಾನವಂ ॥ ೬ ॥

ಕಂ ॥ ಕ್ಷಿತಿಜಾರ್ಕಜ ಮಧ್ಯದೊಳುಡು ।
ಪತಿ ನಿಲೆ ತದ್ವರ್ಗಸಪ್ತಮಸ್ಥಾನದೊಳಾ ॥
ಸಿತನಿರ್ದು ನೋಡಲಾದಂ ।
ಪತಿಗಳ್ ವ್ಯಭಿಚಾರಶೀಲರಿರ್ಬರುಮಪ್ಪರ್ ॥ ೭ ॥

ಮ॥ ಸ್ರ॥ ತುಹಿನಪ್ರದ್ಯೋತನುಂ ಶುಕ್ರನುಮೊಡನಿರೆ ಜಾಮಿತ್ರದೊಳ್ ಪುಣ್ಯಕಾಂತಾ।
ರಹಿತಂ ಮೇಣ್ ಪುತ್ರಹೀನಂ ದ್ಯುನಗ್ರಹಮುದಘಂ ರಾಶಿಯಾದಂದು ಪಾಪ॥
ಗ್ರಹಮಂತಾರಾಶಿಯಂ ನೋಟ್ಪೊಡೆ ಕೃಶತನುವಕ್ಕುಂ ನರಂ ತದ್ಗ್ರಹಸ್ತ್ರೀ।
ಗ್ರಹಮಾಡಂದುಗ್ರರಾಳೋಕಿಸೆ ಕೃಶತನು ತತ್ಕಾಂತೆಯುಕ್ಕುಂ ನಿತಾಂತಂ ॥ ೮ ॥

ಕಂ॥ ಸಿತನಸ್ತದೊಳಿರೆ ರಜನೀ।
ಪತಿ ಪತ್ತಱೊಳೊಂದಿ ನಿಲೆ ಶುಭೇತರದೊಡಗೂ॥
ಡೆ ತೂರ್ಯದೊಳಾಲಗ್ನೋ।
ದ್ಗತಮನುಜಂ ಸ್ವಕುಲದೂಷಣಂ ತಾನೆನಿಕುಂ ॥ ೯ ॥

ಮ॥ ಮೃಗಲಕ್ಷ್ಮಾತ್ಮಜನೊಂದಿದಂದು ಮೊದಲದ್ರೇಕ್ಕಾಣದೊಳ್ ಕೂಡಿದಂ।
ತಗಜಂ ಕೇಂದ್ರ ಗೃಹಂಗಳಲ್ಲಿ ಮೊದಲದ್ರೇಕ್ಕಾಣದೊಳ್ ಕೂಡೆ ದಾ॥
ಸಿ[ಗೆ ರಿಪ್ಪಂ] ಸಿತನಂತ್ಯಗೇಹದ ಸಿತದ್ರೇಕ್ಕಾಣದೊಳ್ ಕೂಡಿದಂ।
ದೊಗೆದಂ ನೀಚನವೋಘಮೆಂಬುದವನಂ ಸಮ್ಯಕ್ತ್ವರತ್ನಾಕರಾ ॥ ೧೦ ॥

ರವಿಚಂದ್ರರ್ ನೆಲಸಿರ್ದೊಡನ್ಯಗೃಹದೊಳ್ ಸೂರ್ಯಾತ್ಮಜಂ ನೋಡೆ ಮೇ।
ಣವನೀಜೋಶನರಿರ್ದೊಡಸ್ತಗೃಹದೊಳ್ ಪಾಪಗ್ರಹಂ ನೋಡೆ ಸಂ॥
ಭವಿಕುಂ ಪಿಪ್ರಜಿತಂ ನರಂಗಳಿಕುಳೀರಾಂಶಂಗಳೊಳ್ ರೋಹಿಣೀ।
ಧವನುಗ್ರಗ್ರಹಯುಕ್ತನಾಗಿ ನಿಲೆ ಲಿಂಗವ್ಯಾಧಿಯಿಂ ಬರ್ದುಗುಂ ॥ ೧೧ ॥

ಚಂ॥ ಉದಯದೊಳಿಂದು ಅಸ್ತದೊಳಿನಂ ಶನಿ ಪಂಕಜಮಿತ್ರನಿಂ ದ್ವಿತೀ।
ಯದೊಳಿರೆ ಮೇಣ್ ತುಷಾರರುಚಿ ಪತ್ತಱೊಳರ್ಕಜನಿಂ ದ್ವಿತೀಯ ಗೇ॥
ಹದೊಳವನೀಜನಸ್ತಗೃಹದೊಳ್ ನಿಲೆ ಮೇಣ್ ದ್ವಿತೀಯ ರಿ।
ಪ್ಪದೊಳಿರೆ ತದ್ಗ್ರಹೇತರಗಣಂ ಸಿತಕುಷ್ಠಸಮೇತನಾ ನರಂ ॥ ೧೨ ॥

ಕಂ॥ ವಿಸರುಹಸಖನಿರೆ ಮಕರದೊ।
ಳಸದ್ಗ್ರಹಂ ದ್ವಿತಯಮಿರೆ ನಿಶಾನಾಥಂಗಿ॥
ರ್ದೆಸೆಯೊಳ್ ಮನುಜಂ ಪ್ಲೀಹ।
ಸ್ವಸನಕ್ಷಯಗುಲ್ಮವಿದ್ರಧಿವ್ಯಾಧಿಯುತಂ ॥ ೧೩ ॥

ಖರಕಿರಣಂ ಚಂದ್ರಾಂಶದೊ।
ಳಿರೆ ಚಂದ್ರಂ ಖರಕರಾಂಶದೊಳ್ ನೆಲಸಿರೆ ಕೋ॥
ಪರುಜಾರ್ಥಂ ರವಿಶಶಿಗಳ್।
ಪರಸ್ಪರಾಯದೊಳಿರಲ್ ಕೃಶಾಂಗಂ ಮನುಜಂ ॥ ೧೪ ॥

ಮ॥ ಹಿಮಧಾಮಂ ನಿಲೆ ಚಾಪಮಧ್ಯಪದದೊಳ್ ಮೇಣ್ ಕರ್ಕಿಮೇಷಾನಿಮೇ।
ಷಮೃಗಾಂಕಾಂಶದೊಳರ್ಕಮಂದಕುಜಯುಕ್ತಂ ಮೇಣವರ್
ನೋಡೆ ಮೇಣ್॥
ಸಮನಿಪ್ಪಂದುದಯಕ್ಕೆ ಪಂಚಮನವಸ್ಥಾನಂಗಳೊಳ್ ಕರ್ಕಟಾ।
ಳಿಮೃಗಾಕ್ಕೋರ್ದಯಮುಗ್ರರೊಂದಿದೊಡವರ್ ಮೇಣ್ ಕೂಡೆ
ತೊನ್ನಂ ನರಂ ॥ ೧೫ ॥



ಕಂ॥ ಜಳಜಪ್ರಿಯ ರವಿಜ ಕುಜೋ।
ತ್ಪಳಪ್ರಿಯರ್ ನಿಧನಧನರಿಪುವ್ಯಯಗೃಹದೊಳ್॥
ನೆಲಸಿರೆ ದೊರೆಕೊಂಡೆಡೆಯೊಳ್।
ಬಳವದ್ಗ್ರ[1]ಹಕ್ಕೆ ತ[1]ದೋಷದಿಂ ಕಣ್ಗಿಡುಗುಂ ॥ ೧೬ ॥

ಸಹಜಾಯನನವಪಂಚಮ।
ಗೃಹದೊಳ್ ಪಾಪಗ್ರಹಂಗಳೊಡಗೂಡೆ ಶುಭ॥
ಗ್ರಹಮೀಕ್ಷಿಸಿದಂದುದಯಿಸಿ।
ದ ಹೋರೆಯೊಳ್ ಪುಟ್ಟಿದಾತನಕ್ಕುಂ ಕಿವುಡಂ ॥ ೧೭ ॥

ಮ॥ ಗುರುಲಗ್ನಸ್ಥಿತನಾಗೆ ಸಪ್ತಮದೊಳಾರಂ ಕೂಡೆ ಮೇಣ್ ಲಗ್ನದೊಳ್।
ತರಣಿಪ್ರೋದ್ಭವನಸ್ತಪಂಚನವಮ ಸ್ಥಾನಂಗಳೊಳ್ ಭೌಮ ಭಾ॥
ಸ್ಕರಿಗಳ್ ಕೂಡಿರೆ ಮೇಣ್ ತ್ರಿಕೋಣಗೃಹದೊಳ್ ಪಾಪಗ್ರಹಂಗಳ್ ಸುಧಾ।
ಕಿರಣಂ ಕರ್ಕಿವಿಲಗ್ನದೊಳ್ ನಿಲೆ ಪಿಶಾಚಪ್ರಾಪ್ತನಕ್ಕುಂ ನರಂ ॥ ೧೮ ॥

ಸರಸೀಜಾತನ ಮಿತ್ರನಿಂ ಗ್ರಹಣಕಾಲಂ ಕೂಡೆ ಲಗ್ನಸ್ಥನಾ।
ಗಿರೆ [2]ಮರ್ತ್ಯಂ ಜನನಾಂಧನಕ್ಕುಮಮರಾಧೀಶಾರ್ಚಿತಂ ಲಗ್ನದೊಳ್॥
ಸರಸೀಜಪ್ರಿಯನೇೞಱೊಳ್ ನೆಲಸೆ ವಾ[3]ತೋವೇಧಿಯಕ್ಕುಂ ಶುಭೇ।
ತರರಸ್ತಸ್ಥಿತರಾಗೆ ಕಾಣದಿರೆ ಸೌಮ್ಯರ್ ದಂತರೋಗಾನ್ವಿತಂ ॥ ೧೯ ॥

ಕಂ॥ ಪಾಪಗ್ರಹಮುದಯದೊಳಿರೆ।
ಪಾಪೇಕ್ಷಣಮಾಗೆ ತಱಟಿಯಕ್ಕುಂ ಲಗ್ನಂ॥
ಚಾಪಮೃಗಮೇಷಮಾಗಿರೆ।
ಪಾಪಾಳೋಕನದೆ ವಿಕೃತದಂತನೆನಿಕ್ಕುಂ ॥ ೨೦ ॥

ಮ॥ ಇನಲಗ್ನಾಂಶುಪತೀಂದುಜೀವರೆನಿಪಾನಾಲ್ಕುಂ ಗ್ರಹಂ ನೀಚ ಶ।
ತ್ರುನಿವಾಸಂಗಳೊಳಾ ನವಾಂಶಕದೊಳೊಂದಿರ್ದಂದು ತೊಟ್ರಿಕ್ಕೆ ಜಾ॥
ತನರಂ ತ್ರಿಗ್ರಹಮಲ್ಲಿರಲ್ ಬೆಸಲೆಗೊಂಡರ್ ಗಂಡನುಂ ಗಂಡುದೊ।
ಱ್ತೆನಿಕುಂ ದ್ವಿಗ್ರಹಮೊಂದಿ ನಿಂದೊಡವಱೊಳ್ ವಾಙ್ಮಾತ್ರದಿಂದ
ರ್ಥಮಂ ॥ ೨೧ ॥

ಮ॥ ಸ್ರ॥ ನವಮಂ ಮೇಣ್ ಪಂಚಮಂ ಶಾಕ್ವರಧನುವೆನಿಪೊಂದಲ್ಲಿ ನಿಂದಂದಿನಂ
ನೋ।

616

ಡುವೊಡುಗ್ರರ್ ಕಾಕನೇತ್ರಂ ಮನುಜನೆನಿಕುಮಲ್ಲಿರ್ದೊಡುರ್ವೀಸುತಂ
ನೋ॥
ಡುವೊಡುಗ್ರರ್ ತನ್ಮನುಷ್ಯಂ ವಿಕಟನೆನಿಕುಮಲ್ಲಿರ್ದೊಡರ್ಕಾತ್ಮಜಂ ನೋ।
ಡುವೊಡುಗ್ರರ್ ತದ್ವಿಲಗ್ನೋದ್ಭವನಖಿಳರುಜಾಬಾಧೆಯಿಂ ಬರ್ದು
ತಿರ್ಕುಂ ॥ ೨೨ ॥

---

1. ಗಧಿಕ 2. ಧೂರ್ತಂ 3. ತವ್ಯಾಧಿ

ಮ ॥ ಹರಿಣಾಂಕಾರ್ಕಜರಿರ್ದೊಡೊಂದೆ ಗೃಹದೊಳ್ ನೋೞ್ಪಿಂದು
ಧಾತ್ರೀಸುತಂ ।
ದೊರೆಕೊಳ್ಗುಂ ಮೊಲೆ ನಾಗನಿಂದುಗೃಹದೊಳ್ ನಿಂದಂದು ಸೂ
ರ್ಯೋಂದುಗಳ್ ॥
ಪರಿವೇಷಂ ದೊರೆಕೊಂಡೊಡಲ್ಲಿ ಮನುಜಂಗಕ್ಕುಂ ಕ್ಷಯವ್ಯಾಧಿ ಭಾ ।
ಸ್ಕರಪುತ್ರೋತ್ಪಳಮಿತ್ರರೊಂದಿ ನಿಲೆ ವಾಕ್ಪಾರುಷ್ಯದೊಳ್ ಕೂಡುಗುಂ ॥ ೨೩ ॥

*ವಸುಧಾನಂದನಸೂರ್ಯರೊಂದಿ ನಿಲೆ ಕರ್ಮಸ್ಥಾನದೊಳ್ ಸೌಮ್ಯರೀ ।
ಕ್ಷಿಸದಿರ್ದಂದು ವಿಲಗ್ನಸಂಜನಿತಮರ್ತ್ಯಂ ಭೃತ್ಯವರ್ಗೋತ್ತಮಂ ॥
× × × × ×
× × × × × ॥ ೨೪ ॥

ಧನಧರ್ಮಾಂತ್ಯತನೂಜಮಂದಿರದೊಳುಗ್ರರ್ ಕೂಡಿ ನಿಂದಂದು ಬಂ ।
ಧನಮಾಮಂದಿರದಂದದಿಂ ಸಮನಿಕುಂ ಮರ್ತ್ಯಂಗೆ ಪಾಪಾವಳೀ ॥
ಕನಮಾದಂದು ಭುಜಂಗಪಾಶನಿಗಳದ್ರೇಕ್ಕಾಣದೊಳ್ ತೀವ್ರ ಬಂ ।
ಧನಮಾತ್ರ್ಯಂಶದ ಮಾೞ್ಕೆಯಿಂ ಸಮನಿಕುಂ ದೇವೇಂದ್ರನುಂ
ಕಾವೊಡಂ ॥ ೨೫ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ಅರಿಷ್ಟಯೋಗಪ್ರಕರಣ ವರ್ಣನಂ
**ಏಕವಿಂಶತ್ಯಧಿಕಾರಂ**

~~~~~~~~

*ಎರಡು ಸಾಲುಗಳಿಲ್ಲ.

## ದ್ವಾವಿಂಶತ್ಯಧಿಕಾರಂ

### ಸ್ತ್ರೀಜಾತಕಫಲಪ್ರಕರಣ ವರ್ಣನಂ

ಕಂ ॥ ಪುರುಷಸ್ತ್ರೀಜಾತಕಫಲ ।
ಮೆರಡುಂ ಸಮನುದಯಮೃಗಧರರ್ ಬಳಯುತರಾ ॥
ಗಿರೆ ವಪುರಾಕೃತಿಗಳನ ।
ಸ್ತ್ರರಾಶಿಬಳದಿಂದಮಱಿವುದಾಕೆಯ ಸೊಬಗಂ ॥ ೧ ॥

ಚಂ ॥ ಉದಯಮುಮಿಂದುವಿರ್ದಗೃಹಮುಂ ಸಮಮಂದಿರಮಾಗೆ ಸಾಧು ಪು ।
ಟ್ಟಿದ ವಧು ಸದ್ಗ್ರಹಂಗಳವನೀಕ್ಷಿಸೆ ಶೀಲವಿಭೂಷಣಾಢ್ಯೆ ಮೇ ॥
ಣುದಯಮುಮಿಂದುಮಿರ್ದಗೃಹಮುಂ ವಿಷಮಂ ಬರೆ ಗಂಡಗಾಡಿ ದುಃ ।
ಖದ ಕಣಿಯಕ್ಕುಮುಗ್ರರಿರೆ ಮೇಣವಲೋಕಿಸೆ ಕಷ್ಟೆ ನಿಶ್ಚಯಂ ॥ ೨ ॥

ಮ ॥ ಧರಣೀನಂದನಗೇಹದೊಳ್ ಧರಣಿಜ ತ್ರಿಂಶಾಂಶಕಂ ಲಗ್ನವಾ ।
ಗಿರೆ ದೋಷಾಕರನಲ್ಲಿ ಕೂಡೆ ಕೊಡಗೂಸಾಗಿರ್ದು ನಾೞ್ಜೋಡೆ ಭಾ ॥
ಸ್ಕರಪುತ್ರಾಂಶದೊಳಾಕೆ ತೊೞ್ತು ಸುರನಾಥೇಜ್ಯಾಂಶದೊಳ್ ಸಾಧ್ವಿ ಪಂ ।
ಕರುಹಾರಾತಿಸುತಾಂಶದೊಳ್ ಕಪಟಿ ದುಶ್ಚಾರಿತ್ರೆ ಶುಕ್ರಾಂಶದೊಳ್ ॥ ೩ ॥

ದಿತಿಜೇಜ್ಯಾಳಯ ಲಗ್ನದೊಳ್ ಮಹಿಸುತ ತ್ರಿಂಶಾಂಶಕಂ ನಿಂದೊಡ ।
ಲ್ಲಿ ತುಷಾರದ್ಯುತಿ ಕೂಡಿದಂದು ಸತಿ ದೈತ್ಯೇಜ್ಯಾಂಶದೊಳ್ ಖ್ಯಾತೆ ಚಂ ॥
ದ್ರತನೂಜಾಂಶಕದೊಳ್ ಕಳಾಕುಶಳೆ ಶಕ್ರೇಜ್ಯಾಂಶದೊಳ್ ಸದ್ಗುಣಾ ।
ನ್ವಿತೆಯಕ್ಕುಂ ಮಱುವಾೞ್ತೆ ತಾನೆನಿಸುಗುಂ ಘರ್ಮಾಂಶು ಪುತ್ರಾಂಶ
ಶದೊಳ್ ॥ ೪ ॥

ಬರೆಲಗ್ನಂ ಶಶಿಸೂನುಗೇಹದ ಕುಜತ್ರಿಂಶಾಂಶದೊಳ್ ರೋಹಿಣೀ ।
ವರನಲ್ಲಿರ್ದೊಡೆ ಗಾಳು ತಕ್ಕುದಱಿವಳ್ ಸೌಮ್ಯಾಂಶದೊಳ್ [1]ಪೇಡಿ ಭಾ ॥
ಸ್ಕರ ಪುತ್ರಾಂಶಕದೊಳ್ ಮಹಾಸತಿ ಸುರೇಂದ್ರೇಜ್ಯಾಂಶದೊಳ್ ಸುಚ್ಚರಿ ।
ತ್ರೆರತಾಸಕ್ತೆ ಸಿತಾಂಶದೊಳ್ ವನಿತೆಯಕ್ಕುಂ ಪದ್ಯವಿದ್ಯಾಧರಾ ॥ ೫ ॥

ಉಡುರಾಜಾಲಯದಲ್ಲಿ ಭೂಮಿತನಯ ತ್ರಿಂಶಾಂಶಕಂ ಲಗ್ನಮಾ ।
ದೊಡೆ ತಾರಾಧಿಪನಲ್ಲಿ ತತ್ಕುಲಟೆ ಲೋಕಸ್ತುತ್ಯೆ ಜೀವಾಂಶಮಾ ॥
ದೊಡೆ ಮಂದಾಂಶಕಮಾದೊಡಾತ್ಮಪತಿಯಂ ಕೊಲ್ಗುಂ ಸಿತಾಂಶಂವೊಲಾ ।
ದೊಡೆ ನಾೞ್ಜೋಡೆ ಬುಧಾಂಶಮಾದೊಡೆ ಕಳಾಸಂಪನ್ನೆಯಕ್ಕುಂ ವಲಂ ॥ ೬ ॥

ದಿನನಾಥಾಲಯಲಗ್ನದೊಳ್ ಕುಜಬುಧತ್ರಿಂಶಾಂಶಮಾದಂದು ಕೋ ।
ಕನದ ಪ್ರದ್ವಿಷನಲ್ಲಿ ಕೂಡೆ ಪುರುಷಾಚಾರಾಢ್ಯೆ ಜೀವಾಂಶದೊಳ್ ॥
ಜನನಾಥಾಂಗನೆ ಭಾರ್ಗವಾಂಶದೊಳಗಮ್ಯಾಸಕ್ತೆ ವಿತ್ತಾನುವ ।
ರ್ತಿನಿ ಮಾರ್ತಾಂಡಸುತಾಂಶದೊಳ್ ಪಸೆಯೊಳಿರ್ದಂತಾಕೆ
ಕೆಟ್ಟಾಡುಗುಂ ॥ ೭ ॥

1. ಪೀಡೆ
~~~~~~~~

ಮ ॥ ಅಸುರೇಂದ್ರೇಜ್ಯ ನಿವಾಸದಲ್ಲಿ ಕನಕಂ ತ್ರಿಂಶಾಂಶಕಂ ಲಗ್ನಮಾ ।
ಗೆ ನಿಶಾವಲ್ಲಭನಲ್ಲಿ ಕೂಡಿರೆ ಗುಣೌಘಾನ್ವಿತೆ ಜೀವಾಂಶದೊಳ್ ॥
ಜನಸಂಸ್ತುತ್ಯೆ ಸಿತಾಂಶದೊಳ್ ಸತಿ ಬುಧತ್ರಿಂಶಾಂಶದೊಳ್ ಜ್ಞಾನಭಾ ।
ಗಿನಿ ಮಂದಾಂಶದೊಳಾಕೆಯಲ್ಪರತಿಯಕ್ಕುಂ ಪದ್ಯವಿದ್ಯಾಧರಾ ॥ ೮ ॥

ಅಸಿತಕ್ಷೇತ್ರವಿಲಗ್ನದೊಳ್ ಬರೆ ಕುಜತ್ರಿಂಶಾಂಶಮಂತಲ್ಲಿ ಕೂ ।
ಡೆ ಸುಧಾಸಂಭವನಾವಿಲಗ್ನಭವೆ ತೊೞ್ತಿಕ್ಕುಂ ನಿಜಾಧೀಶ ಭ ॥
ಕ್ತೆ ಸುರೇಜ್ಯಾಂಶಕದೊಳ್ ದ್ವಿಪುತ್ರೆ ದಿತಿಪುತ್ರೇಜ್ಯಾಂಶದೊಳ್ ದುಷ್ಟ ಚೇ ।
ಷ್ಟೆ ಸುಧಾಜಾತಸುತಾಂಶದೊಳ್ ಕುಲವಿಹೀನಾಸಕ್ತೆ ಮಂದಾಂಶ
ದೊಳ್ ॥ ೯ ॥

ಕಂ ॥ ಉದಯಮುಮುಡುಪತಿಯುಂ ಕೂ ।
ಡಿದೊಡೇಕತ್ರಿಂಶದಂಶದೊಳ್ ದೊರೆಕೊಳ್ಗುಂ ॥
ಗದಿತಫಳಂ ನಿಲೆ ಪೆಱರಂ ।
ಶದೊಳುದಯಶಶಾಂಕರಲ್ಲಿ ಬಲ್ಲಿತೆ ಫಳದಂ ॥ ೧೦ ॥

ಚಂ ॥ ಜಳಜಸಖಾತ್ಮಜಾತಸಿತರಲ್ತೆ ಪರಸ್ಪರ ಸಪ್ತಮಾಲಯಂ ।
ಗಳೊಳೆ ಪರಸ್ಪರಾಂಶಕದೊಳೊಂದಿರೆ ಮೇಣ್ ಭೃಗುನಂದನಾಲಯಂ ॥
ಗಳೊಳೆ ಘಟಾಂಶದೊಳ್ ಕುಜಯಮರ್ ನಿಲೆ ಮೇಣ್ ಪುರುಷ
ಸ್ವಭಾವದಿಂ ।
ಲಳನೆ ಪರಸ್ಪರಂ ಲಲನೆಯೊಳ್ ನೆರೆಗುಂ ಸುಜನೈಕಬಾಂಧವಾ ॥ ೧೧ ॥

ಮ ॥ ದ್ಯುನಗೇಹಂ ಗ್ರಹಶೂನ್ಯಮುಂ ವಿಬಳಮುಂ ತಾನಾಗೆ ಮರ್ತ್ಯಾಧಮಂ ।
ವನಿತಾಭರ್ತೃವೆನಿಕ್ಕುಮೀಕ್ಷಿಸಲದಂ ಕ್ರೂರಗ್ರಹಂ ಭರ್ತೃ ಷಂ ॥
ಡನೆನಿಕ್ಕುಂ ಚರರಾಶಿಯೊಳ್ನೆಲಸೆ ಸೂರ್ಯಾಪತ್ಯನುಂ ಚಂದ್ರನಂ ।
ದನನುಂ ತದ್ವಧುವಿಂಗೆ ಭರ್ತೃವೆನಿಕುಂ ನಿತ್ಯಪ್ರವಾಸಾನ್ವಿತಂ ॥ ೧೨ ॥

ಚಂ ॥ ಇರೆ ರವಿಯೇೞಱೊಳ್ ಬಿಸುಡುಗಾರ್ತಿಯೆನಿಕ್ಕುಮಿಳಾತನೂಜನ ।
ಲ್ಲಿರೆ ಮೊಳೆಗಾಲರಂಡೆಯಕ್ಕುಮಿನನಲ್ಲಿರೆ ನೋಡಿದೊಡಾ ಶುಭೇ ॥
ತರಗಣಮಾಕೆ ಮತ್ತೆ ಕೊಡಗೂಸೆನಿಕ್ಕುಂ ಪಲರುಗ್ರರಲ್ಲಿ ಕೂ ।
ಡಿರೆ ವಧು ರಂಡೆಯಕ್ಕುಮಿರೆ ಮಿತ್ರರವಳ್ ಮಱುವಾೞ್ತೆ ನಿಶ್ಚಯಂ ॥ ೧೩ ॥

ಬಳರಹಿತೋಗ್ರನೇೞಱೆಡೆಯೊಳ್ ನಿಲೆ ವೀಕ್ಷಿಸಿದಂದು ಸದ್ಗ್ರಹಂ ।
ಲಲನೆಯೊಳೊಂದಿ ನಿಲ್ಲದೆ ಬಿಸುೞ್ಗುಮಧೀಶನಿಳಾತ್ಮಜಾರ್ಕಜಂ ॥
ನೆಲಸೆ ಪರಸ್ಪರಾಂಶದೊಳವಳ್ ಕಡುಜೋಡೆ ಕುಜೇಂದುಭಾರ್ಗವರ್ ।
ನೆಲಸೆ ಕಳತ್ರದೊಳ್ ಪತಿಯನನ್ಯರಿನನ್ಯಱೊಳಾಕೆ ಕೂಡುಗುಂ ॥ ೧೪ ॥



ಮ॥ ಸ್ರ॥ ವಸುಧಾಪುತ್ರಾರ್ಕಿಗೇಹೋದಯದೊಳಿರೆ ಶಶಾಂಕೋಶನಂ ಕ್ರೂರ
ರಾಳೋ ।
ಕಿಸೆ ತಾಯುಂ ತಾನುಮಪ್ಪರ್ ಕುಲಟೆಯರಿರೆ ಜಾಮಿತ್ರ ಸೌಮ್ಯಾಂ
ಶದೊಳ್ ಭಾ ॥
ನುಸುತಂ × × × × ×
× × ಮೇಣ್ ಕೂಡೆ ಸೌಭಾಗ್ಯದಕಣಿ ರುಚಿರಶ್ರೋಣಿ ತತ್ಕಾಂತೆ
ಯಕ್ಕುಂ ॥ ೧೫ ॥

ಕಂ ॥ ಇನಭವನಂ ಸವನಿಪೊಡೇ ।
ೞನೆಯೆಡೆಯೊಳ್ ಭಾಸ್ಕರಾಂಶಮುದಯಾಂಶಕ್ಕಾ ॥
ಱನೆಯೆಡೆಯೊಳ್ ಸವನಿಪೊಡತಿ ।
ಮೃದುತನುವುಂ ಕ್ಲೇಶಿಯೆನಿಕುಮಾಕೆಯ ಮದವಂ ॥ ೧೬ ॥

ಮ ॥ ಹಿಮಧಾಮಾಲಯಮೇೞಿರಲ್ಲಿ ಬರೆ ಮೇಣ್ ಚಂದ್ರಾಂಶಮಾದಂದು ಸ ।
ಪ್ತಮದೊಳ್ ಸ್ತ್ರೀವ್ಯಸನಾರ್ಥಿ ಕಾಮುಕನೆನಿಕ್ಕುಂ ಮಂದಗೇಹಾಂಶಮಂ ॥
ಕ್ರಮದೊಳ್ ಕೂಡಿರೆ ವೃದ್ಧನುಂ ಜಡನುಮಕ್ಕುಂ ಭೌಮಗೇಹಾಂಶಮಾ ।
ಕ್ರಮದೊಳ್ ಕೂಡಿರೆ ಕಾಂತೆಗಾದ ಪುರುಷಂ ಸ್ತ್ರೀಲೋಲುಪಂ
ಕೋಪನುಂ ॥ ೧೭ ॥

ಸಿತಗೇಹಂ ದೊರಕೊಂಡೊಡಸ್ತಗೃಹದೊಳ್ ಮೇಣ್ ಸಪ್ತಮಸ್ಥಾನದೊಳ್ ।
ಸಿತನಂಶಂ ಬರೆ ಕಾಂತನುಂ ಸುಭಗನುಂ ಗಂಡಂ ಬುಧಕ್ಷ್ಮಾಂಶಮಾ ॥
ಸ್ಥಿತಿಯೊಳ್ ಕೂಡಿರೆ ಪಂಡಿತಂ ನಿಪುಣನಕ್ಕುಂ ಜೀವಗೇಹಾಂಶವಾ ।
ಸ್ಥಿತಿಯೊಳ್ ಕೂಡೆ ಜಿತೇಂದ್ರಿಯಂ ಗುಣಿಯೆನಿಕ್ಕುಂ ತದ್ವಧೂಟೀವರಂ ॥ ೧೮ ॥

ಸಿತಸೋಮರ್ ನಿಲೆ ಲಗ್ನದೊಳ್ ಪೆಱರನೆಂತುಂ ಸೈರಿಸಳ್ ಸೌಮ್ಯನುಂ ।
ಸಿತನುಂ ಕೂಡಿರೆ ಚೆಲ್ವೆ ಜಾಣೆ ಸೊಬಗಿಂಗಾವಾಸಮಕ್ಕುಂ ಶಶೀಂ ॥
ದುತನೂಜರ್ ನಿಲೆ ಸದ್ಗುಣಾನ್ವಿತೆ ಕಳಾಸಂಪನ್ನೆ ಸೌಮ್ಯಗ್ರಹ ।
ತ್ರಿತಯಂ ಕೂಡಿರೆ ಭಾಗ್ಯಸೌಖ್ಯವತಿಯಕ್ಕುಂ ಕಾಂತೆ ನಿಭ್ರಾಂತಿಯಿಂ ॥ ೧೯ ॥

ಕಂ ॥ ಉದಯಕ್ಕೆಂಟನೆಯೊಳ್ ನೆಲ ।
ಸಿದೊಡುಗ್ರಂ ತದ್ಗೃಹೇಶನಾವಗ್ರಹದಂ ॥
ಶದೊಳೊಂದಿದನಂತಾಗ್ರಹ ।
ದದೆಸೆಯ ಫಳದೊಂದು ವಿಧವೆ ತದ್ವಧುಗಕ್ಕುಂ ॥ ೨೦ ॥

ಹರಿಕನ್ಯಾವೃಶ್ಚಿಕವೃಷ ।
ಭರಾಶಿಯೊಳ್ ಮೆಚ್ಚಿದಲ್ಲಿ ಕೂಡಿರೆ ದೋಷಾ ॥
ಕರನಲ್ಪಪುತ್ರಸದ್ಗ್ರಹ ।
ಮೆರ[1]ಡನೆಯೊಳ್ ನೆಲಸೆ ವನಿತೆಗಕ್ಕುಂ ಮರಣಂ ॥ ೨೧ ॥

---

1. ಡೆ

ಕಂ ॥ ಜಳಜಸಖಸೂನು ಮಧ್ಯಂ ।
ಬಳನೆನೆ ಬಳರಹಿ[1]ತರೆನೆ ಸಿತೇಂದುಜಶಶಿಗಳ್ ॥
ಬಳಯುಕ್ತರನ್ಯರೆನೆ ವಿಷ ।
ಮೈಳಗ್ನಮೆನೆ ವನಿತೆ ಪುರುಷಶೀಲೆಯೆನಿಕ್ಕುಂ ॥ ೨೨ ॥

ಮ ॥ ದನುಜೇಜ್ಯಜ್ಞ ಕುಜಾಂಗಿರಂ ಸಮ ವಿಲಗ್ನಕ್ಷೇತ್ರದೊಳ್ ಬಾಲ್ಯರಾ ।
ಗಿ ನಿರಾಬಾಧೆಯಿನಿರ್ದೊಡಾ ಸಕಳಶಾಸ್ತ್ರಪ್ರೀತೆಯುಂ ಬ್ರಹ್ಮವಾ ॥
ದಿನಿಯುಂ ಖ್ಯಾತೆಯುಮಕ್ಕುಮುಗ್ರರಿರೆ ಸಪ್ತಸ್ಥಾನದೊಳ್ ನಿಂದೊಡೆಂ ।
[2]ದೆನವಸ್ಥಾನದೊಳಾಗ್ರಹೋತ್ರಮಮುಮಾಸ್ತ್ರೀಗಕ್ಕುಮವ್ಯಾಜದಿಂ ॥ ೨೩ ॥

ಕಂ ॥ ಕೊಡಗೂಸನೆರೆಯ ಕೂಸಂ ।
ಕುಡು ಮದುವೆಗೆ ಯುವತಿಜಾತಕೋಚಿತ ಫಳಮಂ ॥
ಕುಡುವ ಶುಭಲಗ್ನಮಂ ಕುಡೆ ।
ಪಡೆಗುಂ ತತ್ಕಾಂತೆ ಪುತ್ರವಿತ್ತಾಢ್ಯತೆಯಂ ॥ ೨೪ ॥

ಮ ॥ ಪುರುಷಸ್ತ್ರೀಜನ ಜಾತಕಕ್ಕೆ ಫಲಮೊಂದಾಗಿರ್ದೊಡಂ ತತ್ಫಳೋ ।
ತ್ಕರದೊಳ್ ಭಾವಿಪೊಡಂಗನಾಜನಕೊಡಂಬಟ್ಟಿರ್ಪುದುರ್ಭೀತರೇ ॥
ತ್ವರನಾದ್ಯುತ್ತಮಲಾಭಮುಂ ವೃಷಣನಾಶಾದ್ಯಂಗಳುಂ ತದ್ವಧೂ ।
ವರನೊಳ್ ಕೂಡುಗುಮೆಂದು ಯೋಜಿಸುವುದರ್ಥೋತ್ಪತ್ತಿಯಿಂ
ತದ್ವಿಧಂ ॥ ೨೫ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ಸ್ತ್ರೀಜಾತಕಫಳಪ್ರಕರಣ ವರ್ಣನಂ
**ದ್ವಾವಿಂಶತ್ಯಧಿಕಾರಂ**

---

1. ತ್ರ 2. ದು

# ತ್ರಯೋವಿಂಶತ್ಯಧಿಕಾರಂ

## ನಿರ್ಯಾಣಪ್ರಕರಣ ವರ್ಣನಂ

ಮ ॥ ಬಳಯುಕ್ತಗ್ರಹಮಪ್ಪಮಾವಸಥಮಂ ನೋಲ್ಪಿಂದು ತದ್ದೋಷದಿಂ ।
ನಿಳಯೋಕ್ತಂಗಳೊಳಾಮಯಂ ಜನಿಯಿಕುಂ ತದ್ವ್ಯಾಧಿಯಿಂ ಕೂಡುಗುಂ ॥
ವಿಳಯಂ ತದ್ಗ್ರಹಮಂ ನಿರೀಕ್ಷಿಸೆ ಪಲರ್ ವೀರ್ಯಾನ್ವಿತರ್ [1]ಯ್ಯೋಗತರ್ ।
ಪಲರುಂ[1] ಕುತ್ತಮವುಂಕಿ ಪುಟ್ಟಿದ ನರಂ ಪಂಚತ್ವಮಂ ಪೊರ್ದುಗುಂ ॥ ೧ ॥

ಜಳಜಾತಪ್ರಿಯನೆಂಟಱೊಳ್ ನಿಲೆ ಮನುಷ್ಯಂ ಕಿಚ್ಚಿನಿಂ ಚಂದ್ರಮಂ ।
ನಿಲೆ ನೀರಿಂ ಮಹಿಜಾತನಲ್ಲಿ ನಿಲೆ ಶಸ್ತ್ರಾಘಾತದಿಂ ಸೋಮಜಂ ॥
ನಿಲೆ ಘೋರಜ್ವರದಿಂದೆ ಮಂತ್ರಿ ನಿಲೆ ನಾನಾರೋಗದಿಂ ಭಾರ್ಗವಂ ।
ನಿಲೆ ರಕ್ತಾಮಯದಿಂದೆ ಸೌರಿ ನಿಲೆ ಕ್ಷುದ್ರವ್ಯಾಧಿಯಿಂ ಪೊಂದುಗುಂ ॥ ೨ ॥

ಕಂ ॥ ಚರಗ್ರಹಮಪ್ಪಮಮಾ ।
ಗಿರೆ ಮಂಡಣದೊಳ್ ಸ್ಥಿರಾಲಯಂ ತದ್ಗ್ರಹಮಾ ॥
ಗಿರೆ ನಿಜಮಂಡಣದೊಳ್ ದ್ವ್ಯಂ ।
ಗರಾಶಿಯಾಗಿರೆ ತದೀಕ್ಷಮದಱೊಳ್ ಮಡಿಗುಂ ॥ ೩ ॥

ಕ್ಷಿತಿಜಂ ಪತ್ತಱೊಳಿನಜಂ ।
ಚತುರ್ಥದೊಳ್ ಚಂದ್ರನಸ್ತದೊಳ್ ನಿಲೆ ವಾಪೀ ॥
ಪತನದೆ ರವಿ ದಶಮದೊಳವ ।
ನಿತನೂಜಂ ಸುಖದೊಳಿರೆ ನಗಾಗ್ರದೆ ಮಡಿಗುಂ ॥ ೪ ॥

ಚಂ ॥ ಧರಣಿಜ ಗೇಹದೊಳ್ ನೆಲಸಿದಿಂದುವಿನಿರ್ಕೆಲದೊಳ್ ಶುಭಗ್ರಹೇ ।
ತರರಿರೆ ಶಸ್ತ್ರದಿಂದನಳನಿಂ ಮಡಿಗುಂ ನಿಲೆ ಕನ್ನೆಯೊಳ್ ಕುಜಂ ॥
ಹರಿಣಧರಂ ತುಲಾಯನದೊಳಿರ್ದೊಡೆರಟ್ಕೆಲದೊಳ್ ಶುಭಗ್ರಹೇ ।
ತರರಿರೆ ವಿತ್ತಹಾನಿಯಿನವಂ ಮತಿಗೆಟ್ಟು ದೆಸೆಗೆಟ್ಟು ಪೊಂದುಗುಂ ॥ ೫ ॥

ಕಂ ॥ ಜಳಜಪ್ರಿಯಸಖಗೃಹದೊಳ್ ।
ನಿಲೆ ಶಶಿಯಿರ್ಕೆಲದೊಳುಗ್ರರಿರೆ ಮೇಣ್ ಕ್ರೂರರ್ ॥
ನಿಲೆ ನವಪಂಚಮದೊಳ್ ನೋ ।
ಡಲೊಲ್ಲದಿರೆ ಸೌಮ್ಯರವಂ ಪಾತದಿ ಮಡಿಗುಂ ॥ ೬ ॥

ದಿವಸಕರನಕ್ಕಿಳಾಸಂ ।
ಭವನಕ್ಕಿರೆ ನಾಲ್ಕಱೊಳ್ ದಶಸ್ಥಾನಕದೊಳ್ ॥
ರವಿಸುತನಿರೆ ಶೂಲದೊಳಿ ।
ಕ್ಕುವರಾಲಗ್ನಪ್ರಸೂತನಂ ಪಾತಕನಂ ॥ ೭ ॥

---

1. ಯೋಗತಿ । ರ್ಪಲರುಂ

ಮ ॥ ನಿಗಳಂ ಮೇಣ್ ಫಣಿಪಾಶಮೆಂಬ ಪೆಸರಿಂ ದ್ರೇಕ್ಕಾಣಮಾದಂದು ಪೊಂ ।
ದುಗುಮಾಬಂಧನದಿಂದಮೇೞನೆಯ ಗೇಹಂ ಕನ್ನೆಯಾದಂದು ಸೀ ॥
ತಗು ಪಾಪಗ್ರಹಯುಕ್ತನಲ್ಲಿರೆ ಸುರೇಜ್ಯಂ ಮೇಷದೊಳ್ ಕೂಡೆ ತೀ ।
ಷ್ಣಗು ಲಗ್ನಸ್ಥಿತನಾಗೆ ಪೆಣ್ಣ ಕಥದಿಂ ಸಾಯ್ಗುಂ ನಿಜಾವಾಸದೊಳ್ ॥ ೮ ॥

ಇರೆ ಚಂದ್ರಂ ಮೃಗದೊಳ್ ಕುಳೀರದೊಳಿನಪ್ರೋದ್ಭೂತನಕ್ಕುಂ ಜಳೋ ।
[1]ದರದಿಂದಂ ಮರಣಂ ವಧೂಗೃಹದೊಳಿರ್ದಂದಿಂದು ಸೂರ್ಯಂ ಸುಭೇ ॥
ತರ ಸರ್ವೇಕ್ಷಣದಿಂದೆ ಬಂಧುಜನದಿಂ[2] ಸಾವಕ್ಕುಮಿಂದ್ವರ್ಕರೊಂ ।
ದಿರೆ ಮೀನೋದಯದೊಳ್ ನಿರೀಕ್ಷಿಸುವೊಡುಗ್ರರ್ ನೀರೊಳಕ್ಕುಂ
ಲಯಂ ॥ ೯ ॥

ಕನಕಂ ಹತ್ತರೊಳಬ್ಜಮಿತ್ರರಿರೆ ತೂರ್ಯಸ್ಥಾನದೊಳ್ ಕ್ಷೀಣ ಚಂ ।
ದ್ರನುಮರ್ಕೋದ್ಭವನುಂ ನಿರೀಕ್ಷಿಪೊಡೆ ಮೇಣ್ ಪಾಪಗ್ರಹಂ ಲಗ್ನಪಂ ॥
ಚನವಸ್ಥಾನಮೆನಿಪ್ಪ ಮೂಱಿಡೆಯೊಳೇಕಸ್ಥಾನದೊಳ್ ಕ್ಷೀಣ ಚಂ ।
ದ್ರನೊಳನ್ಯರ್ಕ್ಷದೊಳೊಂದಿ ತಾಂ ನಿಲಲು ಕಾಷ್ಠಾಪಾತದಿಂ
ಪೊಂದುಗುಂ ॥ ೧೦ ॥

ಕಂ ॥ ನಿಧನದೊಳಧಿಕ ಕ್ಷೀಣಂ ।
ವಿಧು ನಿಲೆ ರವಿತನಯನುದಯದೊಳ್ ಪತ್ತನೆಯೊಳ್ ॥
ರುಧಿರಂ ನಾಲ್ಕನೆಯೊಳ್ ರವಿ ।
ನಿಧನಂ ಮನುಜಂಗೆ ಮಕುಟಪಾತದಿನಕ್ಕುಂ ॥ ೧೧ ॥

ಕನಕಂ ನವಮದೊಳುದಯದೊ ।
ಳಿನಜಂ ಕ್ಷೀಣೇಂದು ದಶಮದೊಳ್ ಪಂಚಮದೊಳ್ ॥
ದಿನಪತಿ ನಿಲೆ ಗುರ್ದಿಂ ಬಂ ।
ಧನದಿಂ ಪೊಗೆಯಿಂದೆ ಅಗ್ನಿಯಿಂದಂ ಸಾಯ್ಗುಂ ॥ ೧೨ ॥

ರುಧಿರಂ ಸುಖದೊಳ್ ಶನಿ ದಶ ।
ಮದೊಳಂತಾ ಸೂರ್ಯನಸ್ತದೊಳ್ ನೆಲಸಿದೊಡಾ ॥
ಯುಧದಿಂದೆ ಹವಿರ್ಭುಜನಿಂ ।
ದೆ ಧರಾಪತಿ ಕೋಪದಿಂದೆ ಮನುಜಂ ಮಡಿಗುಂ ॥ ೧೩ ॥

ಇಂದು ನಿಲೆ ತೂರ್ಯಗೃಹದೊಳ್ ।
ಮಂದಂ ನಿಲೆ ವಿತ್ತಭವನದೊಳ್ ನಿಲೆ ಧರಣೀ ॥
ಜಂ ದಶಮದೊಳಸ್ತ್ರಾಹತಿ ।
ಯಿಂದಮವಂ ಬಿರ್ದು ಪುೞಿತು ಲಯವಾಗದಿರಂ ॥ ೧೪ ॥

ಮ ॥ ಕನಕಂ ಕೂಡೆ ಚತುರ್ಥದೊಳ್ ದಶಮದೊಳ್ ಪದ್ಮಪ್ರಿಯಂ ಕೂಡೆ ವಾ ।
ಹನದಿಂದಾಪಹದಿಂ ಪ್ರಪಾತದಿನವಂ ಸಾಯ್ಗುಂ ನಿಶಾನಾಥನುಂ ॥
ಶನಿಯುಂ ಭಾಸ್ಕರನುಂ ವಿಲಗ್ನದೊಳಿಳಾಜಂ ದ್ಯೂನದೊಳ್ ಕೂಡೆ ಯಂ ।
ತ್ರನಿರೋಧಸ್ಥಿತ ಬಾಧೆಯಿಂದೆ ಪರಲೋಕಪ್ರಾಪ್ತನಕ್ಕುಂ ನರಂ ॥ ೧೫ ॥

1. ಥ 2. ೞಿಂ



ಕಂ ॥ ಕನಕಂ ಸುಖದೊಳ್ ಕ್ಷೀಣೇಂ ।
ದು ನವಮದೊಳಿನನಸ್ತಗೃಹದೊಳ್ ಮೇಣ್ ತೊಲೆಯೊಳ್ ॥
ಕನಕಂ ಶಶಿಮೃಗಕುಂಭದೊ ।
ಳಿನನಜದೊಳಿರಲ್ಕೆ ವಿಣ್ಮಧ್ಯದಿಂ ಮರಣಂ ॥ ೧೬ ॥

ಗಳಿತೇಂದುವನಾಳೋಕಿಸೆ ।
ಬಳವತ್ಕುಜನರ್ಕಸೂನುವಷ್ಟಮ ಗೃಹದೊಳ್ ॥
ನಿಲೆ ಗುಹ್ಯೋದ್ಭವರುಜೆಯೊಳ್ ।
ವಿಳಯಂ ಕ್ರಿಮಿಶಸ್ತ್ರ ನಿಚಯದಿಂ ಸಮನಿಸುಗುಂ ॥ ೧೭ ॥

ಶನಿಯಷ್ಟಮದೊಳ್ ಗಳಿತೇಂ ।
ದು ನಾಲ್ಕಱೊಳ್ ಸೂರ್ಯನುಮಾಮಹಿಜಾತನುಮ ॥
ಸ್ತನಿಕೇತನದೊಳ್ ನೆಲಸಿರೆ ।
ಮನುಷ್ಯನಂ ಪಕ್ಕಿ ಪೊಯ್ದು ಕೊಲ್ಗುಂ ಕಡೆಯೊಳ್ ॥ ೧೮ ॥

ಮೃಗಧರನೊಂಬತ್ತಱೊಳು ।
ಷ್ಣಗುಜಾತನೆಂಟಱೊಳಿಳಾಸುತಂ ಸುಖದೊಳ್ ತೀ ॥
ಕ್ಷ್ಣಗು ಲಗ್ನದೊಳಿರೆ ಮರಣಂ ।
ನಗಾಗ್ರಕೂಟಶನಿಪಾತ ಪಾತದಿನಕ್ಕುಂ ॥ ೧೯ ॥

ಮ॥ ಸ್ರ॥ ಜನನದ್ರೇಕ್ಕಾಣದಿಂದಷ್ಟಮಮೆನಿಪುದು ವೈಶ್ವಾನರತ್ರ್ಯಂಶ[1]ವಾದಂ ।
ದನಷೀಗಾಹಾರಮಕ್ಕುಂ ನರಶಬಮುದಕತ್ರ್ಯಂಶಕಂ ಕೂಡೆ ಸಂಕ್ಲೇ ॥
ಶನಮಕ್ಕುಂ ವಾರಿಯೊಳ್ ಮಿಶ್ರಿತನೆನೆ ಪೊಗುಗುಂ ಪನ್ನಗತ್ರ್ಯಂಶಮಾಗಲ್ ।
ಶುನಕಂಗಳ್ಗಂ ವಿಹಗಂಗಳ್ಗುಪಮೆನಲಾಹಾರಮಕ್ಕುಂ ಯಥೇಷ್ಟಂ ॥ ೨೦ ॥

ಕಂ ॥ ಉದಯಗೃಹದ್ರೇಕ್ಕಾಣಂ ।
ಮೊದಲಾಗಿ ತೆಱದ ಮುಂದಣಿಪ್ಪತೇೞನೆ ತ್ರ್ಯಂಶಂ ॥
ಶದಪತಿಯ ಗುಣದ ಮೇಣ್ ತ ।
ತ್ಸದನದಶವಗುಣದೆ ಸಾವು ಸಮನಿಸಿ ಬರ್ಕುಂ ॥ ೨೧ ॥

ಉದಯ ನವಾಂಶಕಪತಿಯಾ ।
ವುದೊಂದು ಮಂದಿರದೊಳಿರ್ದನಾಗೃಹಸಂಬಂ ॥
ಧದ ಭೂಮಿಯೊಳಾತಂ ಸಾ ।
ಯದಿರಂ ಮಿಗುವನ್ನರೊಳರೆ ನೆಲವರದೆಡೆಯೊಳ್ ॥ ೨೨ ॥

ಚಂ ॥ ಉದಯ ಸಿತೇಂದುರಾಶಿಯೊಳೆ ಸಂದ ನವಾಂಶಕದಿಂದೆ ಮುಂದೆ ಮ ।
ತ್ತುದಯಿಸುವಂಶಕಂಗಳವು ಸಲ್ವಿನೆಗಂ ಮನುಜಂಗೆ ಮುಚ್ಚೆ ಪೋ ॥
ಪುದು ದೊರೆಕೊಳ್ಗುವಂಶಪತಿ ನೋಡುವೊಡಿಮ್ಮಡಿ ಮುಚ್ಚೆ ಪೋಕುಮಂ ।
ತದನೆ ಶುಭಂ ನಿರೀಕ್ಷಿಪೊಡೆ ಮೂವಡಿ ಮುಚ್ಚೆ ತದಂತ್ಯಕಾಲದೊಳ್ ॥ ೨೩ ॥

1. ಪಾ

### ಜೀವಂಗಳ ಗತಿ

ಕಂ ॥ ಶತಮಖಮಹತ್ತರಂ ಸುರ ।
ಗತಿಯಂ ನರಗತಿಯನಿಂದುಭೃಗುಜರ್ ತಿರ್ಯ ॥
ಗ್ಗತಿಯಂ ಕುಜರವಿಗಳ್ ರವಿ ।
ಸುತಫಣಿಗಳವಲ್ತೆ ನರಕಗತಿಯಂ ಕುಡುವರ್ ॥ ೨೪ ॥

ಮ ॥ ಉಡುರಾಜಾಂಬುಜಮಿತ್ರಱೊಳ್ ಸಬಳನಿರ್ದಾತ್ರ್ಯಂಶ ಕರ್ಕೀಶನಾ ।
ದೊಡೆ ಜೀವಂ ಸುರಲೋಕದಿಂ ನೃಗತಿಯಿಂ ಶುಕ್ರೇಂದುಗಳ್ ನಾಥರಾ ॥
ದೊಡೆ ತಿರ್ಯಗ್ಗತಿಯಿಂದಮಬ್ಜಸಖನಕ್ಕುರ್ವೀಸುತಸ್ಥಾಯಿಯಾ ।
ದೊಡೆ ಮಂದೇಂದುಜರಾಳ್ದರಾದೊಡಱಿನೀಂ ಬಂದಂ ನರಂ ಸ್ವಭ್ರದಿಂ ॥ ೨೫ ॥

ಜಳಜಾತಪ್ರಿಯಚಂದ್ರರೊಳ್ ಬಳಯುತಂ ತತ್ತ್ರ್ಯಂಶಕಾಧೀಶ್ವರಂ ।
ನಿಲೆ ತನ್ನುಚ್ಚದೊಳು[1]ತ್ತಮಾಸ್ಪದದಿನಾಪೇಳ್ದಿ ಗ್ರಹಂ ಮಧ್ಯದೊಳ್ ॥
ನಿಲೆ ಮಧ್ಯಾಸ್ಪದದಿಂ ತದಂಬರಚರಂ ನೀಚಾಹ್ವಯ ಸ್ಥಾನದೊಳ್ ।
ನಿಲೆ ನೀಚಾಸ್ಪದದಿಂದೆ ಬಂದನವನೆಂಗಾ ನಾಲ್ಕು ಯೋಗಂಗಳೊಳ್ ॥ ೨೬ ॥

ಉದಯತ್ರಿಂಶದಿನತ್ತ ಷಣ್ಣಿ ಧನಸಪ್ತತ್ರ್ಯಂಶಕಾಧೀಶ ಮ ।
ಧ್ಯದೊಳಾರಯ್ಯೆ ಬಳಾನ್ವಿತಗ್ರಹದವೋಲಾಂ ಕೂಡುಗುಂ ನಾಲ್ಕು ಲೋ ॥
ಕದೊಳುಚ್ಚಾಸ್ಪದಮುಚ್ಚಗೇಹದೊಳಿರಲ್ ಮಧ್ಯಾಸ್ಪದಂ ಮಧ್ಯಗೇ ।
ಹದೊಳಿರ್ದಂದಧಮಾಸ್ಪದಂ ನೆಲಸೆ ನೀಚಸ್ಥಾನದೊಳ್ ಸದ್ಗ್ರಹಂ ॥ ೨೭ ॥

ಗುರುಷಷ್ಠಾಷ್ಟಮಕಂಟಕಂಗಳೆನಿಪಾಱುಂ ಗೇಹದೊಳ್ ನೀಚದ ।
ಲ್ಲಿರೆ ಜೀವಂ ಪೊಱಗಾಗಿ ಸದ್ಗ್ರಹಮುಮಾರೈಪಂದು ನಿರ್ವೀರ್ಯನಾ ॥
ಗಿರೆ ಹೀನೋದಯದಂತ್ಯಮಾಂಶಮದು ತಾರಾಧೀಶಪುತ್ರಾಂಶವಾ ।
ಗಿರೆ ನಿಶ್ರೇಯಸಲಕ್ಷ್ಮಿಯೊಳ್ ನೆರೆದು ತಾಂ ಸತ್ಸೌಖ್ಯನಕ್ಕುಂ ನರಂ ॥ ೨೮ ॥

ಇದು
ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ನಿರ್ಯಾಣಪ್ರಕರಣ ವರ್ಣನಂ
ತ್ರಯೋವಿಂಶತ್ಯಧಿಕಾರಂ

1. ನ್ನತಾ ೦

## ಚತುರ್ವಿಂಶತ್ಯಧಿಕಾರಂ

### ನಷ್ಟಜಾತಕಪ್ರಕರಣ ವರ್ಣನಂ

ಮ ॥ ಮನುಜಂ ಬಂದು ಮದೀಯ ಜಾತಕಮನಿನ್ನಾಧಾನದಿಂ ನೋಡಿ ಪೇ ।
ಳೆನೆ ತತ್ಪ್ರಶ್ನವಿಲಗ್ನದಲ್ಲಿ ಮೊದಲರ್ಧಂ ತಾಗಿ ಸಲ್ವನ್ನೆಗಂ ॥
ಜನನಂ ವರ್ತಿಸುವುತ್ತರಾಯಣದ ಷಣ್ಮಾಸಂಗಳೊಳ್ ದಕ್ಷಿಣಾ ।
ಯನ ಷಣ್ಮಾಸಮದಾನರಂಗೆ ಜನನಂ ಪಕ್ಷಾರ್ಧಮಂತಾಪಿನಂ ॥ ೧ ॥

ಬರೆ ತತ್ಪ್ರಶ್ನವಿಲಗ್ನದಲ್ಲಿ ಮೊದಲದ್ರೇಕ್ಕಾಣಮಾಲಗ್ನಮಂ ।
ದಿರದೊಳ್ ಮೇಣ್ ಬರೆ ತದ್ವಿತೀಯಮೆನಿಪಾದ್ರೇಕ್ಕಾಣಮಾಪುತ್ರಮಂ ॥
ದಿರದೊಳ್ ಮೇಣ್ ಬರೆ ತತ್ತೃತೀಯಮೆನಿಪಾದ್ರೇಕ್ಕಾಣಮಾಧರ್ಮಮಂ ।
ದಿರದೊಳ್ ವಾಕ್ಪತಿಯಿರ್ದನೆಂದಱಿಗೆ ತಜ್ಞಂ ಜನ್ಮತಾತ್ಕಾಲದೊಳ್ ॥ ೨ ॥

ಕಂ ॥ ಬೆಸಗೊಂಡುದಯಂ ಮೊದಲಾ ।
ಗಿ ಸುರೇಜ್ಯಂ ನಿಂದ ರಾಶಿವರಮೆಣಿಸಿ ವಿಭಾ[1] ॥
ರಿಸಿ ಭಗಣಂಗಳ[2]ದವನೇ ।
[3]ರಿಸಿ ವಯಸಮನಱಿ ವಯೋನುಮಾನಕ್ರಮದಿಂ ॥ ೩ ॥

ಉದಗಯನ[4]ಕ್ಕಿರೆಶಿಶಿರಂ ।
ಮೊದಲಾಗಿರೆ ಮೂಱು ರುತುಗಳಂ ಬುಧಸಮಯಂ ॥
ಮೊದ[5]ಲಾಗಿರೆ ಋತುಗಳ್ ಮೂ ।
ಱು ದಕ್ಷಿಣಾಯನಕ್ಕೆ ಸಂತತಂ ವರ್ತಿಸುಗುಂ ॥ ೪ ॥

ಮ ॥ ಉದಯಕ್ಷೇತ್ರದೊಳೊಂದಿದಂದು ಶನಿ ಮೇಣ್ ತತ್ತ್ರ್ಯಂಶಮಾದಂದು ಪು ।
ಟ್ಟಿದ ಕಾಲಂ ಶಿಶಿರಂ ಸಿತಂಗದು ವಸಂತಂ ಗ್ರೀಷ್ಮಮುರ್ವೀಸುತಂ ॥
ಗದು ವರ್ಷಾಗಮಮಿಂದುವಿಂಗದು ಶರತ್ಕಾಲಂ ಶಶಾಂಕಾತ್ಮಜಂ ।
ಗದು ಹೇಮಂತವದಾಂಗಿರಂಗೆ ದೊರೆಕೊಳ್ಗುಂ ತತ್ಕ್ರಮಪ್ರಾಪ್ತಿಯಿಂ ॥ ೫ ॥

ದೊರೆಕೊಂಡಿರ್ದಯನಕ್ಕೆ ಬೇಱೆ ರುತುವಾಗಿರ್ದಂದು ಚಂದ್ರಾರ್ಕಜೀ ।
ವರು ನಿಂದಲ್ಲಿ ಪರಸ್ಪರಂ ನಿಲಿಸಿ ದೈತ್ಯಾಮಾತ್ಯವಕ್ರಾರ್ಕಪು ॥
ತ್ರರನಾಗಗೃಹಮಿರ್ದ ತಾಣಮವು ಸೌಮ್ಯಂ ತಾನಬಾಲ್ಯಂ ದಿವಾ ।
ಕರನಾವೃಶ್ಚಿಕ ಲಗ್ನದೊಳ್ ನೆಲಸೆ ಮತ್ತಂ ಗ್ರೀಷ್ಮಮಾಕಾಲಮುಂ ॥ ೬ ॥

ಕಂ ॥ ಸಮನಿಸೆ ಹೇಮಂತಂ ಶಿಶಿ ।
ರಮುಂ ಶರತ್ಸಮಯಮಲ್ಲಿ ಬರೆ ಕೊಳ್ಗೆ ವಸಂ ॥
ತಮನಂಬುದರ್ತುಗಾ ಗ್ರೀ ।
ಷ್ಮಮನಂತೆ ವಿಲೋಮಕಥ್ಯಮಯನದ್ವಯದೊಳ್ ॥ ೭ ॥

1. ಚಾ 2. ಧ 3. ಱಿ 4. ಕ್ಕಱಿಸಿ 5. ಗಱಿ

## ನಷ್ಟಜಾತಕಮನಱಿವ ಕ್ರಮಂ

ಮ ॥ ಕ್ರಮದಿಂ ಪೃಚ್ಛಕಲಗ್ನಗೇಹಜನಿತದ್ರೇಕ್ಕಾಣದೊಳ್ ವರ್ತಿಪಾ ।
ದಿಮ ಭಾಗಂ ರುತುಪೂರ್ವಮಾಸಮಪರಾರ್ಧಂ ತಾಗೆ ಮಾಸದ್ವಿತೀ ॥
ಯಮೆನಿಕ್ಕುಂ ದೊರೆಕೊಂಡು ಬಂದುದಯಮದ್ರೇಕ್ಕಾಣದೊಳ್ ಸಂದಭಾ ।
ಗಮನಾರಯ್ದನುಪಾತದಿಂದಱಿಗೆ ತಜ್ಜನ್ಮಾಹಮಂ ತದ್ವಿಧಂ ॥ ೮ ॥

ಕಂ ॥ ಸರಸೀರುಹಬಾಂಧವನಿಂ ।
ದ ರಾಶಿಯೊಳ್ ಭುಕ್ತಭಾಗಮಿತಿಯಿಂ[1] ಸಂವ ॥
ತ್ಸರಿಕಂ ಪೇೞ್ವುದು ಪೃಚ್ಛಕ ।
ನರಂಗೆ ತಜ್ಜನ್ಮದಿನಮನತಿಪರಿಣತಿಯಿಂ ॥ ೯ ॥

## ಜನ್ಮಲಗ್ನವಱಿವ ಕ್ರಮ

ಕಂ ॥ ನರಯುಗ್ಮಂ ಮೃಗಧನುಶಾ ।
ಕ್ವರ ಮೇಷಕುಳೀರಮಿವು ನಿಶಾಸಂಜ್ಞಂಗಳ್ ॥
ಹರಿವೃಶ್ಚಿಕಕುಂಭತುಳಾ ।
ತರುಣೀಮೀನಂಗಳಿವು ದಿವಾಸಂಜ್ಞಂಗಳ್ ॥ ೧೦ ॥

ಬರೆ ರಾತ್ರಿ ಸಂಜ್ಞೆ ಲಗ್ನಂ ।
ನರಂಗಹರ್ಜನ್ಮವಾದಿವಾಸಂಜ್ಞಂ ಮೇಣ್ ॥
ಬರೆ ರಜನೀಜನ್ಮಂ ಲ ।
ಗ್ನರಾಶಿ ಸಂದನಿತೆ ಘಳಿಗೆಯನುಪಾತನದಿಂ ॥ ೧೧ ॥

ಅಕ್ಕರ ವೃತ್ತಂ—

ಅಱೆಬರ್ ಕಾರ್ತಿಕಪೌರ್ಣಮಾಸಿ ದಿನಂ ಮೊದಲಾಗಿ ಮಾಸಮಂ
ತದುವೆ ಸಂವ ।
ತ್ಸರಕ್ಕೆ ಮೊದಲೆಂಬರ್ ಕಾರ್ತಿಕಮಾದಿಯಾಗಿರೆ ಚತುರ್ಮಾಸಂ
ಕೃತ್ತಿಕಾದಿಯಾ ॥
ಗಿರೆರಡುಂ ಗೆಯ್ದುಂ ತಾರೆಯನಾಳ್ಗುಂ ಫಾಲ್ಗುಣಂ ಮೂಱಿಂ
ಚೈತ್ರಾದಿಯಾಗ್ಯೆದುಂ ತಿಂಗ ।
ಳೆರಡುಂಗೆಯ್ದು ಭಾದ್ರಪದಾಶ್ವಯುಜಮವು ಮೂಱುಗೈದ
ಬೃಹಸ್ಪತಿಚಾಪದೊಳ್ ॥ ೧೨ ॥

ಕಂ ॥ ವನಜರಿಪುವಾವಮಂದಿರ ।
ದನವಾಂಶದೊಳಿರ್ದನಾ ನವಾಂಶದೆಶೆ ತಾ ॥
ನೆನಿಕುಂ ನಕ್ಷತ್ರಂ ತ ।
ಜ್ಜನಿತಂ ಪೃಚ್ಛಕನ ಜನ್ಮಮಾಸಮೆನಿಕ್ಕುಂ ॥ ೧೩ ॥

1. ಯುಂ



ಕಂ ॥ ತ್ರಿದಶಾಧಿಪ ಮಂತ್ರಿಯ ಚಾ ।
ರದ ವಶದೊಳೆ ಕಾರ್ತಿಕಾದಿ ಮಾಸಂಗಳೊಳೊಂ ॥
ದಿದ ತಾರೆಯು ಸಲವೆಂದಱಿ ।
ವುದು ತಜ್ಞಂ ಜನ್ಮದಿನಮನನುಪಾತನದಿಂ ॥ ೧೪ ॥

ಸಮನಿಸಿದ ಪೃಚ್ಛಕನ ಪೆಸ ।
ರಮಾತ್ರೆಯೊಳ್ ಕೂಡಿಕೊಂಡು ಛಾಯಾಂಗುಳಿ[1]ಮಾ ।
ನಮನಿಪ್ಪತ್ತೇೞಱಿನೆ ।
ತ್ತಿಮಿಕ್ಕುದಕ್ಕುಂ ಧನಿಷ್ಠೆ ಮೊದಲೆನೆ ಭಗಣಂ ॥ ೧೫ ॥

ನವಪಂಚಮ ಪೃಚ್ಛಕಲ ।
ಗ್ನಮಿವಱೊಳತಿ ಬಳಯುತಾಲಯಂ ಮೇಣ್ ಬೆಸಗೊಂ ॥
ಡವನಿರದಂದಿರೆ ತನ್ನವ ।
ಯವಮಂತಸ್ಥಾನಗೇಹಮದು ಜನ್ಮಗೃಹಂ ॥ ೧೬ ॥

ಬಂದು ಬೆಸಗೊಂಡ ಲಗ್ನಮ ।
ನಿಂದುವ ನೆಲೆವರೆಗಮೆಣಿಸಿ ತದ್ಗೃಹದಿಂದಂ ॥
ಪಿಂದಣ ಗ್ರಹಪರಿಮಿತಿಯಿಂ ।
ಮುಂದಣ ಗೃಹಮದುವೆ ಜನ್ಮಗೃಹಮೆನೆ ನೆಗೞ್ಗುಂ ॥ ೧೭ ॥

ಮ ॥ ತರೆ ಭಕ್ತಾಳಿಯನಕ್ಕೆ ಮೇಣ್ ವೃಷಭಮಾರ್ಜಾರಾದಿ ರೂಪಂಗಳೊಳ್ ।
ಸರಮಂತೊಂದನೆ ಕೇಳೆ ತತ್ಸಮಯದೊಳ್ ತದ್ವಸ್ತು ಸಂಬಂಧಮಂ ॥
ದಿರಮಾಮರ್ತ್ಯನ ಜನ್ಮಮಂದಿರಮೆನಿಕ್ಕುಂ ಮೀನಗೇಹೋದಯಂ ।
ಬರೆ ತತ್ಪ್ರಶ್ನವಿಲಗ್ನಮಾಗೃಹಮೆ ಜನ್ಮಾವಾಸಮವ್ಯಾಜದಿಂ ॥ ೧೮ ॥

ಬೆಸಗೊಂಡಂದುದಯದ್ಯುನಾಳಯಮೆ ಕುಳ್ಳಿರ್ದಂದು ಪುಟ್ಟಿರ್ದವಂ ।
ಬೆಸಗೊಂಡಂದು ಚತುರ್ಥಗೇಹದುದಯಂ ಕುಳ್ಳಿರ್ದು ತಾನೇಳುತುಂ ॥
ಬೆಸಗೊಂಡಂದುದಯಾಳಯಂ ತದುದಯಂ ನಿಂದಿರ್ದು ತತ್ಪೃಚ್ಛಕಂ ।
ಬೆಸಗೊಂಡಂದಱಿ ಪೃಚ್ಛಕೋದಯಮೆ ತನ್ಮರ್ತ್ಯಂಗೆ ಜನ್ಮೋದಯಂ ॥ ೧೯ ॥

616

ಕಂ ॥ ಉದಯಂ ಸದ್ರೇಕ್ಕಾಣಂ ।
ಮೊದಲಾಗಿರೆ ತೀಕ್ಷ್ಣಕರದ್ರೇಕ್ಕಾಣಂ ಲೆ ॥
ಕ್ಕದಿನೆಣಿಸೆ ತತ್ಪ್ರಮಾಣದ ।
ಸದನಮೆ ತಜ್ಜನ್ಮಲಗ್ನಸದನಮೆನಿಕ್ಕುಂ ॥ ೨೦ ॥

1. ಳಿ

ಅಕ್ಕರ ವೃತ್ತಂ—

ಬಂದು ಪೃಚ್ಛಕಲಗ್ನದೊಳಿರ್ದ ಗೃಹಂಗಳೊಳ್ ಸಬಳನುಂ ಬಳಹೀನನ ।
ಪ್ಪೊಂದು ಗ್ರಹಂ ನಿಂದೊಡಮದನಲ್ಲಿ ಗೃಹಮಿಲ್ಲದಿರೆ ಪೆಱತೆಡೆಯೊಳ್
ಬಳಾನ್ವಿತನ ॥
ಪ್ಪೊಂದನಕ್ಕೆ ಲಿಪಿಪಿಂಡಮಿಗಿಲಾಗಿ ಮಾಡಿ ತತ್ಕಾಲ [1]ಶಂಕುಳಚ್ಛಾ
ಯಾಂಗುಳದಿಂದೆ ಮೆಚ್ಚಿ ।
ದಂದು ತದ್ದ್ವಾದಶಾಪ್ತವಶೇಷಮೆ ಮೇಷಾದಿ ಜನ್ಮಲಗ್ನಂಗಳಕ್ಕುಂ ॥ ೨೧ ॥

ಕಂ ॥ ಬೆಸಗೊಂಡ ಲಗ್ನದೊಳ್ ವ ।
ರ್ತಿಸುವ ನವಾಂಶಕದ ಗೃಹಮೆ ತಜ್ಜನ್ಮವಿಲಗ್ನಾ ॥
ವಸಥಂ ತನ್ಮರ್ತ್ಯಂಗೆಂ ।
ದುಸುರ್ವುದು ನಿಶ್ಚಯಿಸ್ಸಿ ನಷ್ಟಜಾತಕಕುಶಲಂ ॥ ೨೨ ॥

ಚಂ ॥ ಹರಿವೃಷಭಕ್ಕೆ ಹತ್ತು ಮಿಥುನಕ್ಕಳಿಗೆಂಟಜತೌಳಿಗೇೞು ಸುಂ ।
ದರಿಗ ಮೃಗಕ್ಕಮಯ್ದು ಗುಣಕಾರಮನುಕ್ರಮದಿಂದಮಂಗಿರೋ ॥
ದರಿ ಕುಜಶುಕ್ರ ಸೋಮಸುತರ್ಗಾಗುಣಕಾರಮೆ ಚಂದ್ರಮಂದ ಭಾ ।
ಸ್ಕರರ್ಗೆ ಬುಧೋಕ್ತನಕ್ಕವಶೇಷಗೃಹಕ್ಕೆ ತದಾಳಯಕ್ರಮಂ ॥ ೨೩ ॥

## ಜನ್ಮತಾರೆಯನರಿವ ಕ್ರಮ

ಕಂ ॥ ಚರರಾಶಿ ನವಯುತಂ ದ್ವ್ಯಂ ।
ಗರಾಶಿ ಸಂಭವಿಸಿದಂದು ನವಪರಿಶೋಧ್ಯಂ ॥
ಸ್ಥಿರರಾಶಿ ದಾನಶೋಧನ ।
ವಿರಹಿತನಾ ಜನ್ಮತಾರೆಯಂತಪ್ಪೆಡೆಯೊಳ್ ॥ ೨೪ ॥

ಅನಿತುಂ ಪೂರ್ವಾಪರಗೃಹ ।
ಮನೇೞಱಿಂ[2]ದಿೞಿದು ಮಾಡಿನವದಾನವಿಶೋ ॥
ಧನಮುಂ ಸಪ್ತಾವಿಂಶತಿ ।
[3]ಯಿನೆತ್ತುಗವಶೇಷಮಶ್ವಿನೀ ಪ್ರಮುಖರ್ಕ್ಷಂ ॥ ೨೫ ॥

ಚಂ ॥ ವನಿತೆಗೆ ಸೋದರಂಗೆ ತನಯುಂಗರಿಗಾವುದು ಜನ್ಮರಾಶಿ ಪೇ ।
ೞನೆ ವಧುಗಾಱಿನಲ್ಲಿ ಸಹಜಂಗೆರಡಂ ತನುಜಂಗೆ ನಾಲ್ಕನೆ ॥
ಯ್ದನೆ ಪಗೆವಂಗೆ ಕೂಡುವುದು ಪೂರ್ವವಿಧಾನಮನೆಯ್ದೆ ಮಾೞ್ಪುದ ।
ಶ್ವನಿ ಮೊದಲಾಗೆ ತಾರೆಯೆನಿಕುಂ [4]ತ್ರ್ರಿಘನಾಹೃತ ಶೇಷಸಂಖ್ಯೆಗಳ್ ॥ ೨೬ ॥

ಮ ॥ ಬೆಸಗೊಂಡಿರ್ದುದಯಕ್ಕೆ ಪೂರ್ವಗದಿತವ್ಯಾಪಾರಮಂ ಕೂಡಿ ಯೋ ।
[5]ಜಿಸಿ ನಾಲ್ಕು ಪ್ರತಿಯಿಟ್ಟು ಮತ್ತೆ ದಶಕಾದ್ಯಂಕಂಗಳಿಂದೆಯ್ದೆ ಪೆ ॥
ರ್ಚಿಸಿ ತಜ್ಞಂ ನವದಾನಶೋಧನದೆ ಗಣ್ಯವ್ಯಾಪ್ತಿಯಂ ಮಾಡಿ ಭಾ ।
ಗಿಸೆ ತಂತಮ್ಮ ವಿಕಲ್ಪದಿಂ ಪಡೆದ ಲಬ್ಧಂ ಜನ್ಮವರ್ಷಾದಿಗಳ್ ॥ ೨೭ ॥

---
1. ಶಂಕಚ್ಛಾಯಾ 2. ದ 3. ಯು 4. ತೃಪು 5. ಚಿ



ಉ ॥ ಮುಂದೆ ದಶಾಂ[1]ಕಿಯಿಂದಿೞಿದುವಂ ಪರಮಾಯುವಿನಿಂದ [2]ಮೆತ್ತಿದಲ್ ।
ನಿಂದುದು ವರ್ಷಮಾದಶಹತಾಂಕಮನಾಱಱೊಳೆತ್ತೆ ಮತ್ತೆಯುಂ ॥
ನಿಂದುದು ಜನ್ಮಕಾಲರಿತುವಾದಶ ಗುಣ್ಯಮನೆತ್ತೆ ವಿತ್ತದಿಂ ।
ನಿಂದುದು ಮಾಸಮೆಂದಱಿದು ಪೇೞ್ದುದು ತಪ್ಪದು ನಷ್ಟಜಾತಕಂ ॥ ೨೮ ॥

## ದಿವಸದ ವಿವರ

ಕಂ ॥ ಮೊದಲೊಳ್ ಮುನ್ನೆಂಟಱಿನೊ ।
ತ್ತು[3]ದುವಂ ಮತ್ತೆರಡಱಿಂದೆ ಭಾಗಂಗೊಳೆ ನಿಂ ॥
ದುದು ಪಕ್ಷಮಬ್ದಹತಮುಂ ।
ಪದಿನೆಯ್ದಱಿನೆತ್ತಿ ಕಳೆಯೆ ನಿಂದುದು ದಿವಸಂ ॥ ೨೯ ॥

ಸಪ್ತಾಹತಮುಂ ದ್ವಿತಿಯಾ ।
ವಾಪ್ತಂಗೆಯಿ ನಿಂದವುೞಿದವಾರಾತ್ರಿಗಳಾ ॥
ಸಪ್ತಾಹತದಿಂ ಭಾಗಿಸೆ ।
ಸಪ್ತಾವಿಂಶತಿಯಿನಲ್ಲಿ ನಿಂದುದು ಭಗಣಂ ॥ ೩೦ ॥

## ಜನ್ಮತಾರೆ

ಅಕ್ಕರ ವೃತ್ತಂ—

ಹಿಂದೆ ಪೇೞಿದ ಸಪ್ತಾಹತರಾಶಿಯಂ ಪಸೆ ದಿವರಾತ್ರಿ ಪ್ರಮಾಣದಿಂದೆ ।
ನಿಂದುವವು ಸಂದ ಘಳಿಗೆಗಳಾರಾಶಿಯಂ ಪಸೆಯೆಮತ್ತಮಿಪ್ಪತ್ತೇೞಱಿಂ ॥
ನಿಂದುವವು ಲಗ್ನನಕ್ಷತ್ರಮಾರಾಶಿಯಂ ಪಸೆ ಮತ್ತಮೊಂಭತ್ತಱಿಂ ।
ನಿಂದುವವು ಜನ್ಮಲಗ್ನ ನವಾಂಶಕಮೆಂದಱಿವುದು ಪದ್ಯವಿದ್ಯಾಧರಾ ॥ ೩೧ ॥

ಮ॥ ಸ್ರ॥ ಮೊದಲೊಳ್ ಮುನ್ನಯ್ದಱಿಂದೊತ್ತಿದುದನೆ ಬೞಿಯಂ
ಮೂಱಱಿಂದೆತ್ತಿ ಮಿಕ್ಕ ।
ರ್ದುದು ತದ್ರೇಕ್ಕಾಣಮಕ್ಕುಂ ಬೞಿಯುಮದನೆ ಮತ್ತಂತ್ಯದಿಂದೆತ್ತಿ ಮಿಕ್ಕ ॥
ರ್ದುದಕಕ್ಕುಂ ದ್ವಾದಶಾಂಶಂ ಬೞಿಯುಮದನೆ ಮೂವತ್ತಱಿಂದೆತ್ತೆ ಮಿಕ್ಕ ।
ರ್ದುದಕಕ್ಕುಂ ತ್ರಿಂಶದಂಶಂ ಕ್ರಮದಿನನಿತುಮಂ ಪೇೞ್ಗೆ ವರ್ಷಾದಿ
ಯಿಂದಂ ॥ ೩೨ ॥

ಕಂ ॥ ವಿವಿಧ ಪ್ರಕಾರಂ ವಿರಚಿ ।
ತವಿದಿತಮಿದು ನಷ್ಟಜಾತಕಜ್ಞಾನಂ ಯು ॥
ಕ್ತಿವಿಚಾರಕ್ರಮದಿಂ ಮ ।
ತ್ತವೆಂತು ಘಟಿಯಿಸುಗುಮಂತೆ ಪೇೞ್ವುದು ತಜ್ಞಂ ॥ ೩೩ ॥

ಪಿರಿಯಕ್ಕರ ವೃತ್ತಂ—

ತರದಿಂ ಸಂಜ್ಞೆ ಬಳಾಬಳಾವಧಾನಂ ಜನ್ಮತಿರ್ಯಗ್ಜನ್ಮಮರಿಷ್ಟಾರಿಷ್ಟ ।
ಹರಣಂ ಆಯುರ್ದಾಯಂ ದಶಾಂತರ್ದಶೆಯಷ್ಟಕವರ್ಗಂ ಕರ್ಮ ಜೀವನಂ ॥
ಧರಣೀನಾಥನಾಭಸಂ ಚಂದ್ರದ್ವಿತ್ರಿಗೇಹಾದಿ ದೀಕ್ಷಾಯೋಗಂ ರಾಶಿ ಫಳೋ ।
ತ್ಕರಂ ವಿಲಗ್ನಭಾವತ್ರ್ಯಂಶತಿಲಕ್ಷಣ ದೃಷ್ಟಿಫಳಾನಿಷ್ಟಂ ಸ್ತ್ರೀಜಾತಕಂ ॥ ೩೪ ॥

---
1. ಕೆ 2. ನೆ 3. ದ

ಕಂ ॥ ಮನುಜರನಿರ್ಯಾಣಪ್ರಾ ।
ಪ್ತಿ ನಷ್ಟಜಾತಕಮೆನಿಪ್ಪ ಭೇದದಿನಖಿಳಾ ॥
ವನಿಯೊಳ್ ನೆಗೞ್ದಿಪ್ಪ ।
ತ್ತೈನಾಲ್ಕುಮಧಿಕಾರದಿಂದೆ ಜಾತಕತಿಳಕಂ ॥ ೩೫ ॥

ಅಮಿತಾರ್ಥಂ ಸಕಳಾಚಾ ।
ರ್ಯಮತಾಂತಸ್ಸಾರಮತಿಗಭೀರಂ ಹೃದಯಂ ॥
ಗಮನನ್ಯಶಾಸ್ತ್ರನಿರಪೇ ।
ಕ್ಷಮೆಂಬಿನಂ ಖ್ಯಾತಮಾಯ್ತು ಜಾತಕತಿಳಕಂ ॥ ೩೬ ॥

ಸುಕರಮುಚಿತಕ್ರಿಯಾಕಾ ।
ರಕಮಪಶಬ್ದ ಪ್ರದೂರಮಪನೇಯಂ ಸಾ ॥
ರ್ಥಕಪದವಿನ್ಯಾಸಂ ಜಾ ।
ತಕತಿಳಕಮಿದೆಂದು ಕೊಂಡುಕೊನೆಯದರೊಳರೇ ॥ ೩೭ ॥

ಲಳಿತವಚೋಲಲಸಾನನ ।
ತಿಳಕಂ ದೈವಜ್ಞವದನತಿಲಕಂ ವಿದ್ವ ॥
ತ್ಕುಳಮುಖ ತಿಲಕಂ ಜಾತಕ ।
ತಿಳಕಂ ತ್ರೈಲೋಕ್ಯ ತಿಳಕಮಿದು ಕೇವಳಮೇ ॥ ೩೮ ॥

ಶುಭಗವಚಂ ಕಾವ್ಯಕವಿ ।
ತ್ವಭೂಷಣಂ ಶ್ರೀಧರಾಚಾರ್ಯ ರಚಿತಂ ಚಂದ್ರ ॥
ಪ್ರಭಚರಿತಂ ಶಾಸ್ತ್ರಕವಿ ।
ತ್ವಭೂಷಣಂ ಧರೆಗೆ ನೆಗೞ್ದ ಜಾತಕತಿಳಕಂ ॥ ೩೯ ॥

ಅದಿದೆನ್ನದೆ ಜಾತಕತಿಳ ।
ಕದೊಳಱಿವುದು ಗಣಿತಧರ್ಮಮಂ ಸಕಳ ಜಗ ॥
ದ್ವಿದಿತಂ ಚಂದ್ರಪ್ರಭಚರಿ ।
ತದೊಳಱಿವುದು ಕಾವ್ಯಧರ್ಮಮಂ ಬುಧನಿವಹಂ ॥ ೪೦ ॥

ಮ ॥ ರಸವತ್ಕಾವ್ಯವಿದರ್ ಪುರಾತನದೊಳಾರಂ ಪೂಣ್ಕೆಯಿಂ ಪೇೞ್ದ ಜೋ ।
ಯಿಸಗಬ್ಬಂಗಳನೆಯ್ದೆ ರಂಜಿಸಿದರಾ ತಜ್ಞಂ ಮನಂಗೊಂಡು ಬ ॥
ಣ್ಣಿಸೆ ಪೇೞ್ದಿಂತನವದ್ಯಮಿಂತಖಿಳ ಶಾಸ್ತ್ರಾಪಾರಸಾರಾರ್ಥಮಿಂ ।
ತು ಸಮಗ್ರಂ ಪೆಱತಾವುದೆಂದೆನಿಸಿದಂ ವಾಕ್ಶ್ರೀವರಂ ಶ್ರೀಧರಂ ॥ ೪೧ ॥

ಕಂ ॥ ವಿಧು ವಿಶದ ಯಶೋನಿಧಿ ಕಾ ।
ವ್ಯಧರ್ಮ ಜಿನಧರ್ಮ ಗಣಿತಧರ್ಮ ಮಹಾಂಭೋ ॥
ನಿಧಿಯೆನೆ ನೆಗೞ್ದಂ ಜಗದೊಳ್ ।
ಬುಧಮಿತ್ರಂ ನಿಜಕು[1]ಲಾಂಬುಜಾಕರಮಿತ್ರಂ ॥ ೪೨ ॥

1. ಜಾ



ಕಂ ॥ ರಸಭಾವಸಮನ್ವಿತನೆಂ ।
ದು ಸುಭಗನೆಂದಖಿಳ ವೇದಿಯೆಂದನ್ವಿತನೆಂ ॥
ದು ಸಮಗ್ರನೆಂದು ಸಲೆ ಬ ।
ಣ್ಣಿಸುವುದು ಧರೆ ಗದ್ಯಪದ್ಯವಿದ್ಯಾಧರನಂ ॥ ೪೩ ॥

ಧರಣಿಗಿರಿ ನಿಧಿ ಶಕಾಬ್ದಂ ।
ವಿರೋಧಿ ವತ್ಸರದ ಮಾರ್ಗಶೀರ್ಷದ ಶುಕ್ಲೇ ॥
ತರದ ಚತುರ್ಥಿದಿವಸದ ।
ಗುರುಪುಷ್ಯದೊಳೆಸೆದುದಿಳೆಗೆ ಜಾತಕತಿಳಕಂ ॥ ೪೪ ॥

ಚಂ ॥ ಸಕಳ ಮಹೀತಳಂ ಬೆಳಗೆ ಧಾತ್ರಿಯನಾಹವಮಲ್ಲ ಭೂಮಿಪಾ ।
ಳಕನೊಸೆದಾಳ್ಗೆ ಸಾಲೆಮಱಿಕೊಳ್ಗಿದನೋದುವ ಕೇಳ್ವ ಕಲ್ವಭ[1] ॥
ಕ್ತಿಕ ಜನಕಾಗಳುಂ ಸಮನಿಸಿಕ್ಕೆ ಮನೋರಥಕಾರ್ಯಸಿದ್ಧಿ ಜಾ ।
ತಕತಿಳಕಂ ಜಗಕ್ಕೆ ಪರೆದಿರ್ಕೆ ದಿನೇಶಶಶಾಂಕರುಳ್ಳಿನಂ ॥ ೪೫ ॥

ಇದು

ಭಗವದರ್ಹತ್ಪರಮೇಶ್ವರಚರಣಸರಸಿರುಹಷಟ್ಪದಾಯಮಾಣಂ
ಸರಸಪ್ರಸನ್ನವಚೋಲಕ್ಷ್ಮೀಧರಂ ಗದ್ಯಪದ್ಯವಿದ್ಯಾಧರಂ
ಶ್ರೀಧರಾಚಾರ್ಯಪ್ರಣೀತಮಪ್ಪ
ಜಾತಕತಿಲಕದೊಳ್
ನಷ್ಟಜಾತಕಪ್ರಕರಣ ವರ್ಣನಂ
**ಚತುರ್ವಿಂಶತ್ಯಧಿಕಾರಂ**

**ಜಾತಕತಿಳಕಂ ಸಂಪೂರ್ಣಂ**

1. ಭಾ

# ಅನುಬಂಧ—ಶಬ್ದಸೂಚಿ

## ಅ


| | *ಪು. ಪ. ಸ. |
|---|---|
| ಅಂಶಕಫಳ | ೮೦–೨೪ |
| ಅಂಶಕಾಧೀಶರ್ | ೪–೬ |
| ಅಂಶಪತಿ | ೯೧–೨೩ |
| ಅಂಶಾಯು | ೩೫–೧೩ |
| ಅಖಿಳವೇದಿ | ೯೯–೪೩ |
| ಅಖಿಳಶಿಲ್ಪಿಯೆನಿಕ್ಕುಂ | ೨೯–೧೯ |
| ಅಗ್ನಿ | ೯೦–೧೨ |
| ಅಜತೃತೀಯತ್ರ್ಯಂಶಂ | ೭೨–೩ |
| ಅಜಾದಿಮದ್ರೇಕ್ಕಾಣಂ | ೭೨–೧ |
| ಅಡವಿಯೊಳ್ ಮನೆಯೊಳ್ ....ಜನ್ಮಂ | ೧೮–೨೭ |
| ಅಧಿಯೋಗಂ | ೬೦–೯, ೧೦ |
| ಅನಪಾದಿತ್ರಯದಲ್ಲಿ | ೫೯–೫, ೬ |
| ಅನಪಾಯೋಗ | ೫೯–೧ |
| ಅನಪಾಸಂಭವಂ | ೫೯–೨ |
| ಅನಲಂಗಾಹುತಿ | ೩೪–೨೭ |
| ಅನಷೀಗಾಹಾರ | ೯೧–೨೦ |
| ಅನಿಮಿಷಾಂತ್ಯತ್ರ್ಯಂಶಂ | ೭೬–೩೫ |
| ಅನುಪಾತ | ೯೪–೮ |
| ಅನೇಕವಿಧದಿನರ್ಥಂಬಡೆಗುಂ | ೪೯–೬ |
| ಅನ್ಯರ್ಕ್ಷದೊಳ್ | ೯೦–೧೦ |
| ಅನ್ಯವಧೂಲೋಲಂ | ೭೯–೨೧ |
| ಅನ್ಯಶಾಸ್ತ್ರನಿರಪೇಕ್ಷಂ | ೯೮–೩೬ |
| ಅಂತರ್ದಶಾಧಿನಾಯಕನಕ್ಕುಂ | ೩೮–೧೦ |
| ಅಂತರ್ದಶಾಧಿಪಂ | ೩೮–೧೨ |
| ಅಂತ್ಯಾಂಶಕ | ೬–೨೦ |
| ಅಂದೆಸಾಯ್ಗು ಮಾಪುಟ್ಟಿದವಂ | ೨೩–೫ |
| ಅಪಚಯ | ೬–೧೯ |
| ಅಪನೇಯಂ | ೯೮–೩೭ |
| ಅಪಶಬ್ದಪ್ರದೂರಂ | ೯೮–೩೭ |

| | ಪು. ಪ. ಸ. |
|---|---|
| ಅಬಲೆಗಳ್ | ೪–೩ |
| ಅಮರೇಜ್ಯಂ..... ಪೂಜ್ಯನಕ್ಕುಂ | ೪೨–೧೦, ೧೧ |
| ಅಮರೇಜ್ಯಂ ಕುಜಗೇಹದೊಳ್ | ೬೭–೨೬ |
| ಅಮಿತಾಯುಷ್ಯಂ | ೩೬–೧೬ |
| ಅಮೃತಕರಂ ಗ್ರಾಮಾರಣ್ಯ.... ವಿಲಗ್ನದೊಳ್ ನೆಲೆಸಿರೆ | ೬೯–೫ |
| ಅಮೃತಕಿರಣನೊಳ್ಪಂ ಮಾಱ್ಕುಂ | ೪೧–೫ |
| ಅಮೃತಮಯೂಖಾಪತ್ಯದಶೆ ಯೊಳವರೋಹಿಣಿಯೊಳ್ | ೪೦–೨೪ |
| ಅಯನ | ೯೩– ೬ |
| ಅರಿಷ್ಟಭಂಗ | ೩೩–೧೬ |
| ಅರಿಷ್ಟಾರಿಷ್ಟಹರಣಂ | ೯೭–೩೪ |
| ಅರ್ಕನ ದೆಶೆಯೊಳ್ | ೩೯–೧೭ |
| ಅರ್ಕಿ | ೮೭–೧೫ |
| ಅರ್ಥಪತಿಯಕ್ಕು ಮವಂ | ೫೫–೩೦, ೩೧, ೩೨, ೩೩ |
| ಅರ್ಥಮೆಯ್ದುಗುಂ ಬಳವಶದಿಂ | ೪೯–೧, ೭ |
| ಅರ್ಧಚಂದ್ರ ಪ್ರಸವನರಂ | ೫೮–೧೯ |
| ಅರ್ಧಚಂದ್ರಯೋಗಂ | ೫೭–೧೦ |
| ಅರ್ಧದೃಷ್ಟಿ | ೭–೨೬ |
| ಅಲ್ಪಪುತ್ರ | ೮೭–೨೧ |
| ಅಲ್ಪರತಿ | ೮೬–೮ |
| ಅಲ್ಪವಿತ್ತಂ | ೫೫–೩೩ |
| ಅವಯವಂ | ೧೨–೩ |
| ಅಶನಿಪಾತ | ೯೧–೧೯ |
| ಅಶುಭಗ್ರಹ | ೮–೨ |
| ಅಷ್ಟಕವರ್ಗ | ೪೧–೧, ೯೭–೩೪ |
| ಅಷ್ಟಕವರ್ಗದ ಕುಂಡಲಿಚಕ್ರ | ೪೬–ಪಂಕ್ತಿ ೧೫ |


* ಪು. = ಪುಟ, ಪ. ಸ. = ಪದ್ಯ ಸಂಖ್ಯೆ.

ಪು. ಪ. ಸ.

ಅಸಿತಕ್ಷೇತ್ರ ೮೬-೯
ಅಸುರೇಂದ್ರೇಜ್ಯ ೮೬-೮
ಅಸ್ತಗೃಹ ೮೭-೧೮
ಅಸ್ತರಾಶಿಬಳ ೮೫-೧
ಅಸ್ತ್ರಾಹತಿ ೯೦-೧೪
ಅಸ್ಥಿಗಳ್ ೧೨-೩

### ಆ

ಆಂಗಿರಂ ೮೮-೨೩
ಆಢ್ಯಂ ೬೯-೧
ಆತ್ಮಜಕುಳಪ್ರಮಾದರಹಿತಂ ೮೧-೧
ಆದಿತ್ಯಾದಿ ಗ್ರಹಂಗಳ್ಗೆ ಅಷ್ಟಕ ವರ್ಗ ೪೪-ವ
ಆದ್ಯಂಶಕ ೬-೨೦
ಆಧಾನ ೯೩-೧
ಆಪಹದಿಂ ೯೦-೧೫
ಆಬೋಕ್ಲೀಬಂ ೬-೧೮
ಆಮಯಂ ೮೯-೧
ಆಯ ೧೦-೧೬
ಆಯುಧದಿಂ ೯೦-೧೩
ಆಯುಧಜೀವಿ ೬೧-೧
ಆಯುರ್ದಾಯಂ ೯೭-೩೪
ಆರಂ ೧೦-೨೧
ಆರಣ್ಯನಿವಾಸಿ ೬೩-೨
ಆಹವಮಲ್ಲ ೯೯-೪೫
ಆಳ್ವರ್ ದಶಾಕಾಲಮಂ ೩೮-೧೪

### ಇ

ಇನಜಂ ತೌಳಿಯೊಳಿರ್ದೊಡೆ ೬೮-೩೩
ಇನಜಂ ನಿಲೆ ಕರ್ಕಿಯೊಳ್ ೬೮-೩೩
ಇನಜಂ ಮೇಷದೊಳೊಂದಿದಂದು ೬೮-೩೨
ಇನಜಂ ವೃಶ್ಚಿಕಸಂಸ್ಥನಾಗೆ ೬೮-೩೩
ಇನಜಂ ವೃಷರಾಶಿಯೊಳ್ ೬೮-೩೨
ಇನಜಂ ಸೌಮ್ಯಕ್ಷೇತ್ರದೊಳ್ ೬೮-೩೨
ಇನಪ್ರೋದ್ಭೂತ ೯೦-೯

ಪು. ಪ. ಸ.

ಇಂದ್ರಮಂತ್ರಿದೆಶೆಯಪ್ಪಾರೋಹಿ ಸಂಸ್ಥಾನದೊಳ್ ೪೦-೨೫
ಇರೆ ಚಂದ್ರಂ ೩೯-೧೬
ಇಱಿದು ೯೬-೨೫
ಇಳಾಜಂ ೯೦-೧೫
ಇಳಾಸಂಭವ ೮೯-೭

### ಉ

ಉಕ್ಷಮಧ್ಯತ್ರಿಂಶಂ ೭೨-೫
ಉಕ್ಷೋದ್ಭವಂ ೬೪-೨
ಉಗ್ರರ್ ೮೬-೧೩
ಉಚಿತಕ್ರಿಯಾಕಾರಕಂ ೯೮-೩೭
ಉಚ್ಚಾಭಿಲಾಷಿ ೩೭-೪
ಉಡುನಾಥಜಾತದುರಿತ ವಿನಾಶಂ ೩೧-೫, ೬
ಉಡುಪತಿಯುಗ್ಮೋದಯ ದೊಳೊಂದಿ ನಿಲೆ ೬೦-೮
ಉಡುರಾಜಂ ನಿಲೆ ಲಗ್ನದೊಳ್ ೬೯-೬, ೭
ಉತ್ತಮಾಸ್ಪದ ೯೨-೨೬
ಉತ್ತರಾಯಣ ೯೩-೧
ಉದಕದೊಳ್ ಪೆಱುಗುಮವಳ್ ೧೭-೨೦
ಉದಗಯನ ೯೩-೪
ಉದಯ ೮೬-೧೦
ಉದಯಕ್ಕೆಂಟಱೊಳಿಂದು ಕೂಡೆ ೭೦-೮
ಉದಾಸೀನಂ ೯-೧೫
ಉಪಚಯ ೬-೧೯
ಉಶನಂ ೮೭-೧೫
ಉಶನನವರೋಹಿಣಿಯೊಳ್ ೪೦-೨೮

### ಊ

ಊಡಲ್ ಬಲ್ಲಂ ೬೧-೫

### ಎ

ಎಟ್ಟರಂ ೬೧-೩
ಎತ್ತು ೯೭-೩೨



### ಏ

ಪು. ಪ. ಸ.

ಏೞುತಿಂಗಳುಂ ಬರಂ ಅಧೀಶರ್ ೧೨-೩

### ಐ

ಐದು ವರ್ಷಂ ಬಾೞ್ಗುಂ ೨೬-೨೪
ಐಂದವ ದಶೋಕ್ತಾರೋಹ ಗೇಹಂಗಳೊಳ್ ೩೯-೨೩

### ಒ

ಒಂದೆ ತಿಂಗಳ್ ಬಾೞ್ಗುಂ ೨೪-೧೦, ೧೧, ೧೨

### ಕ

ಕಡುಜೋಡೆ ೮೬-೧೪
ಕಣ್ಗಿಡುಗಂ ೮೩-೧೬
ಕಣ್ಣುರುಡರ್ ೮೧-೪
ಕಂಟಕ ೯-೧೮, ೯೨-೨೮
ಕನಕಂ ೮೬-೮
ಕನಕಂ ವೃಶ್ಚಿಕ ಮೇಷದೊಳ್ ನಿಲೆ ೬೬-೧೮
ಕನಕಂ ವೃಷತೌಳಿಯೊಳ್ ನಿಲೆ ೬೬-೧೮
ಕನಕಂ... ಸೌಮ್ಯಪ್ರದಂ ೪೨-೬, ೭
ಕನಕನಿರೆ ಲಗ್ನದೊಳ್ ೭೦-೯
ಕನಕಾದಿಗಳೀಕ್ಷಿಸೆ ಚಂದ್ರನನಳಿಯೊಳ್ ೭೮-೮
ಕನಕಾಭಿಧಾನನಾ ರೋಹಣದೊಳ್ ೩೯-೨೧
ಕನ್ಯಕಾತ್ರಿತಯಂ ೧೪-೧೫
ಕನ್ಯಕಾಂತ್ಯತ್ರ್ಯಂಶಂ ೭೪-೧೮
ಕನ್ಯಾನಿವಾಸೋದ್ಭವಂ ೬೪-೬
ಕಮಳಂ ೫೬-೬
ಕಮಳೋದ್ಭವಂ ೫೮-೧೭
ಕರಚರಣ....ಇಮ್ಮಡಿಯಕ್ಕುಂ ೧೯-೩೬
ಕರುಳ್ತೊಡಕಕ್ಕುಂ ೧೯-೩೧

ಪು. ಪ. ಸ.

ಕರ್ಕಟಾದಿಮದ್ರೇಕ್ಕಾಣಂ ೭೩-೧೦
ಕರ್ಕೀಶ ೯೨-೨೫
ಕರ್ಮಜೀವನಂ ೯೭-೩೪
ಕಲಲಂ ೧೨-೩
ಕಲಹಕಾರಿಯೆನಿಕ್ಕುಂ ೭೯-೧೮
ಕವಿಕನ್ಯಾನಿಳಯಸ್ಥನಾಗೆ ೬೭-೩೦
ಕವಿಯಂಶದೊಳುಡುಪತಿನಿಲೆ ೭೯-೨೧
ಕವಿರೋಹಿಣೀಧವ ಗೇಹಸ್ಥನುಮಾಗೆ ೬೭-೩೦
ಕವಿ ಲಗ್ನಾವಸಥಕ್ಕೆ ಷಷ್ಠಗೃಹ ದೊಳ್ ನಿಂದಂದು ೬೯-೩
ಕಳತ್ರ ೮೬-೧೪
ಕಳಾಕುಶಳೆ ೮೫-೪
ಕಳಾಸಂಪನ್ನೆ ೮೭-೧೯
ಕಾಕನೇತ್ರಂ ೮೩-೨೨
ಕಾಂತಂ ೮೭-೧೮
ಕಾಂತೆ...ಅಗ್ನಿಪ್ರಾಪ್ತಿಯಿಂ ಪೊಂದುಗುಂ ೮೧-೩
ಕಾಮುಕ ೮೭-೧೭
ಕಾಪಾಲಿಕಂ ೬೩-೨
ಕಾರಾಗೃಹದೊಳ್ ಪ್ರಸೂತೆ ೧೭-೨೧
ಕಾರ್ಮುಕೋದ್ಭವಂ ೫೮-೧೮
ಕಾಲಾಂಗ ೪-೧
ಕಾವ್ಯಧರ್ಮ ೯೮-೪೦
ಕಾಷ್ಠಾಪಾತ ೯೦-೧೦
ಕಿವುಡಂ ೨೦-೪೨, ೮೩-೧೭
ಕುಜಂ ನೆಲಸೆ ಕುಳೀರ ಮಂದಿರದೊಳ್ ೬೬-೧೯
ಕುಜನಂಗನಾಮಿಥುನದೊಳ್ ೬೬-೧೯
ಕುಂಡಲಿಚಕ್ರ ೪೧-೨
ಕುತ್ತಂ ತಂದೆಗೆ ೧೨-೫
ಕುತ್ತಂ ತಾಯ್ಗೆ ೧೨-೫
ಕುಲಟೆ ೮೫-೬
ಕುಲವಿಹಿನಾಸಕ್ತೆ ೮೬-೯
ಕುಲಸಂಭೂತಾಧಿಕರೆ ೬೧-೭

ಪು. ಪ. ಸ.

ಕುಲಾಂಗನಾಸಹಿತವನಕ್ಕೆ ೮೧-೧
ಕುವಲಯಸಖನೊಂದಿದೊ
ಡ್ಡೈಂದವಾಂಶದೊಳ್ ೭೯-೧೯
ಕುವಲಯಸಖನಿರೆ
ವೃಷಭದೊಳ್ ೭೭-೨
ಕುಳೀರ ೯೦-೯
ಕುಳೀರದಂತ್ಯತ್ರ್ಯಂಶಂ ೭೩-೧೨
ಕುಳೀರ ಮಧ್ಯತ್ರ್ಯಂಶಂ ೭೩-೧೧
ಕುಳೀರಸಂಭವಂ ೬೪-೪
ಕೂಟಂ ಯೋಗಂ ೫೭-೮
ಕೂಟ ಸಂಭವಂ ೫೮-೧೮
ಕೂಟವಿಧಾನವೇದಿ ೬೧-೨
ಕೂಸುತಾಯ್ವೆರಸಟಿಗುಂ ೧೯-೩೨
೨೯-೪೯, ೫೦
ಕೂಸು ಬಿಸುಡುಗುಮಸುವಂ ೧೯-೩೪
ಕೃಶತನುವಕ್ಕುಂ ನರಂ....
ಕಾಂತೆಯಕ್ಕುಂ ೮೨-೮
ಕೃಶಾಂಗಂ ಮನುಜಂ ೮೨-೧೪
ಕೇದಾರಂ ೫೬-೫
ಕೇದಾರಪ್ರಸೂತಂ ೫೭-೧೫
ಕೇಮದ್ರುಮಂ ೫೯-೧
ಕೇಮದ್ರುಮದಶುಭಂ ಕಿಡುಗುಂ ೫೯-೪
ಕೇಮದ್ರುಮಯೋಗ ಸಂಭವಂ ೫೯-೩
ಕೇಂದ್ರ ೬-೧೮
ಕೇಂದ್ರಗೃಹ ೨೧-೧
ಕೊಡಗೂಸು ೮೫-೩, ೮೬-೧೩
ಕೋಕನದ ಪ್ರದ್ವಿಷ ೮೫-೭
ಕೋಪರುಜಾರ್ಥಂ ೮೨-೧೪
ಕ್ರಿಮಿಶಸ್ತ್ರನಿಚಯದಿಂ ೯೧-೧೭
ಕ್ರೂರಂಗಳ್ ೪-೩; ೮-೨
ಕ್ರೂರಾತ್ಮಂ ೬೧-೧
ಕ್ಲೇಶಿ ೮೭-೧೬
ಕ್ಷಪಾಕರನಿನಾತ್ಮಜಾಂಶಗತನಾಗೆ ೭೯-೨೨
ಕ್ಷಯವ್ಯಾಧಿ ೮೪-೨೩
ಕ್ಷಿತಿಜಂ ೮೯-೪


## ಖ


ಪು. ಪ. ಸ.

ಖಗ-ಸ್ಥಳ-ಜಳ ೨೧-೬
ಖರರುಗ್ಣಂ ಧನನೊಂದಿದಂದು
ದಯದೊಳ್ ೭೦-೧೪
ಖ್ಯಾತಿ ೮೮-೨೩


## ಗ


ಗಣಿತಧರ್ಮ ೯೮-೪೦
ಗಣ್ಯವ್ಯಾಪ್ತಿ ೯೬-೨೭
ಗಂಡಗಾಡಿ ೮೫-೨
ಗಂಡಾಂತಂ ೨೯-೫೧
ಗಂಡುದೊಟ್ಟಿನಿಕುಂ ೮೩-೨೧
ಗಂಡೊಂದೆರಟ್ ಪೆಣ್ಗಳುಂ ೧೪-೧೫
ಗದಾಖ್ಯಂ ೫೬-೨
ಗದಾಸಮುದ್ಭೂತನರಂ ೫೭-೧೨
ಗದಿತಫಳಂ ೮೬-೧೦
ಗರ್ಭಮವ್ಯಾಜದಿಂ
ದೊರೆಕೊಳ್ಗುಂ ೧೩-೮
ಗರ್ಭಾದಾನಲಗ್ನ ೧೨-೧
ಗಳಿತೇಂದು ೯೧-೧೭
ಗಾಳು ೮೫-೫
ಗುಣಕಾರರಾಶಿಯೆನಿಕುಂ ೩೮-೧೧
ಗುಣಾಧಿಕನೆನಿಕುಂ ೬೧-೫
ಗುಣಿ ೮೭-೧೮
ಗುಣೌಘಾನ್ವಿತೆ ೮೬-೮
ಗುರ್ದು ೯೦-೧೨
ಗುಹ್ಯೋದ್ಭವರುಜೆ ೯೧-೧೭
ಗೃಹಪ್ರಮದೆಯರ್ ೧೭-೧೮
ಗೊರವಂ ೬೩-೨
ಗೋಳಜಾತಂ ೫೭-೧೫
ಗೋಳಯೋಗ ೫೬-೫
ಗೌಳದೀಕ್ಷಾನ್ವಿತಂ ೬೩-೨
ಗ್ರಹಚಾರದುಕ್ತಿ ೧೭-೧೮
ಗ್ರಹರಾಶಿಭಾಗಕಲೆ ೩೪-೧
ಗ್ರಹವರ್ಣಂ ೪-೨
ಗ್ರಹಸಪ್ತಕಮುಂ ನಿಲೆ ೬೨-೮





ಪು. ಪ. ಸ.

ಗ್ರಾಮಪುರಜನಾಧಿಪನಕ್ಕುಂ ೭೧-೧೫
ಗ್ರೀಷ್ಮ ೯೩-೫


## ಘ


ಘಟಗೃಹಾದಿಮದ್ರೇಕ್ಕಾಣಂ ೭೫-೩೦
ಘಟದ್ವಿತೀಯತ್ರ್ಯಂಶಂ ೭೫-೩೧
ಘಟಪ್ರೋದ್ಭವಂ ೬೫-೧೧
ಘಟಾಂಶ ೮೬-೧೧
ಘಟಾಂತಿಮ ದ್ರೇಕ್ಕಾಣಂ ೭೬-೩೨
ಘನ ೧೨-೩
ಘರ್ಮಾಂಶುಪುತ್ರ ೮೫-೪
ಘೋರರುಜಾಪೀಡಿತದೇಹಂ ೬೨-೯


## ಚ


ಚಕ್ರಂ ೫೬-೪
ಚಕ್ರಸಂಭವಂ ೫೭-೧೪
ಚತುರಸ್ರ ೬-೧೬
ಚತುರ್ಥಾಂಶ ೩೮-೯
ಚಂದ್ರಂ ತೊಲೆಯೊಳ್ ೭೭-೭
ಚಂದ್ರ ದೆಶೆಯಪ್ಪಾರೋಹಿ
ಗೇಹಂಗಳೊಳ್ ೩೯-೧೯
ಚಂದ್ರದ್ವಿತ್ರಿಗೇಹಾದಿ
ದೀಕ್ಷಾಯೋಗಂ ೯೭-೩೪
ಚಂದ್ರಂ ಧನುವಿನೊಳಿರೆ ೭೮-೯
ಚಂದ್ರಪ್ರಭ ಚರಿತಂ ೯೮-೩೯
ಚಂದ್ರಮಂ
ಅಮರೇಜ್ಯಾಂಶದೊಳಿರೆ ೭೯-೨೦
ಚಂದ್ರಾರಿಷ್ಟಾಪಹಂ ೩೧-೧
ಚರದೊಳ್ ಕೂಡಿರೆ ಚಂದ್ರಂ ೫೯-೭
ಚರದ್ರೇಕ್ಕಾಣದೊಳ್ ೩೮-೮
ಚರರಾಶಿ ೪-೪, ೮೬-೧೨
ಚಾಪಂ ಯೋಗಂ ೫೭-೮
ಚಾಪದಂತಿಮದ್ರೇಕ್ಕಾಣಂ ೭೫-೨೭
ಚಾಪಮಧ್ಯಮದ್ರೇಕ್ಕಾಣಂ ೭೫-೨೬
ಚಿರಾಯು ೧೯-೩೩, ೩೬-೧೫
ಚೇತನ ೧೨-೩
ಚೋರ ೭೯-೧೯



ಪು. ಪ. ಸ.


## ಛ


ಛತ್ರಂ ಯೋಗಂ ೫೭-೮
ಛಾಯಾಂಗುಳಿಮಾನ ೯೫-೧೫
ಛಿದ್ರ ೬-೧೭


## ಜ


ಜಡ ೮೭-೧೭
ಜನಕಂ ಪದಾಂತರದೊಳಿರ್ದಪಂ ೧೫-೪
ಜನಕಂ ಬಂಧನವನ್ನೈದುಗುಂ ೧೫-೫
ಜನನಾಧಿಪನಿರೆ ೫೨-೮
ಜನಪತಿ ಸಮುಧನ್ಯನ್ ೫೪-೨೯
ಜನ್ಮಗೃಹಂ ೯೫-೧೬
ಜನ್ಮತಿರ್ಯಗ್ಜನ್ಮ ೯೭-೩೪
ಜನ್ಮದಿನ ೯೫-೧೪
ಜನ್ಮಮಾಸ ೯೪-೧೩
ಜನ್ಮಲಗ್ನ ಸದನ ೯೫-೨೦
ಜನ್ಮಾಹ ೯೪-೮
ಜನ್ಮೋದಯ ೯೫-೧೯
ಜಲಮಧ್ಯದೊಳಾಕೆ
ಬೆಸಲೆಯಕ್ಕುಂ ೧೮-೨೬
ಜಳೋದರ ೯೦-೯
ಜಾರಜಾತ ೧೫-೬, ೧೬-೯
ಜಾಮಿತ್ರ ೬-೧೭, ೮೭-೧೫
ಜಿತೇಂದ್ರಿಯಂ ೮೭-೧೮
ಜಿನಯೋಗಿ ೬೩-೨
ಜೀವಂ ೧೦-೨೩
ಜೀವಗೇಹ ೮೭-೧೮
ಜೀವನೋಪಾಯಿ ೬೩-೨
ಜೀವಾಂಶ ೮೫-೬
ಜೋಣರ ೨೩-೭
ಜೋಯಿಸಗಬ್ಬ ೯೮-೪೧


## ಝ


ಝಷದ್ವಿತೀಯತ್ರ್ಯಂಶಂ ೭೬-೩೪
ಝಷಾದಿಮದ್ರೇಕ್ಕಾಣಂ ೭೬-೩೩

ಪು.ಪ.ಸ.

## ತ

ತಕ್ಕುದಱಿವಳ್ ೮೫–೫
ತತ್ಕಾಲ ಶತ್ರುಮಿತ್ರೋದಾಸೀನ ೧೦–೧೮
ತದ್ದೆಸೆ ಶುಭದಂ ೩೭–೪
ತನುಜಂ ಸಾಯ್ಗುಂ ೮೧–೨
ತಂದೆಯಿಲ್ಲ ಪುಟ್ಟುವ ಪದದೊಳ್ ೧೫–೩
ತಪಂ ೬೩–೧, ೩, ೫
ತಮೋಗ್ರಹ ೧೫–೧
ತರುವಿನ ಸ್ಥಾನಸ್ಥರ್ ೨೨–೧೧
ತರು – ಸ್ಥಳ – ಜಳ ೨೨–೭, ೮
ತಱಿಟೆಯುಕ್ಕುಂ ೮೩–೨೦
ತಾಯ್
ಬಿಸುಡುಗುಮರ್ಭಕನಂ ೧೯–೩೩
ತಲೆಯಿಲ್ಲದೆ....ಜನಿಯಿಸುಗುಂ ೧೯–೩೭
ತಾರೆ ೯೬–೨೬
ತಾರೇಶಂ ನಿಲೆ ಮೇಷದೊಳ್ ೭೭–೧
ತಿಮಿರಾಕ್ಷಂ ೬೯–೧
ತಿರ್ಯಗ್ಗತಿ ೯೨–೨೪
ತಿರ್ಯಗ್ಜಾತಿ ಸಂಜ್ಞೋದಯಂ ೨೧–೧
ತೀಕ್ಷ್ಣಗು ೯೦–೮
ತುಷಾರದ್ಯುತಿ ೮೫–೪
ತುಹಿನಕರಂ ಮಿಥುನದೊಳಿರೆ ೭೭–೩
ಕುಹಿನಾಂಶಂ......
ಝುಷಗೃಹದೊಳ್ ೭೮–೧೨
ತುಳಾಂತಿಮದ್ರೇಕ್ಕಾಣಂ ೭೪–೨೧
ತುಳಾರ್ಕ್ಷ ಮಧ್ಯತ್ರ್ಯಂಶಂ ೭೪–೨೦
ತೂರ್ಯಗೃಹ ೯೦–೧೪
ತೂರ್ಯಸ್ಥಾನ ೯೦–೧೦
ತೊನ್ನಂ ೮೨–೧೫
ತೊಟ್ಟಿಕ್ಕೆ ೮೩–೨೧
ತೌಳಿ ೯೬–೨೩
ತೌಳಿಗೇಹೋದ್ಭವಂ ೬೪–೭
ತೌಳಿ ನಿಳಯದಾದಿತ್ರ್ಯಂಶಂ ೭೪–೧೯
ತ್ರಿಂಶದಂಶಕಂ ೪–೭, ೫–೯
ತ್ರಿಕೋಣ ೬–೧೭
ತ್ರಿಪ್ರಭೃತಿಗ್ರಹಂಗಳಿರೆ ೫೧–೧
ತ್ರ್ಯಂಶಂಶ ೩೮–೯
ತ್ವಚಂ ೧೨–೩

ಪು.ಪ.ಸ.

## ದ

ದಕ್ಷಿಣಾಯನ ೯೩–೧
ದಂಡಜಂ ೫೮–೧೮
ದಂಡ ಸಂಜ್ಞಿಕಂ ೫೬–೭
ದನುಜೇಜಜ್ಞ ೮೮–೨೩
ದನುಜೇಜ್ಯಂ ಕುಜಗೇಹದೊಳ್ ೬೭–೨೯
ದನುಜೇಜ್ಯಂ
ದಂಪತಿಕ್ಷೇತ್ರದೊಳ್ ೬೭–೨೯
ದನುಜೇಜ್ಯಂ ನಿಲೆ ಲಗ್ನದೊಳ್ ೭೦–೧೩
ದನುಜೇಜ್ಯಂ.....
ಲೇಸೆನಿಕ್ಕುಂ ೪೨–೧೨, ೧೩
ದಂತರೋಗಾನ್ವಿತಂ ೮೩–೧೯
ದಂಪತಿಗಳ್
ವ್ಯಭಿಚಾರಶೀಲರಿರ್ಬರುಂ ೮೧–೭
ದರಿದ್ರಂ ೬೨–೯
ದಶಹತಾಂಕ ೯೭–೨೮
ದಶಾಂಕಿ ೯೭–೨೮
ದಶಾನಾಥಂ ೩೮–೧೨
ದಶಾಂತರ್ದಶೆ ೯೭–೩೪
ದಶಾಪ್ರಮಾಣ ೩೭–೧
ದಾನವಮಂತ್ರಿ ೪೦–೨೭
ದಾನಶೋಧನ ವಿರಹಿತ ೯೬–೨೪
ದಾಮಂ ೫೬–೫
ದಾಮುಸಂಜನಿತಂ ೫೮–೧೬
ದಾಯಾರ್ಧ ೩೮–೯
ದಿತಿಜೇಜ್ಯ ೮೫–೪
ದಿತಿಪುತ್ರೇಜ್ಯ ೮೬–೯
ದಿನನಾಥಂ ೧೦–೧೯
ದಿನನಾಥಗೇಹಿ ೬೯–೧
ದಿನನಾಥಂ
ಜನನೋದಯಕ್ಕೆರಡರೊಳ್ ೬೯–೨
ದಿನನಾಥಂ ತೃತೀಯ
ನಿವಾಸಸ್ಥಿತನಾಗೆ ೬೯–೨
ದಿನನಾಥನಯ್ದಱೊಳಿರಲ್ ೬೯–೨
ದಿನನಾಥಂ ನಾಲ್ಕಱೊಳ್
ನಿಂದೊಡೆ ೬೯–೨
ದಿನನಾಥಂ ನಿಲೆ ಕರ್ಕಿಯೊಳ್ ೬೬–೧೫
ದಿನನಾಥಂ ನಿಲೆ ಸಿಂಹದೊಳ್ ೬೬–೧೫



ಪು.ಪ.ಸ.

ದಿನನಾಥಂ ಮಿಥುನರ್ಕ್ಷದೊಳ್
ನಿಲೆ ೬೬–೧೫
ದಿನಪಂ ನಿಲೆ ನೀಚದೊಳ್ ೩೪–೪
ದಿನಪನವರೋಹಿಣಿಯೊಳ್ ೩೯–೧೮
ದಿನಪನುದಯಕ್ಕೆ ನಿಲೆ ೬೯–೪
ದಿನಪಾಂಶದೊಳಿರೆ ಹಿಮಕರಂ ೭೯–೧೬
ದಿವಸೇಂದ್ರಂ ಕನ್ಯೆಯೊಳ್
ಕೂಡಿರೆ ೬೬–೧೬
ದಿವಸೇಂದ್ರಂ ತೌಳಿಯೊಳಿರೆ ೬೬–೧೬
ದಿವಸೇಂದ್ರಂ......
ಮಾಟ್ಕುಮೊಳ್ಪಂ ೪೧–೩, ೪
ದಿವಸೇಂದ್ರಂ ವೃಶ್ಚಿಕ......
ಕೂಡೆ ೬೬–೧೬
ದಿವಾಬಲಿಗಳ್ ೬–೨೧
ದಿವಾಸಂಜ್ಞ ೯೪–೧೦
ದಿವಿಜೇಜ್ಯಂ ನಿಲೆ
ಜನ್ಮಲಗ್ನಗೃಹದೊಳ್ ೭೦–೧೧, ೧೨
ದೀಕ್ಷೆ ೬೩–೧, ೩, ೪
ದುಃಖಾನ್ವಿತಂ ೬೨–೯
ದುರುಧುರಾಜಂ ೫೯–೨
ದುರುಧುರಾಯೋಗಂ ೫೯–೧
ದುಶ್ಚಿಕ್ಯ ೬–೧೭
ದುಷ್ಟ ಚೇಷ್ಟೆ ೮೬–೯
ದೃಷ್ಟಿಫಳಾನಿಷ್ಟಂ ೯೭–೩೪
ದೆಸೆಗೆ ಮುಖ್ಯಂ ೩೭–೩
ದೈತ್ಯೇಜ್ಯ ೮೫–೪
ದೈವಜ್ಞ ವದನತಿಲಕಂ ೯೮–೩೮
ದೋಷಾಪತಿ
ಪಾಪಗ್ರಹಯುತಂ ೧೮–೨೮
ದ್ಯೂನಗೇಹಂ ೮೬–೧೨
ದ್ಯೂನ ೬–೧೭, ೯೦–೧೫
ದ್ರೇಕ್ಕಾಣ ೪–೭, ೫–೮
ದ್ರೇಕ್ಕಾಣಾನ್ವಿತಂ ೩೧–೨
ದ್ವಾದಶ ಭಾಗಂ ೪–೭, ೫–೮
ದ್ವಾದಶವತ್ಸರಕ್ಕೆ
ಗರ್ಭಸ್ಥಿತಂಪುಟ್ಟುಗುಂ ೧೪–೧೭

ಪು.ಪ.ಸ.

ದ್ವಿತ್ರ್ಯಂಹಕಂ ೩೪–೩
ದ್ವಿದೇಹದುದಯ
ದ್ರೇಕ್ಕಾಣದೊಳ್ ೩೮–೮
ದ್ವಿಪುತ್ರೆ ೮೬–೯
ದ್ವಿಷದ ಗ್ರಹ ೧೦–೧೭
ದ್ವಿಸ್ವಭಾವ ರಾಶಿಗಳ್ ೪–೪
ದ್ವ್ಯಂಗರಾಶಿ ೮೯–೩

## ಧ

ಧನವಂತಂ ೬೯–೨
ಧನುರ್ಗೇಹಜಂ ೬೫–೯
ಧನುವಿನಾದಿಮದ್ರೇಕ್ಕಾಣಂ ೭೫–೨೫
ಧರಣೀನಾಥನಾಭಸಂ ೯೭–೩೪
ಧರಣೀಪುತ್ರನಿವಾಸದೊಳ್
ನಿಲೆಬುಧಂ ೬೬–೨೨
ಧರಾಪತಿ ಕೋಪ ೯೦–೧೩
ಧರ್ಮ ಮಂದಿರ ೯೩–೨
ಧಾತುವಾದ ಪ್ರಿಯಂ ೬೧–೧
ಧಾತ್ರೀತನಯಂ
ಚಾಪಾನಿಮೇಷಸ್ಥನಾಗಿರೆ ೬೬–೨೦
ಧಾತ್ರೀತನಯನೊಂದಿರೆ
ಕುಂಭೋದಯದೊಳ್ ೬೬–೨೦
ಧಾತ್ರೀತನಯಂ
ದಿನೇಶಗೃಹದೊಳ್ ೬೬–೨೦
ಧಾತ್ರೀಪತಿಯಕ್ಕುಂ ೬೦–೯

## ನ

ನಗಾಗ್ರಕೂಟ ೯೧–೧೯
ನದಿಯ ತಡಿಯೊಳ್......
ಪೆಱುಗುಮವಳ್ ೧೭–೨೦
ನಪುಂಸಾಕಾಧಿಪರ್ ೮–೩
ನರಗತಿ ೯೨–೨೪
ನರಕಗತಿ ೯೨–೨೪
ನರಶಭ ೯೧–೨೦
ನರಂ ಜನಿಯಿಸುಗುಂ ೧೭–೧೯
ನವಪರಿಶೋಧ್ಯಂ ೯೬–೨೪

ಪು.ಪ.ಸ.
ನವಕರ್ಮಾಧಿಪಂ ೫–೮
ನವಾಂಶಕಂ ೪–೭, ೫–೯
ನವಾಂಶಕೋಪಗತಂ ೩೧–೧
ನವಾಬ್ದದಿಂ
ಪುನರ್ಭವನಕ್ಕುಂ ೨೬–೨೯, ೩೦, ೩೧
ನವಿರ್ ೧೨–೩
ನಷ್ಟಜಾತಕ ೯೮–೩೫
ನಷ್ಟಜಾತಕ ಕುಶಲಂ ೯೬–೨೨
ನಳಯೋಗಂ ೫೬–೧
ನಳಸಮುದ್ಭವಂ ೫೭–೧೨
ನಾನಾ ಬಂಧನ ಪ್ರಾಪ್ತಂ ೬೨–೯
ನಾಲ್ಕು ತಿಂಗಳಿಂದಂ ಸಾಯ್ಗುಂ ೨೪–೧೪
ನಾಲ್ಕು ವರ್ಷದಿಂದಂ ನಿಧನಂ ೨೫–೨೨
ನಾಟಿಜ್ಜೋಡೆ ೮೫–೩
ನಕ್ಷತ್ರಂ ೯೪–೧೩
ನಿಖಿಳರಿಷ್ಟಂ ನಷ್ಟಮುಂ
ಪೊರ್ದುಗುಂ ೩೩–೧೫
ನಿಗಳಂ ೯೦–೮
ನಿಜಾಯುರ್ದಾಯಂ ೩೪–೫
ನಿಜೋಚ್ಚಂ ೬–೨೨
ನಿತ್ಯಪ್ರವಾಸಾನ್ವಿತಂ ೮೬–೧೨
ನಿಧನ ೯೦–೧೧
ನಿಂದಿತಂ ೩೭–೬, ೭೧–೧೭
ನಿಪುಣಂ ೬೧–೧; ೮೭–೧೮
ನಿರ್ದ್ರವ್ಯಂ ೬೯–೧
ನಿರ್ಯಾಣ ಪ್ರಾಪ್ತಿ ೯೮–೩೫
ನಿರ್ವೀರ್ಯ ೯೨–೨೮
ನಿಶಾಂಧಂ ೬೯–೧
ನಿಶಾಬಲಿಗಳ್ ೬–೨೧
ನಿಶಾಸಂಜ್ಞ ೯೪–೧೦
ನಿಶೇಶನವರೋಹಿಣಿಯೊಳ್ ೩೯–೨೦
ನಿಶ್ಶ್ರೇಯಸ ಲಕ್ಷ್ಮಿ ೯೨–೨೮
ನಿಸರ್ಗಮಿತ್ರರ್ ೯–೧೪
ನೀಚ ೭–೨೪
ನೀಚನವೋಘಂ ೮೨–೧೦
ನೀಚಾಭಿಲಾಷಿ ೩೭–೫
ನೀಚಾಸ್ಪದ ೯೨–೨೬
ನೀತಿವಿದಂ ೭೧–೪
ನೃಗತಿ ೯೨–೨೫
ನೃತ್ಯ ಪ್ರವೀಣಂ ೭೯–೧೯
ನೃಪನಕ್ಕುಂ ೫೧–೨, ೫೨–೯,
೫೨–೧೨, ೫೩–೧೭, ೫೪–೨೩
ನೃಪನಕ್ಕುಮವಂ ೫೨–೭
ನೃಪರಿಂ ಕವರ್ತೆವಡುಗುಂ ೬೯–೨
ನೃಯುಗ್ಮ ಮಧ್ಯತ್ರ್ಯಂಶಂ ೭೩–೮
ನೃಯುಗ್ಮೋದ್ಭವಂ ೬೪–೩
ನೆಯ್ಗೆಕಾಱಂ ೭೭–೩
ನೆಲದೊಳ್ ಪುಟ್ಟುಗುಂ ೧೮–೨೩
ನೇತ್ರವಿಹೀನಂ ೧೬–೩೮

## ಪ

ಪಗೆವರ್ ನಿರಂತರಂ ೧೦–೧೬
ಪಂಕಜ ಪ್ರಿಯಂ.....
ತುಹಿನ ಪ್ರದ್ಯೋತಾದಿ ೭೯–೨೩
ಪಂಚತ್ವ ೮೯–೧
ಪಂಚತ್ವನಾಗಿ ಪಂಚಮ
ಸಮದೊಳ್ ೨೫–೨೩
ಪಡಪಾಳಿಯಧಿಕ
ಕಾಮಿಯೆನಿಕ್ಕುಂ ೭೯–೨೦
ಪಂಡಿತಂ ೮೭–೧೮
ಪದ್ಮಪ್ರಿಯಾಪುತ್ರನಾ.....
ದೆಸೆಯೊಳ್ ೪೦–೨೯
ಪನ್ನಗತ್ರ್ಯಂಶ ೯೧–೨೦
ಪರಜಾತಂ ೧೬–೮
ಪರದಾರಶಿಲಂ ೬೧–೧, ೩; ೭೯–೨೧
ಪರಮಾಯು ೩೫–೯, ೧೦, ೧೪;
೯೭–೨೮
ಪರಮೋಚ್ಚಸ್ಥಾಯಿ ೬–೨೩
ಪರವಂಚನಶೀಲ ೭೯–೧೭
ಪರಸ್ತ್ರೀಲೋಲ ೮೧–೬
ಪರೇತವನದೊಳ್ ತದ್ಬಾಲಕಂಗೆ
ಜನ್ಮಂ ೧೮–೨೪



ಪು.ಪ.ಸ.
ಪಲರುಮೊರ್ವಯೆ
ಪುಟ್ಟುವರ್ ೧೪–೧೬
ಪಲ್ವೆರಸು ಪುಟ್ಟುಗುಂ ೨೦–೪೦
ಪಶುವರ್ಣ ೨೧–೪
ಪಸೆ ೯೭–೩೧
ಪಾತಕ ೮೯–೭
ಪಾತಾಳ ೬–೧೬
ಪಾದದೃಷ್ಟಿ ೭–೨೫
ಪಾದವಿಹೀನದೃಷ್ಟಿ ೭–೨೫
ಪಾದೋನಕ್ರಮಂದೃಷ್ಟಿ ೭–೨೬
ಪಾಪಗ್ರಹಂ ೩೪–೫, ೯೦–೧೦
ಪಾಪಾನ್ವಿತಂ ೨೦–೪೧
ಪಾರ್ಶ್ವದೊಳುದಯಂ ೧೮–೩೦
ಪಾಶಂ ೫೬–೫
ಪಾಶಜಂ ೫೮–೧೬
ಪಿಂಡಾಯುಷ್ಯಂ ೩೫-೧೧, ೧೨
ಪಿಶಾಚಪ್ರಾಪ್ತನಕ್ಕುಂ ೮೩–೧೮
ಪುಂಜನ್ಮಂ ೧೩–೧೦, ೧೧, ೧೨
ಪುಟ್ಟಿದಂ ಭೂಪನಕ್ಕುಂ ೫೧–೩, ೪,
೫, ೬
ಪುತ್ರಭಾಗಿ ೮೧–೧
ಪುತ್ರಮಂದಿರ ೯೩–೨
ಪುತ್ರವಿತ್ತಾಢ್ಯತೆ ೮೮–೨೪
ಪುರುಷತ್ರಯಂ ೧೩–೧೪
ಪುರುಷರಾಶಿಗಳ್ ೪–೩
ಪುರುಷಶೀಲೆ ೮೮–೨೨
ಪುರುಷ ಸ್ತ್ರೀ ಜಾತಕ ಫಲ ೮೫–೧
ಪುರುಷಾಚಾರಾಢ್ಯೆ ೮೫–೭
ಪೃಚ್ಛಕಲಗ್ನ ೯೪–೮
ಪೃಷ್ಠೋದಯ ೬–೨೧, ೧೮–೩೦
ಪೆಣ್ಣೊಂದೆರಟೞ್ ಗಂಡುಗಳ್ ೧೩–೧೪
ಪೆರ್ಗಡೆಯಕ್ಕುಂ ೬೦–೯
ಪೆಟವಂ ೨೦–೪೧
ಪೇಡಿ ೮೫–೫
ಪೊಗೆ ೯೦–೧೨
ಪೊಂಬೆಸಕೆಯ್ವಂ ೭೭–೭
ಪೌರ್ಣಮಾಸಿ ೯೪–೧೨
ಪ್ರಪಾತದಿಂ ೯೦–೧೫
ಪ್ರಮಾಣಾಬ್ದ ೨೭–೩೮
ಪ್ರಶ್ನಲಗ್ನ ೨೧–೧
ಪ್ರಸವಕಾಲಂ ೧೪–೧೮, ೧೯
ಪ್ರಹಸನಶೀಲಂ ೭೯–೨೦
ಪ್ಲೀಹಸ್ವಸನಕ್ಷಯಗುಲ್ಮ ೮೨–೧೩

## ಫ

ಫಣಧರ ೬–೧೮
ಫಣಿಪಾಶಂ ೯೦–೮

## ಬ

ಬಂಧನ ೮೪–೨೫, ೯೦–೧೨
ಬಂಧು ೬–೧೬
ಬಲವಂತರ್ ೮–೬, ೭; ೯–೯, ೧೦
ಬಹಿತ್ರದೊಳ್ ಜನಿಯಿಸುಗುಂ ೧೮–೨೫
ಬಳಯುಕ್ತರ್ ೮೮–೨೨
ಬಳರಹಿತರ್ ೮೮–೨೨
ಬಳಾಬಳಾವಧಾನಂ ೯೭–೩೪
ಬಾಟನೇಟುವರ್ಷದಿನತ್ತಂ ೨೬–೨೬,
೨೭, ೨೮
ಬಿಂದುಪ್ರದ ೪೭–ಗದ್ಯ
ಬಿಸುಡುಗಾರ್ತಿ ೮೬–೧೩
ಬುದ್ಬುದನೇತ್ರಂ ೬೯–೧
ಬುದ್ಧಿ ೬–೧೭
ಬುಧಕರ್ಮಾಂಶಂ ೮೭–೧೮
ಬುಧಂ ಕನ್ನೆಯೊಳ್ ೬೭–೨೩
ಬುಧಂ ಚಾಪದೊಳಿರ್ದೊಡೆ ೬೭–೨೪
ಬುಧಂ ಝುಷದೊಳ್ ೬೭–೨೫
ಬುಧಂ ದಿವಸೇಂದ್ರಾಲಯದೊಳ್
೬೭–೨೪
ಬುಧಂ ಶಶಿಗೇಹದೊಳ್ ೬೭–೨೪
ಬುಧಂ ನರಯುಗ್ಮೋದಯದೊಳ್
೬೭–೨೩
ಬುಧನಿರೆ ಶನಿಗೃಹದೊಳ್ ೬೭–೨೫
ಬೌದ್ಧತಪಸ್ವಿ ೬೩–೨
ಬ್ರಹ್ಮವಾದಿನಿ ೮೮–೨೩

ಪು.ಪ.ಸ.

## ಭ

ಭಗಣ ೯೩-೩
ಭಾಗ್ಯಸೌಖ್ಯವತಿ ೮೭-೧೯
ಭಾರ್ಗವಾಂಶ ೮೫-೭
ಭಾವಫಲ ೬೮-೩೫, ೭೧-೧೬, ೧೭
ಭುಕ್ತಭಾಗಮಿತಿ ೯೪-೯
ಭುಜಂಗಪಾಶ ೮೪-೨೫
ಭೂಪತಿಯಕ್ಕುಂ ೨೯-೫೧
ಭೂಪತಿಯೆನಿಕುಂ ೬೧-೭
ಭೂಮಿ-ಮರುಭೂಮಿ ೨೨-೯
ಭೃಗುಜಂ ಝಷದೊಳ್ ೬೮-೩೧
ಭೃಗುಜಂ ಧನುರ್ಭವನದೊಳ್ ೬೮-೩೧
ಭೃಗುಜಂ ಮೃಗಕುಂಭಂಗಳೊಳ್ ೬೮-೩೧
ಭೃಗುನಂದನ ೮೬-೧೧
ಭೃತ್ಯವರ್ಗೋತ್ತಮಂ ೮೪-೨೪
ಭೌಮಗೇಹಂ ೮೭-೧೭

## ಮ

ಮಕರಾಳಯಾದಿಮದ್ರೇಕ್ಕಾಣಂ ೭೫-೨೮
ಮಕುಟಪಾತ ೯೦-೧೧
ಮಡಕೆ ಮಾಟ್ಪಂ ೬೧-೫
ಮಂಡಣ ೮೯-೩
ಮಂತ್ರಿ ೮೯-೨
ಮಂದಾಂಶ ೮೫-೬
ಮದವಂ ೮೭-೧೬
ಮಧ್ಯಂಬಳಂ ೮೮-೨೨
ಮಧ್ಯಫಳದಂ ೩೭-೬
ಮಧ್ಯಾಂಶಕ ೬-೨೦
ಮಧ್ಯಾಸ್ಪದ ೯೨-೨೬
ಮರಮೊದಲೊಳ್.....ಜನ್ಮಂ ೧೭-೨೨
ಮಱುವಾಳ ತಾಯ ಬಸಿರೊಳ್ ಬಂದಂ ೬೧-೨
ಮಱುವಾಟ್ಟಿ ೮೫-೪, ೮೬-೧೩
ಮರ್ತ್ಯಾಧಮಂ ೮೬-೧೭

ಪು.ಪ.ಸ.

ಮಲ್ಲಂ ೬೧-೩
ಮಹಾಸತಿ ೮೫-೫
ಮಹಿಜಾತಂ ೮೯-೨
ಮಹಿತನಯಂ ನೆಲಸಿರೆ ಮೃಗಗೃಹದೊಳ್ ೬೬-೨೧
ಮಹೇಂದ್ರಜಾಳಜ್ಞಂ ೬೧-೪
ಮಾಸಾಧಿಪರ್ ೧೨-೪
ಮಾಳಾಪ್ರಸವನರಂ ೫೮-೧೯
ಮಾಳಾಯೋಗಂ ೫೭-೯
ಮಿಗುವನ್ನರೊಳರಿ ನೆಲವರದೆಡೆಯೊಳ್ ೯೧-೨೨
ಮಿತ್ರಕ್ಷೇತ್ರದೊಳುತ್ಪಲ ಮಿತ್ರಂ ನಿಲೆ ೭೯-೧೪
ಮಿತ್ರರ್ ೮೬-೧೩
ಮಿಥುನದಂತಿಮದ್ರೇಕ್ಕಾಣಂ ೭೩-೯
ಮಿಥುನಾಲಯಾದಿಮದ್ರೇಕ್ಕಾಣಂ ೭೨-೭
ಮಿಶ್ರಿತಂ ೯೧-೨೦
ಮೀನಾಲಯಪ್ರೋದ್ಭವಂ ೬೫-೧೨
ಮುಚ್ಚೆ ೯೧-೨೩
ಮುಶಲಂ ೫೬-೧
ಮುಸಳಭವಂ ೫೭-೧೧
ಮೂಗಂ ೨೦-೨೯
ಮೂಢಂ ೬೨-೯
ಮೂಱುವರ್ಷದೊಳ್ ಮಡಿಗುಮವಂ ೨೫-೨೦, ೨೧
ಮೂಲ ತ್ರಿಕೋಣ ೭-೨೪, ೫೧-೧
ಮೃಗಾಧಿಪಾದಿತ್ರ್ಯಂಶಂ ೭೩-೧೩
ಮೂವಡಿ ೯೧-೨೩
ಮೃಗನಿಳಯ ಮಧ್ಯಮದ್ರೇಕ್ಕಾಣಂ ೭೫-೨೯
ಮೃಗಪ್ರೋದ್ಭವಂ ೬೫-೧೦
ಮೇಷಜಂ ೬೪-೧
ಮೇಷದೊಳರ್ಕಂ ನಿಲೆ ೬೫-೧೪
ಮೇಷಮಧ್ಯಮದ್ರೇಕ್ಕಾಣಂ ೭೨-೨
ಮೇಷಾದಿ ಲಗ್ನಾಂಶಕಂ ಬರೆ.... ೬೦-೧೨





ಪು.ಪ.ಸ.

ಮೊಲೆನಾಗಂ ೮೪-೨೩
ಮೊಳೆಗಾಲರಂಡೆ ೮೬-೧೩

## ಯ

ಯಮಳ ಪುಂ ಜನ್ಮಂ ೧೩-೧೩
ಯಮಳ ಪುಂ ಸ್ತ್ರೀ ಜನ್ಮಂ ೧೩-೧೩
ಯಮಳ ಸ್ತ್ರೀ ಜನ್ಮಂ ೧೩-೧೩
ಯಂತ್ರಂಗಳಂ ಬಲ್ಲಂ ೬೧-೧
ಯಂತ್ರನಿರೋಧಸ್ಥಿತ ಬಾಧೆ ೯೦-೧೫
ಯುಗಯೋಗಜಾತಂ ೫೭-೧೫
ಯುವಂ ಯೋಗ ೫೬-೬
ಯುವತಿಮಧ್ಯಮದ್ರೇಕ್ಕಾಣಂ ೭೪-೧೭
ಯುವಯೋಗಜಂ ೫೮-೧೭
ಯೂಪ ೫೬-೭
ಯೂಪಜನಿತಂ ೫೮-೧೮

## ರ

ರಕ್ತಾಮಯ ೮೯-೨
ರಜೋಗ್ರಹ ೧೫-೧
ರಜ್ಜು ೫೬-೧
ರಜ್ಜು ಪ್ರಭವಂ ೫೭-೧೧
ರಂಡೆ ೮೬-೧೩
ರತಾಸಕ್ತೆ ೮೫-೫
ರವಿ ಕುಂಭದೊಳ್ ಕೂಡೆ ೬೬-೧೭
ರವಿ ಚಾಪಕ್ಷೇತ್ರದೊಳ್ ೬೬-೧೭
ರವಿಜಂ ೧೧-೨೫
ರವಿಪುತ್ರಂ.....ಅಭೀಷ್ಟ ಪ್ರಾಪ್ತಿಯಂ ಮಾಡುಗುಂ ೪೩-೧೪, ೧೫
ರವಿ ಝಷದೊಳಿರೆ ೬೬-೧೭
ರವಿ ಮಕರದೊಳಿರೆ ೬೬-೧೭
ರಸಭಾವಸಮನ್ವಿತಂ ೯೯-೪೩
ರಾಜಯೋಗಂ ೨೪-೧೦
ರಾಜಸೂನು ರಾಜನೆನಿಕ್ಕುಂ ೫೪-೨೮
ರಾಶಿಪ್ರಮಾಣಾಬ್ದ ೩೪-೨

ಪು.ಪ.ಸ.

ರಾಶಿಫಳೋತ್ಕರಂ ೯೭-೩೪
ರಿಪುನಾಮಯೋಗ ೫೬-೭
ರಿಪ್ಪ ೬-೧೭
ರುಚಿರಶ್ರೋಣಿ ೮೭-೧೫
ರುಜಾಬಾಧೆಯಿಂ ಬರ್ದುಕಿರ್ಕುಂ ೮೩-೨೨
ರುಧಿರಂ ೯೦-೧೧
ರೇಖಾ ೪೭-ಗ

## ಲ

ಲಗ್ನಭಾವನಾಮಫಳ ೫-೧೫
ಲಗ್ನಾದಿಭಾವೋತ್ತಮಂ ೭೧-೧೮
ಲಗ್ನೇಶಫಳ ೩೮-೧೩
ಲಗ್ನೋದ್ಭವಂ ಪೊಂದುಗುಂ ೨೮-೩೯, ೪೨
ಲಯಂ ೯೦-೯
ಲಿಂಗವ್ಯಾಧಿಯಿಂ ಬರ್ದುಗುಂ ೮೨-೧೧
ಲಿಪಿಪಿಂಡ ೯೬-೨೧

## ವ

ವಕ್ರ ೯೩-೬
ವಜ್ರಯೋಗ ೫೬-೬
ವಜ್ರಸಮುದ್ಭವಂ ೫೮-೧೭
ವಣಿಜೋದಯಸ್ಥಂ ೬೯-೧
ವಧೂಗೃಹ ೯೦-೯
ವಧೂಗೃಹಾದಿತ್ರ್ಯಂಶಂ ೭೪-೧೬
ವಧೂಟೀ ೮೭-೧೮
ವಧೂಟಿಜನ್ಮಂ ೧೩-೧೦, ೧೧, ೧೨
ವನಜದ್ವಿಟ್ಸುತನೊಂದಿದಂದುದಯದೊಳ್ ೭೦-೧೦
ವನಿತಾಭರ್ತೃ ೮೬-೧೨
ವಂಧ್ಯಾಸ್ತ್ರೀವರಂ ತನ್ನರಂ ೮೧-೫
ವಪುರಾಕೃತಿ ೮೫-೧
ವಯೋನುಮಾನಕ್ರಮ ೯೩-೩
ವರ್ಗೋತ್ತಮಂ ೬-೨೦, ೬೧-೨

ಪು.ಪ.ಸ.

ವರ್ಗೋತ್ತಮಾಂಶ ೮೬-೨೫
ವರ್ಷಾಗಮ ೯೩-೫
ವಲ್ಲಕೀ ಸಂಜ್ಞಿತಂ ೫೬-೫
ವಲ್ಲಕೀ ಯೋಗಜಾತನರಂ ೫೮-೧೬
ವಸಂತಂ ೯೩-೫
ವಸುಧಾಪುತ್ರ ೮೭-೧೫
ವಸ್ತ್ರಂಗಳಂ ಮಾಱುವಂ ೬೧-೨
ವಾಕ್ಪಾರುಷ್ಯ ೮೪-೨೩
ವಾಗ್ಮಿ ೬೧-೪
ವಾತೋವೇಧಿಯಕ್ಕುಂ ೮೩-೧೯
ವಾಪೀಯೋಗದೊಳ್ ಪುಟ್ಟಿದಂ ೫೮-೧೭
ವಾಪೀಯೊಗಂ ೫೬-೬
ವಾಪೀಪತನ ೮೯-೪
ವಾಮನಂ ನರಂ ೨೦-೪೦
ವಾರ್ಧಿಪ್ರಸವಂ ೫೭-೧೪
ವಿಕಟ ೮೩-೨೨
ವಿಕೃತದಂತನೆನಿಕ್ಕುಂ ೮೩-೨೦
ವಿಣ್ಮೃಧ್ಯದಿಂ ೯೧-೧೬
ವಿತ್ತಭವನ ೯೦-೧೪
ವಿತ್ತಹಾನಿ ೮೯-೫
ವಿತ್ತಾನುವರ್ತಿನಿ ೮೫-೭
ವಿನಷ್ಟೇಕ್ಷಣಂ ೬೯-೧
ವಿನೀತಂ ೬೧-೨
ವಿಯೋನಿಜನ್ಮಂ ೨೧-೨
ವೀರ್ಯಾನ್ವಿತರ್ ೮೯-೧
ವಿಲಗ್ನ ೧೨-೨
ವಿಲಗ್ನ ಜನಿತಂಗೆ ೪೯-೪
ವಿಲಗ್ನದೊಳಿನಾಪತ್ಯೇಂದುಗಳ್ ೨೯-೫೦
ವಿಲಗ್ನಭಾವತ್ರ್ಯಂಶತಿಲಕ್ಷಣ ೯೭-೩೪
ವಿಲೋಮ ೯೩-೭
ವಿಶ್ವಂಭರಾ ಪುತ್ರನಾ
ಅವರೋಹಿಯಪ್ಪದೆಶೆಯೊಳ್
೩೯-೨೨
ವಿಷೋದ್ಭವಂ ೫೮-೧೮
ವಿಸಜಾರಿ ಹರಿಯೊಳಿರೆ ೭೭-೫
ವಿಹಗಂ ೯೧-೨೦

ಪು.ಪ.ಸ.

ವಿಹಗಯೋಗ ೫೬-೩
ವಿಹಗಯೋಗದೊಳ್ ಪುಟ್ಟಿದಂ ೫೭-೧೪
ವಿಳಯಂ ೮೯-೧
ವೃತ್ತತ್ರಿಕೋಣೋಚ್ಚ ೧೭-೧೬
ವೃಶ್ಚಿಕಗೃಹದ ಮಧ್ಯಮ
ದ್ರೇಕ್ಕಾಣಂ ೭೪-೨೩
ವೃಶ್ಚಿಕಗೇಹ ಜಾತನಂ ೬೫-೮
ವೃಶ್ಚಿಕಾದಿತ್ರ್ಯಂಶಂ ೭೪-೨೨
ವೃಶ್ಚಿಕಾಂತಿಮದ್ರೇಕ್ಕಾಣಂ ೭೫-೨೪
ವೃಷಗೇಹದಾದಿಮದ್ರೇಕ್ಕಾಣಂ ೭೨-೪
ವೃಷಣನಾಶ ೮೮-೨೫
ವೃಷಭದಂತಿಮದ್ರೇಕ್ಕಾಣಂ ೭೨-೬
ವೇಲಾಯೋಗ ೫೭-೮
ವೇಶ್ಮ ೬-೧೬
ವೈಪರೀತ್ಯ ೧೨-೭
ವೈಶ್ವಾನರ ೯೧-೨೦
ವ್ಯಯ ೧೦-೧೬
ವ್ಯೋಗತರ್ ೮೯-೧

## ಶ

ಶಕಟಂ ೫೬-೨
ಶಕಟಭವಂ ೫೭-೧೩
ಶಕ್ತಜನಿತಂ ೫೮-೧೮
ಶಕ್ತಿಯೋಗ ೫೬-೭
ಶಕ್ರೇಜ್ಯ ೮೫-೪
ಶಂಕಳಚ್ಛಾಯಾಂಗುಳ ೯೬-೨೧
ಶತಪತ್ರಶತ್ರುಮಕರಸ್ಥಿತನಾಗೆ ೭೮-೧೦
ಶತಮಖಮಹತ್ತರಂ ೯೨-೨೪
ಶನಿಶಕ್ರೇಜ್ಯ ಗೃಹಸ್ಥನಾಗೆ ೬೮-೩೪
ಶನಿಸಂಕ್ರಮಿಸಿದೊಡೆ ೭೧-೧೫
ಶನಿಸಿಂಹದೊಳ್ ಕೂಡಿದಂದು ೬೮-೩೪
ಶರತ್ಕಾಲಂ ೯೩-೫
ಶಶಿ ೧೦-೨೦
ಶಶಿಕನ್ನೆಯೊಳಿರೆ ೭೭-೬
ಶಶಿನಿಜಾಂಶದೊಳ್ ೭೯-೧೭
ಶಶಿಯಿನೊಗೆದರಿಷ್ಟಂ ೩೨-೯, ೧೦
ಶಾಕ್ವರ ೯೪-೧೦





ಪು.ಪ.ಸ.

ಶಿಶಿರಂ ೯೩-೪
ಶಿಶಿರಕರನರಿಷ್ಟಂ ೩೧-೩
ಶಿಶಿರಕರನೆಲ್ಲಿನಿಂದೊಡಂ ೭೮-೧೫
ಶಿಷ್ಟಾರಿಷ್ಟ ೧೨-೬
ಶೀರ್ಷೋದಯ ೬-೨೧
ಶೀರ್ಷೋದಯದುದಯಂ ೧೮-೩೦
ಶೀಲವಿಭೂಷಣಾಢ್ಯೆ ೮೫-೨
ಶುಕ್ರಂ ೧೧-೨೪
ಶುನಕಂ ೯೧-೨೦
ಶುಭ ಅಶುಭಮಧ್ಯಫಳ ೪೧-೨
ಶುಭಗ್ರಹ ೮-೨
ಶುಭಗ್ರಹಂ ಸಕಲದುರಿತಮಂ
ಪರಿಹರಿಕುಂ ೩೨-೧೩
ಶುಭಂ ಶುಭೇತರಂ ೩೮-೧೫
ಶುಭಾಶುಭಂಗಳ ಫಲಂ ೪೩-೧೬
ಶೂನ್ಯ ದೈವತಂ ೬೩-೩
ಶೂಲಂ ೫೬-೫
ಶೂಲೋದ್ಭವಂ ೫೭-೧೫
ಶೃಂಗಾಟಂ ೫೬-೨
ಶೃಂಗಾಟಕಸಂಭವಂ ೫೭-೧೩
ಶೇಷಗ್ರಹ ೪೧-೧
ಶೌರ್ಯಮತಿಯುಕ್ತಂ ೬೯-೨

## ಷ

ಷಡಬ್ದಾಂತರದೊಳ್ ೨೬-೨೫
ಷಡ್ವರ್ಗ ೪-೭
ಷಂಡ ೮೬-೧೨

## ಸ

ಸಂವತ್ಸರಾಭ್ಯಂತರದೊಳೆ.....
ಮರಣಂ ೨೯-೫೨
ಸಂವತ್ಸರಿಕಂ ೯೪-೯
ಸಕಳಶಾಸ್ತ್ರಪ್ರೀತೆ ೮೮-೨೩
ಸಕಳಾಚಾರ್ಯಮತಾಂತಸ್ಸಾರಂ
೯೮-೩೬
ಸಂಕ್ಲೇಶನ ೯೧-೨೦

ಪು.ಪ.ಸ.

ಸತ್ವಗ್ರಹ ೧೫-೧
ಸದ್ಗುಣಾನ್ವಿತೆ ೮೭-೧೯
ಸದ್ಗ್ರಹಂ ಕಿಡಿಸುಗುಂ
ನಿಜದಾಯದೊಳ್ ೩೪-೬
ಸದ್ಯೋಮರಣಂ ೨೩-೧, ೨, ೩, ೪, ೬
ಸನಾಥಧೃತಿಯೊಳೆ ಬಾಳ್ಗುಂ ೪೯-೨
ಸಂತಪ್ತ ಮನಸ್ಕಂ ೬೨-೯
ಸಪ್ತಮಾಂಶ ಜನಿತಂ ೩೮-೯
ಸಪ್ತಮುನೀಂದ್ರರುದಯ ೩೨-೧೪
ಸಪ್ತಾಘಾತದಿಂ ಪೊಂದುಗುಂ ೬೨-೯
ಸಪ್ತಾಘತ ೯೭-೩೦
ಸಮುದ್ರದಿಂದೀಯೋಗಂ ೫೬-೪
ಸರ್ಪನಿಂ ಕಟ್ಟುಪಟ್ಟವಂ ೭೬-೩೫
ಸರ್ಪಪ್ರಸವ ನರಂ ೫೮-೧೯
ಸರ್ಪಯೋಗಂ ೫೭-೯
ಸರ್ವರಿಷ್ಟಂ ಕಿಡುಗುಂ ೩೨-೧೧
ಸರ್ವೇಕ್ಷಣ ೯೦-೯
ಸಹಜ ೧೦-೧೬
ಸಾಧು ಪುಟ್ಟಿದ ವಧು ೮೫-೨
ಸಾಮಾನ್ಯ ಫಳಂ ೩೭-೭
ಸಾಯ್ಗುಂ ೧೯-೩೫
ಸಾರ್ಥಕಪದವಿನ್ಯಾಸಂ ೯೮-೩೭
ಸಾವನಬ್ದದ್ವಯದೊಳ್ ೨೪-೧೮, ೧೯
ಸಿತಕುಷ್ಠ ೮೨-೧೨
ಸಿತಾಂಶ ೮೫-೬
ಸಿತಗೇಹಂ ೮೭-೧೮
ಸೀತಗು ೯೦-೮
ಸಿಂಹೋದ್ಭವಂ ೬೪-೫
ಸಿಂಹಮಧ್ಯಮದ್ರೇಕ್ಕಾಣಂ ೭೩-೧೪
ಸಿಂಹದಂತಿಮದ್ರೇಕ್ಕಾಣಂ ೭೩-೧೫
ಸುಕರಂ ೯೮-೩೭
ಸುಖ ೮೯-೪
ಸುಧಾಜನ್ಮಂ ೩೧-೪
ಸುಧಾಸಂಭವ ೮೬-೯
ಸುನಪಾಯೋಗ ೫೯-೧
ಸುನಪಾಪ್ರಸೂತನತಂ ೫೯-೨


616

ಪು.ಪ.ಸ.

ಸುಂದರಿ ಸಾಯುಜ್ಯಂ ೧-೨
ಸುಭಗ ೮೭-೧೮, ೯೯-೪೩
ಸುರಗತಿ ೯೨-೨೪
ಸುರನಾಥೇಜ್ಯ ೮೫-೩
ಸುರವಂದ್ಯಂ ಮೃಗರ್ಕ್ಷದೊಳ್ ೬೭-೨೭
ಸುರವಂದ್ಯಂ ವೃಷತೌಳಿಯೊಳ್ ೬೭-೨೭
ಸುರೇಜ್ಯನವರೋಹಿಣಿಯೊಳ್ ೪೦-೨೬
ಸುರೇಜ್ಯನಿರೆ ಕುಂಭದೊಳ್ ೬೭-೨೮
ಸುರೇಜ್ಯನಿರೆ ಹಿಮಾಂಶು
ಗೃಹದೊಳ್ ೬೭-೨೮
ಸೂತ್ರಾರ್ಥೋಕ್ತಿ ೬೧-೧೬
ಸೂರ್ಯಾಪತ್ಯ ೮೬-೧೨
ಸೂರ್ಯಗ್ರಹಣಂ ೨೯-೫೦
ಸೇನಾಪತಿಯಕ್ಕುಂ ೬೦-೯
ಸೊಡರಬತ್ತಿ ೧೬-೧೦, ೧೧
ಸೋಮಗ್ರಹಣಂ ೨೯-೫೦
ಸೋಮಜಂ ೮೯-೨
ಸೋಮಸೂನು ೧೦-೨೨
ಸೌಮ್ಯಂಗಳ್ ೪-೩
ಸೌಮ್ಯಾಂಶ ೮೭-೧೫
ಸೌರಿ ೮೯-೨
ಸ್ತ್ರೀ ಜಾತಕಂ ೯೭-೩೪
ಸ್ತ್ರೀ ಧನಾನ್ವಿತಂ ೬೧-೬
ಸ್ತ್ರೀ ಪ್ರೇಷ್ಯಂ ೭೯-೧೭
ಸ್ತ್ರೀ ಲೋಲುಪಂ ೮೭-೧೭
ಸ್ತ್ರೀ ವ್ಯಸನಾರ್ಥಿ ೮೭-೧೭
ಸ್ಥಿರದ್ರೇಕ್ಕಾಣದೊಳ್ ೩೮-೮
ಸ್ಥಿರರಾಶಿಗಳ್ ೪-೪

ಪು.ಪ.ಸ.

ಸ್ಥಿರಾಲಯಂ ೮೯-೩
ಸ್ತ್ರೀಶತ್ರುವಕ್ಕುಂ ನರಂ ೬೫-೧೪
ಸ್ವಕುಲದೂಷಣಂ ೮೨-೯
ಸ್ವಭವನದ್ರೇಕ್ಕಾಣ ೩೪-೩
ಸ್ವಭ್ರದಿಂ ೯೨-೨೫

## ಹ

ಹರಿಣಾಂಕಂ ಕುಂಭದೊಳಿರೆ ೭೯-೧೧
ಹರಿಣಾಂಕಂ ಪರಮೋಚ್ಚದೊಳಿರೆ
೫೫-೧೦
ಹರಿಣಾಂಕಂ ಹೋರೆಯೊಳ್
ನಿಲೆ ೭೯-೧೩
ಹರಿಣಾಂಕಾಶ್ರಿತ ಮಂದರಾಧಿಪತಿ
೮೦-೨೬
ಹಲ ೫೬-೩
ಹಲಸಮುದ್ಭವಂ ೫೭-೧೩
ಹವಿರ್ಭುಜ ೯೦-೧೩
ಹಿಬುಕ ೬-೧೬
ಹಿಮಕರನಿರೆಧರಣಿಸುತಾಂಶಕದೊಳ್
೭೯-೧೮
ಹಿಮಕರನಿರ್ದರಾಶಿಯಫಳಂ ೬೮-೩೫
ಹಿಮಧಾಮ ೮೭-೧೭
ಹಿಮರುಕ್ಪುತ್ರಂ ೪೨-೮, ೯
ಹಿಮರುಚಿ ಕರ್ಕಿಯೊಳಿರೆ ೭೭-೪
ಹೀನೋದಯ ೯೨-೨೮
ಹೇಮಂತ ೯೩-೫
ಹೊರಸು ೧೭-೧೬, ೧೭
ಹೋರಾ ೪-೭, ೫-೧೧

K